ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ




ಕಾಂ. ಸುಕೋಮಲ ಸೇನ್
ಲಾಲ್ ಸಲಾಂ

ಸಂಪುಟ 11 | ಸಂಚಿಕೆ 49 | ಪುಟ 16 | ನವೆಂಬರ್ 27–ಡಿಸೆಂಬರ್ 03, 2017 | ರೂ. 10/- web: www.janashakthi.co.in | e-mail : js_weekly@yahoo.com





ಸಾಲ ಮನ್ನಾ, ಲಾಭದಾಯಕ ಬೆಲೆಗೆ ಕಾನೂನು ಮಂಡಿಸಿದ ಕಿಸಾನ್ ಸಂಸತ್



ಮೇಲ್ಜಾತಿ ಓಟ್ ಬ್ಯಾಂಕ್‌ಗಾಗಿ ಪದ್ಮಾವತಿ

ಮೋದಿ ಅಂಗಲಾಚಿ ಪಡೆದ ಮೂಡಿಸ್ ರೇಟಿಂಗ್



ನೈಸ್ ಅಕ್ರಮವೆಸಗಿದವರ ಮೇಲೆ ಕ್ರಮ ಜರುಗಿಸಿ

ಬೆಂಗಳೂರಿಗರ ಸಮಸ್ಯೆಗಳ ಪರಿಹಾರಕ್ಕಾಗಿ



ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು





ಅಪ್ರತಿಮ ಕಾರ್ಮಿಕ ಮುಖಂಡ ಕಾಂ. ಸುಕೋಮಲ್ ಸೇನ್ ನಿಧನ



ಕಾರ್ಮಿಕ ಆಂದೋಲನ ಒಬ್ಬ ಹಿರಿಯ ಮುಖಂಡರನ್ನು, ಒಬ್ಬ ಮೇಧಾವಿ ದೃಷ್ಟಾರನನ್ನು ಮತ್ತು ಒಬ್ಬ ಮಹಾನ್ ಬೋಧಕರನ್ನು ಕಳೆದುಕೊಂಡಿದೆ –ಸಿಐಟಿಯು ಶ್ರದ್ಧಾಂಜಲಿ

ಹಿರಿಯ ಕಾರ್ಮಿಕ ನೇತಾರ, ದೇಶದಲ್ಲಿ ರಾಜ್ಯಸರಕಾರಿ ನೌಕರರ ಆಂದೋಲನವನ್ನು ಕಟ್ಟಿ ಬೆಳೆಸಿದ ಮತ್ತು ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನದಲ್ಲೂ ನೇತೃತ್ವ ನೀಡಿರುವ ಸುಕೋಮಲ್ ಸೇನ್ ನವಂಬರ್ 22ರಂದು ನಿಧನರಾಗಿದ್ದಾರೆ. ಅವರಿಗೆ 83 ವರ್ಷ ವಯಸ್ಸಾಗಿತ್ತು. ಇತ್ತೀಚೆಗೆ ಬಹಳ ಸಮಯದಿಂದ ಅವರು ಅನಾರೋಗ್ಯದಿಂದ ನರಳುತ್ತಿದ್ದರು.

ಅಖಿಲಭಾರತ ರಾಜ್ಯ ಸರಕಾರಿ ನೌಕರರ ಫೆಡರೇಶನ್ 1960ರಲ್ಲಿ ಆರಂಭವಾದಾಗ ಅದರ ಸ್ಥಾಪಕ ಮುಖಂಡರಲ್ಲಿ ಒಬ್ಬರಾಗಿದ್ದ ಕಾಂ. ಸೇನ್ 1982ರಿಂದ 2008 ರ ವರೆಗೆ ಅದರ ಪ್ರಧಾನ ಕಾರ್ಯದರ್ಶಿಯಾಗಿದ್ದರು. ನಂತರ ನಿಧನದ ವರೆಗೂ ಅದರ ಹಿರಿಯ ಉಪಾಧ್ಯಕ್ಷರಾಗಿದ್ದರು.

ದೇಶದ ಕಾರ್ಮಿಕ ಆಂದೋಲನಕ್ಕೆ ಅವರ ಒಂದು ಬಹುಮುಖ್ಯ ಕೊಡುಗೆ ಎಂದರೆ "ವರ್ಕಿಂಗ್ ಕ್ಲಾಸ್ ಆಫ್ ಇಂಡಿಯ: ಹಿಸ್ಟರಿ ಆಫ್ ಎಮರ್ಜೆನ್ಸ್ ಅಂಡ್ ಮೂವ್‌ಮೆಂಟ್' 1830–2010(ಭಾರತದ ಕಾರ್ಮಿಕ ವರ್ಗ: ಉದಯ ಮತ್ತು ಆಂದೋಲನದ ಇತಿಹಾಸ) ಎಂಬ ಅಮೂಲ್ಯ ಕೃತಿ.

ಎರಡು ಅವಧಿಗಳಲ್ಲಿ ಅವರು ಸಿಪಿಐ(ಎಂ) ನಿಂದ ರಾಜ್ಯಸಭಾ ಸದಸ್ಯರೂ ಆಗಿದ್ದರು. 1952ರಲ್ಲಿ ಕಮ್ಯುನಿಸ್ಟ್ ಪಕ್ಷ ಸೇರಿದ್ದ ಅವರು ಬಹಳ ಸಮಯದ ವರೆಗೆ ಸಿಪಿಐ(ಎಂ) ಕೇಂದ್ರ ಸಮತಿ ಸದಸ್ಯರಾಗಿದ್ದರು. ನಿಧನದ ವೇಳೆಗೆ ಪಕ್ಷದ ಕೇಂದ್ರೀಯ ಹತೋಟಿ ಅಯೋಗದ ಅಧ್ಯಕ್ಷರಾಗಿದ್ದು, ಆಪ್ರಯುಕ್ತ ಕೇಂದ್ರ ಸಮಿತಿ ಸದಸ್ಯರಾಗಿದ್ದರು.

ಕಾಂ. ಸುಕೋಮಲ್ ಸೇನ್ ಒಬ್ಬ ಬದ್ಧ ಮಾರ್ಕ್ಸ್‌ವಾದಿ–ಲೆನಿನ್‌ವಾದಿ ಆಗಿದ್ದರು ಮತ್ತು ಒಬ್ಬ ಅಪ್ರತಿಮ ಕಾರ್ಮಿಕ ಮುಖಂಡರಾಗಿದ್ದರು ಎಂದು ಅವರ ನಿಧನಕ್ಕೆ ಆಳವಾದ ದುಃಖ ವ್ಯಕ್ತಪಡಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ ಅರ್ಪಿಸಿದೆ.

ಕಾರ್ಮಿಕ ಆಂದೋಲನದ ಹಿರಿಯ ಚೇತನ

ಕಾಂ. ಸುಕೋಮಲ್ ಸೇನ್ ದೇಶದ ಕಾರ್ಮಿಕ ಮತ್ತು ನೌಕರರ ಆಂದೋಲನಕ್ಕೆ ಸೈದ್ಧಾಂತಿಕವಾಗಿಯೂ, ಸಂಘಟನಾತ್ಮಕವಗಿಯೂ ಅಪಾರ ಕೊಡುಗೆ ನೀಡಿರುವ ದುಡಿಯುವ ಜನಗಳ ಐಕ್ಯತೆಯನ್ನು ಕಟ್ಟಿ, ಆಂದೋಲನವನ್ನು ವರ್ಗನೋಟದಿಂದ ಸಾಗುವಂತೆ ಮಾಡಿರುವ ಹಿರಿಯ ಚೇತನಗಳಲ್ಲಿ ಒಬ್ಬರು ಎಂದು ಸಿಐಟಿಯು ಪರವಾಗಿ ಶ್ರದ್ಧಾಂಜಲಿ ಅರ್ಪಿಸುತ್ತ ಪ್ರಧಾನ ಕಾರ್ಯದರ್ಶಿ ತಪನ್ ಸೇನ್ ಹೇಳಿದ್ದಾರೆ.

ಅವರು ಬಂಡವಾಳಶಾಹಿ ವ್ಯವಸ್ಥೆ ತನ್ನ ವಿವಿಧ ಘಟ್ಟಗಳಲ್ಲಿ ಅನಸರಿಸಿದ ಧೋರಣೆಗಳನ್ನು ಸತತವಾಗಿ ಬಯಲು ಮಾಡುತ್ತ ಬಂದವರು.

ಸರಕಾರಿ ನೌಕರರ ಸಂಘಟನೆಯ ಸ್ಥಾಪಕ ಮುಖಂಡರಾಗಿ ಅದರಲ್ಲಿ ಪ್ರಮುಖ ಪಾತ್ರ ವಹಿಸಿದ್ದಲ್ಲದೆ, ಕಾಂ. ಸೇನ್ ಅವರು ಇತರ ವಲಯಗಳಲ್ಲೂ ಕಾರ್ಮಿಕ ಸಂಘಟನೆಗಳನ್ನು ಕಟ್ಟುವಲ್ಲಿ, ಅವಕ್ಕೆ ಮುಖಂಡತ್ವ ಮತ್ತು ಮಾರ್ಗದರ್ಶನ ನೀಡುವಲ್ಲಿ ಸಕ್ರಿಯರಾಗಿದ್ದರು. ಅವರು ದಶಕಗಳ ಕಾಲ ಸಿಐಟಿಯುನ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದರು, 2010ರಲ್ಲಿ ಚಂಡೀಗಡ ಸಮಮೇಳನದಲ್ಲಿ ಸಿಐಟಿಯು ನ ಉಪಾಧ್ಯಕ್ಷರಾಗಿ ಆಯ್ಕೆಯಾದರು. 2016 ರ ವರೆಗೆ ಆ ಸ್ಥಾನದಲ್ಲಿದ್ದ ಅವರನ್ನು ಪುರಿಯಲ್ಲಿ ನಡೆದ 15ನೇ ರಾಷ್ಟ್ರೀಯ ಸಮ್ಮೇಳನ ಸಿಐಟಿಯುನ ರಾಷ್ಟ್ರೀಯ ಕಾರ್ಯದರ್ಶಿ ಮಂಡಳಿಗೆ ಖಾಯಂ ಆಹ್ವಾನಿತರಾಗಿ ಚುನಾಯಿಸಿತು.

ಕಾಂ.ಸೇನ್ ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನದಲ್ಲೂ ಒಬ್ಬ ಜನಪ್ರಿಯ ವ್ಯಕ್ತಿಯಾಗಿದ್ದರು. ಅವರು 1982ರಲ್ಲಿ ಆಗಿನ ಝೆಕೊಸ್ಲೊವಾಕಿಯಾದಲ್ಲಿದ್ದ ಸಾರ್ವಜನಿಕ ಮತ್ತು ಸಂಬಂಧಪಟ್ಟ ನೌಕರರ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘದ ನಿರ್ದೇಶಕ ಸಮಿತಿಯ ಸದಸ್ಯರಾಗಿ ಅಂತರ್ರಾಷ್ಟ್ರೀಯ ಕಾರ್ಮಿಕರಂಗವನ್ನು ಪ್ರವೇಶಿಸಿದರು. 1996ರಲ್ಲಿ ಅವರು ಈ ಸಂಘದ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾಗಿ, 2009ರಲ್ಲಿ ಆ ಹುದ್ದೆಯಿಂದ ನಿವೃತ್ತರಾಗುವ ವರೆಗೂ ವಿವಿಧ ದೇಶಗಳಲ್ಲಿ ಸರಕಾರಿ ನೌಕರರುಮತ್ತು ಸಾರ್ವಜನಿಕ ವಲಯದ ನೌಕರರ ಆಂದೋಲನವನ್ನು ಮತ್ತು ಚಟುವಟಿಕೆಗಳನ್ನು ಸಂಯೋಜಿಸುವಲ್ಲಿ ಮುಂಚೂಣಿ ಪಾತ್ರ ವಹಿಸಿದರು.

ಸೈದ್ಧಾಂತಿಕ ಕೆಲಸ

ಕಾರ್ಮಿಕ ಆಂದೋಲನದ ಸಂಘಟಕರಾಗಿ ಮತ್ತು ಮುಂಚೂಣಿ ಮುಖಂಡರಾಗಿ ಮಾತ್ರವಲ್ಲ, ಕಾರ್ಮಿಕ ಆಂದೋಲನದ ಸೈದ್ಧಾಂತಿಕ ಹೂರಣವನ್ನು ಶ್ರೀಮಂತಗೊಳಿಸುವಲ್ಲಿಯೂ ಅವರ ಪಾತ್ರ ಅಪ್ರತಿಮ ಎಂದು ತಪನ್ ಸೇನ್ ನೆನಪಿಸಿಕೊಂಡಿದ್ದಾರೆ. ಮೇಲೆ ಹೇಳಿದ 1830ರಿಂದ 2010ರ ವರೆಗಿನ ಭಾರತ ಕಾರ್ಮಿಕ ಅಂದೋಲನದ ಇತಿಹಾಸವನ್ನು ಪ್ರಸ್ತುತ ಪಡಿಸುವ ಅವರ ಮೇರುಕೃತಿ ಭಾರತದ ಹಲವು ಭಾಷೆಗಳಲ್ಲಿ ಪ್ರಕಟವಾಗಿದೆ. ಅಲ್ಲದೆ " ಭಾರತದಲ್ಲಿ ಮೇದಿನ ಮತ್ತು ಎಂಟು ಗಂಟೆಗಳ ಹೋರಾಟ", "ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಇತಿಹಾಸ", ವಿಶ್ವ ಕಾರ್ಮಿಕ ಸಂಘಗಳ ಒಕ್ಕೂಟ (ಡಬ್ಲ್ಯುಎಫ್‌ಟಿಯು)ನ 1945ರಲ್ಲಿ ಸ್ಥಾಪನಾ ಮಹಾಧಿವೇಶನದಿಂದ 2011ರ ವಿಶ್ವ ಮಹಾಧಿವೇಶನದ ವರೆಗಿನ ಇತಿಹಾಸದ ರೂಪುರೇಷೆಯನ್ನು ಕೊಡುವ "ಅಂತರ್ರಾಷ್ಟ್ರೀಯ ಕಾರ್ಮಿಕ ಆಂದೋಲನ– ವರ್ಗಶಾಮೀಲಿಗೆ ಎದುರಾಗಿ ವರ್ಗಹೋರಾಟದ ಚಲನಶೀಲತೆ" ಅವರ ಇತರ ಪ್ರಮುಖ ಕೃತಿಗಳು.

ಇತರ ಹಲವು ವಿಷಯಗಳ ಮೇಲೂ, ಭಾರತೀಯ ಸಮಾಜದಲ್ಲಿ ಸಂಸ್ಕೃತಿ ಮತ್ತು ಸಾಮಾಜಿಕ ಕ್ರಾಂತಿಯ ಪ್ರಶ್ನೆ, ಜಾತಿ, ಧರ್ಮ ಮತ್ತು ಭಾರತೀಯ ಸಮಾಜ, ಫ್ಯಾಸಿಸಂ ಇತ್ಯಾದಿಗಳ ಮೇಲೆ ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಪತ್ರಿಕೆಗಳಲ್ಲಿ ಅವರ ಹಲವು ಲೇಖನಗಳು ಪ್ರಕಟವಾಗಿವೆ. ಅವರು 1979ರಲ್ಲಿ ಆರಂಭವಾದ ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಮುಖಪತ್ರಿಕೆಯಾದ 'ಎಂಪ್ಲಾಯೀಸ್ ಫೋರಂ'ನ ಸಂಪಾದಕರಾಗಿ ಮೂರು ದಶಕಗಳಕಾಲ ಕೆಲಸ ಮಾಡಿದ್ದರು. ಅವರ ಇತ್ತೀಚಿನ ಕೃತಿ ಎಂದರೆ ಅಕ್ಟೋಬರ್ ಕ್ರಾಂತಿ ಮತ್ತು ನಂತರ ಬೆಳವಣಿಗೆಗಳ ಕುರಿತ ಎರಡು ಸಂಪುಟಗಳು.

ಕಾಮ್ರೇಡ್ ಸುಕೋಮಲ್ ಸೇನ್ ನಿಧನದೊಂದಿಗೆ ಕಾರ್ಮಿಕ ಆಂದೋಲನ ಒಬ್ಬ ಹಿರಿಯ ಮುಖಂಡರನ್ನು, ಒಬ್ಬ ಮೇಧಾವಿ ದೃಷ್ಟಾರನನ್ನು ಮತ್ತು ಒಬ್ಬ ಮಹಾನ್ ಬೋಧಕರನ್ನು ಕಳೆದುಕೊಂಡಿದೆ ಎಂದು ಶ್ರದ್ಧಾಂಜಲಿ ಅರ್ಪಿಸುತ್ತ, ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಕಾರ್ಮಿಕ ಆಂದೋಲನ ಭಾರೀ ಭೌತಿಕ ಮತ್ತು ಸೈದ್ಧಾಂತಿಕ ದಾಳಿಗಳನ್ನು ಎದುರಿಸುತ್ತಿರುವ ಪ್ರಸಕ್ತ ಕಾಲಘಟ್ಟದಲ್ಲಿ ಅವರಿಲ್ಲದಿರುವುದು ಒಂದು ತುಂಬಲಾಗದ ನಷ್ಟ ಎಂದಿದ್ದಾರೆ.

ಬಾಬ್ರಿ ಮಸೀದಿ ಧ್ವಂಸಕ್ಕೆ 25 ವರ್ಷ–ಡಿಸೆಂಬರ್ 6 ನ್ನು ಕರಾಳ ದಿನವಾಗಿ ಆಚರಿಸಲು ಎಡಪಕ್ಷಗಳ ಕರೆ

ಡಿಸೆಂಬರ್ 6, 1992ರಂದು ಬಾಬ್ರಿ ಮಸೀದಿಯ ಉದ್ದೇಶಪೂರ್ವಕ ಧ್ವಂಸ ಸ್ವತಂತ್ರ ಭಾರತದ ಚರಿತ್ರೆಯ ಕ್ಯಾಲೆಂಡರಿನಲ್ಲಿ ಒಂದು ಕರಾಳ ಭಾನುವಾರ. ಒಂದು ಕಾಂಗ್ರೆಸ್ ಕೇಂದ್ರ ಸರಕಾರ ಮತ್ತು ಉತ್ತರಪ್ರದೇಶದ ಒಂದು ಶಾಮೀಲುಕೋರ ಬಿಜೆಪಿ ಸರಕಾರದ ಅಡಿಯಲ್ಲಿ ಅಧಿಕಾರಸ್ಥರು ಮತ್ತು ಕಾನೂನು ಜಾರಿಯ ಸಂಸ್ಥೆಗಳ ಮೂಗಿನ ಕೆಳಗೇ ನಡೆದಿರುವ ಈ ಭಂಡ ಕೃತ್ಯ ಆಧುನಿಕ ಭಾರತೀಯ ಗಣತಂತ್ರದ ಜಾತ್ಯತೀತ ಪ್ರಜಾಸತ್ತಾತ್ಮಕ ಬುನಾದಿಯ ಮೇಲೆ ಮಾಡಿರುವ ಅತ್ಯಂತ ತೀವ್ರವಾದ ಪ್ರಹಾರವಾಗಿಯೇ ಉಳಿದಿದೆ ಎಂದು ಆರು ಎಡಪಕ್ಷಗಳು ನವಂಬರ್ 22ರಂದು ನೀಡಿರುವ ಜಂಟಿ ಹೇಳಿಕೆ ನೆನಪಿಸಿದೆ.

ಈ ಡಿಸೆಂಬರ್ 6ರಂದು ಈ ಕರಾಳ ಕೃತ್ಯ ನಡೆದು 25 ವರ್ಷಗಳಾಗುತ್ತವೆ. ಅಂದು ಅದನ್ನು ಕರಾಳ ದಿನವಾಗಿ ಆಚರಿಸಬೇಕು, ಮತ್ತು ಈಗಿನ ಸಂದರ್ಭದಲ್ಲಿ ಕೇಂದ್ರದಲ್ಲಿನ ಮತ್ತು ಹಲವು ರಾಜ್ಯಗಳಲ್ಲಿನ ಬಿಜೆಪಿ ಸರಕಾರಗಳು ಪೋಷಿಸುತ್ತಿರುವ ಮತ್ತು ಪ್ರೋತ್ಸಾಹಿಸುತ್ತಿರುವ ಕೋಮುವಾದಿ ಧ್ರುವೀಕರಣದ ವಿರುದ್ಧ ಹೋರಾಟವನ್ನು ಬಲಪಡಿಸಬೇಕು ಎಂದು ಸಿಪಿಐ(ಎಂ), ಸಿಪಿಐ, ಸಿಪಿಐ(ಎಂ.ಎಲ್) –ಲಿಬರೇಶನ್, ಆರ್‌ಎಸ್‌ಪಿ, ಎಐಎಫ್‌ಬಿ ಮತ್ತು ಎಸ್‌ಯುಸಿಐ(ಸಿ) ತಮ್ಮೆಲ್ಲ ಘಟಕಗಳಿಗೆ ಕರೆ ನೀಡಿವೆ.

ಬಾಬ್ರಿ ಮಸೀದಿ ಧ್ವಂಸ ಆಧುನಿಕ ಗಣತಂತ್ರವನ್ನು ಕ್ರೋಡೀಕರಿಸುವುದಂತೂ ದೂರದ ಮಾತು, ಬದಲಿಗೆ ಅದರ ಬುನಾದಿಯನ್ನೇ ಧ್ವಂಸ ಮಾಡಲು, ಮತ್ತು ಅದರ ಬದಲು ಒಂದು ಸರ್ವಾಧಿಕಾರಿ, ಉನ್ಮತ್ತ ಅಸಹಿಷ್ಣು, ಫ್ಯಾಸಿಸ್ಟ್ ಮಾದರಿಯ ಆರೆಸ್ಸೆಸ್‌ನ ಸೈದ್ಧಾಂತಿಕ ಯೋಜನೆಯಾದ 'ಹಿಂದೂ ರಾಷ್ಟ್ರ'ವನ್ನು ತರಲು ಕಟಿಬದ್ಧವಾದ ಉನ್ಮತ್ತ ಶಕ್ರಿಗಳಿವೆ ಎಂಬ ವಾಸ್ತವತೆಯನ್ನು ಎತ್ತಿ ತೋರಿದೆ.

ಅಂದು ಬಿಜೆಪಿ ಮುಖಂಡರ ನೇತೃತ್ವದಲ್ಲಿ ಆರೆಸ್ಸೆಸ್ ಪ್ರಾಯೋಜಿತ ಹಿಂದುತ್ವ ಖಾಸಗಿ ಪಡೆಗಳು ಬಾಬ್ರಿ ಧ್ವಂಸ ಕೃತ್ಯವನ್ನು ನಡೆಸಿದವು. ಮತ್ತು ಇಂದು ಇಂತಹ ಖಾಸಗಿ ಪಡೆಗಳಿಗೆ ಹೆಚ್ಚಿನ ಧೈರ್ಯಬಂದು, ಅಧಿಕಾರಸ್ಥ ಬಿಜೆಪಿಯ ಕೃಪಾಪೋಷಣೆ ಪಡೆದು ತಾವು ಹೇಳಿದ್ದೇ ಕಾನೂನು ಎಂಬಂತೆ ವರ್ತಿಸುತ್ತಿವೆ. ಇಂದಿನ ಗೋರಕ್ಷಕರ ಹುಚ್ಚಾಟ ಸಾಗಿದೆ, ಗೋವಧೆಯ ಸುಳ್ಳು ಆಪಾದನೆಗಳನ್ನು ಸೃಷ್ಟಿಸಿ ದಲಿತರು ಮತ್ತು ಮುಸ್ಲಿಮರ ಮೇಲೆ ದಾಳಿ ಮಾಡುತ್ತಿದ್ದಾರೆ. ನೈತಿಕ ಪೋಲಿಸ್‌ಗಿರಿಯ ಪಡೆಗಳು ನಮ್ಮ ಯುವಜನ ಏನು ತೊಡಬೇಕು, ಏನು ತಿನ್ನಬೇಕು ಮತ್ತು ಯಾರ ಗೆಳೆತನ ಮಾಡಬೇಕು ಎಂದು ವಿಧಿಸುತ್ತಿದ್ದಾರೆ. ದೇಶದ ಕಾನೂನನ್ನು ಎತ್ತಿ ಹಿಡಿದು ಈ ಖಾಸಗಿ ಪಡೆಗಳನ್ನು ನಿಷೇಧಿಸುವ ಬದಲು ಹಿರಿಯ ಬಿಜೆಪಿ ಮುಖಂಡರು, ಕೇಂದ್ರ ಮತ್ತು ರಾಜ್ಯ ಸರಕಾರಗಳ ಮಂತ್ರಿಗಳು ಕೂಡ ಬಹಿರಂಗವಾಗಿಯೇ, ಇಂತಹ ಖಾಸಗಿ ಪಡೆಗಳನ್ನು ಅನುಮೋದಿಸಿದ್ದಾರೆ, ಪೋಷಿಸಿದ್ದಾರೆ ಮತ್ತು ಪ್ರೋತ್ಸಾಹಿಸಿದ್ದಾರೆ ಮತ್ತು ಅವರ ಹಿಂಸಾಕೃತ್ಯಗಳನ್ನು ಸಕಾರಣ ಎಂದಿದ್ದಾರೆ ಅಥವ ಕೊಂಡಾಡಿದ್ದಾರೆ ಕೂಡ ಎಂದು ಎಡಪಕ್ಷಗಳು ನೆನಪಿಸಿವೆ.

ಭಾರತದ ಜಾತ್ಯತೀತ ಪ್ರಜಾಪ್ರಭುತ್ವಕ್ಕೆ ಈ ಕಳಂಕ ಹತ್ತಿ ಕಾಲು ಶತಮಾನ ಕಳೆದರೂ ಹೀಗೆ ದೇಶದ ಕಾನೂನನ್ನು ಭಂಡತನದಿಂದ ಉಲ್ಲಂಘಿಸಿರುವ, ಭಾರತದ ಜಾತ್ಯತೀತ ಪ್ರಜಾಪ್ರಭುತ್ವ ಬುನಾದಿಯನ್ನು ಎಂದೂ ಸರಿಪಡಿಸಲಾಗದ ರೀತಿಯಲ್ಲಿ ಹಾಳುಗೆಡವಿರುವ ಈ ಧ್ವಂಸ ಕಾರ್ಯವನ್ನು ಸಂಘಟಿಸಿದವರು ಮತ್ತು ಎಸಗಿದವರ ಮೇಲೆ ಯಾವುದೇ ಕ್ರಮವನ್ನು ಇದುವರೆಗೂ ಕೈಗೊಂಡಿಲ್ಲ. ಭಾರತದಲ್ಲಿನ ಪ್ರಜಾಪ್ರಭುತ್ವ ಪ್ರಿಯರು ಈ ಅನ್ಯಾಯವನ್ನು ಎಂದೂ ಮರೆಯಲು ಸಾಧ್ಯವಿಲ್ಲ,, ಇದನ್ನು ಎಸಗಿದವರನನು ಶಿಕ್ಷಿಸುವ ವರೆಗೂ ಇದಕ್ಕಾಗಿ ಹೋರಾಡುತ್ತಾರೆ ಎಂದು ಎಡಪಕ್ಷಗಳು ಹೇಳಿವೆ.

ಡಿಸೆಂಬರ್ 6 ಸ್ವತಂತ್ರ ಭಾರತಕ್ಕೆ ಅದರ ಸಂವಿಧಾನವನ್ನು ಕೊಟ್ಟ ಕರಡು ರಚನಾ ಸಮಿತಿಯ ಅಧ್ಯಕ್ಷರಾಗಿದ್ದ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ನಿಧನ ವಾರ್ಷಿಕದ ದಿನ ಕೂಡ. ಎಡಪಕ್ಷಗಳು ಈ ದಿನದಂದು ಕೋಮುವಾದಿ ಶಕ್ತಿಗಳು ದೇಶಾದ್ಯಂತ ದಲಿತರ ಮೇಲೆ ತೀಕ್ಷ್ಣಗೊಳಿಸುತ್ತಿರುವ ಅತ್ಯಾಚಾರಗಳ ವಿರುದ್ಧ ಮತ್ತು ನಮ್ಮ ಸಂವಿಧಾನದ ಜಾತ್ಯತೀತ ಪ್ರಜಾಪ್ರಭುತ್ವವಾದಿ ಮೌಲ್ಯಗಳ ವಿರುದ್ಧ ನಡೆಸಿರುವ ಪ್ರಹಾರಗಳ ವಿರುದ್ಧ ಒಂದು ಪ್ರಚಾರಾಂದೋಲನವನ್ನು ನಡೆಸುವುದಾಗಿ ಈ ಹೇಳಿಕೆ ತಿಳಿಸಿದೆ. ಈ ಪ್ರಹಾರಗಳನ್ನು ಜನಗಳನ್ನು ಅಣಿನೆರೆಸುವ ಮೂಲಕ, ಜಾತ್ಯತೀತ ಪ್ರಜಾಪ್ರಭುತ್ವ ನೀತಿಗಳನ್ನು, ನಮ್ಮ ಸಮ್ಮಿಶ್ರ ಸಂಸ್ಕೃತಿಯನ್ನು ರಕ್ಷಿಸುವ ಹೋರಾಟಗಳ ಮೂಲಕ ಮತ್ತು ಜನಗಳನ್ನು ಕೋಮು ಆಧಾರದಲ್ಲಿ ಒಡೆಯುವ ಪ್ರತಿಯೊಂದು ಪ್ರಯತ್ನವನ್ನು ಪ್ರತಿರೋಧಿಸುವ ಮೂಲಕ ಎದುರಿಸಬೇಕು ಎಂದು ಅವು ಹೇಳಿವೆ.

ಈ ಕರಾಳ ದಿನವನ್ನು ವಿವಿಧ ರಾಜ್ಯಗಳಲ್ಲಿ ರಾಜ್ಯ ಮಟ್ಟದಲ್ಲಿ ನಿರ್ಧರಿಸದಂತೆ ಆಚರಿಸಬೇಕು ಎಂದು ಈ ಆರು ಎಡಪಕ್ಷಗಳು ಕರೆ ನೀಡಿವೆ.

'ಗೋರಕ್ಷಕ'ರ ಗುಂಡಿಗೆ ಬಲಿಯಾದ ಉಮ್ಮರ್ ಖಾನ್ ಮನೆಗೆ ಎಐಕೆಎಸ್ ನಿಯೋಗದ ಭೇಟಿ

ಪರಿಹಾರ ಒದಗಿಸಲು, ಅಪರಾಧಿಗಳನ್ನೆಲ್ಲ ಬಂಧಿಸಿ ಶಿಕ್ಷಿಸಲು, ಗೋರಕ್ಷಕ ಸಂಘಟನೆಗಳ ನಿಷೇಧಕ್ಕೆ ಆಗ್ರಹ

ಅಖಿಲ ಭಾರತ ಕಿಸಾನ್ ಸಭಾ(ಎಐಕೆಎಸ್)ದ ಅಧ್ಯಕ್ಷ ಅಶೋಕ ಧವಳೆಯವರ ನೇತೃತ್ವದ ನಿಯೋಗವೊಂದು ನವಂಬರ್10 ರಂದು ರಾಜಸ್ತಾನದ ಆಲ್ವರ್‌ನಲ್ಲಿ ಗೋರಕ್ಷಕರೆನ್ನುವವರು ಹೊಡೆದು ಸಾಯಿಸಿದ ಉಮ್ಮರ್ ಖಾನ್ ಕುಟುಂಬವನ್ನು ಭೇಟಿ ಮಾಡಲು ನವಂಬರ್ 17ರಂದು ಭರತ್‌ಪುರ್ ಜಿಲ್ಲೆಯ ಘಟ್ಮಿಕಕ್ಕೆ ಭೇಟಿ ನೀಡಿತು.

ಎಐಕೆಎಸ್ ನಿಯೋಗ ಅಲ್ವರ್ ಎಸ್‌ಪಿ ರಾಹುಲ್ ಪ್ರಕಾಶ್ ಮತ್ತು ಡಿವೈಎಸ್‌ಪಿ ಅನಿಲ್ ಬೇಲಿವಾಡ್‌ರನ್ನು ಭೇಟಿ ಮಾಡಿ ಈ ಅಪರಾಧ ಎಷ್ಟು ಗಂಭೀರವಾದದ್ದು ಎಂದು ಚರ್ಚಿಸಿತು ಮತ್ತು ಅಪರಾಧಿಗಳ ವಿರುದ್ಧ ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿತು.

ಎಸ್‌ಪಿ ಯವರ ಪ್ರಕಾರ ಮರಣೋತ್ತರ ಪರೀಕ್ಷೆ ಎರಡು ಬುಲೆಟ್ ಗಾಯಗಳು ಸಾವಿಗೆ ಕಾರಣವಾದವು ಎಂದು ದೃಢ ಪಡಿಸಿದೆ. ಇಬ್ಬರನ್ನು ಈಗಾಗಲೇ ಬಂಧಿಸಲಾಗಿದೆ ಮತ್ತು ಇನ್ನೂ ಐವರು ಸಂದೇಹಾಸ್ಪದವರನ್ನು ಹುಡುಕಲಾಗುತ್ತಿದೆ. ಈ ಘಟನೆಗೆ ಬಲಿಯಾದವರಿಗೆ ಪರಿಹಾರ ಒದಗಿಸುವ ಬಗ್ಗೆಯೂ ಕ್ರಮ ಕೈಗೊಳ್ಳುವ ಬಗ್ಗೆ ಯೋಚಿಸಲಾಗುತ್ತದೆಯಂತೆ.

ಈ ಕುಟುಂಬ ಅತ್ಯಂತ ಬಡತನದಲ್ಲಿದೆ, ತೀವ್ರ ಸಂಕಟಗಳನ್ನು ಅನುಭವಿಸುತ್ತದೆ ಎಂದು ನಿಯೋಗಕ್ಕೆ ಕಂಡು ಬಂತು. ಹಾಲು ಮಾರಿ ಮತ್ತು ದಿನಗೂಲಿಯಿಂದ ಜೀವನ ಸಾಗಿಸುತ್ತಿದೆ. ಈ ಇಡೀ ಹಳ್ಳಿಯೇ ಬಡತನಗ್ರಸ್ತವಾಗಿದೆ. ಸುಮಾರು 450 ಮನೆಗಳಿದ್ದು 400 ರಷ್ಟು ಮುಸ್ಲಿಂ ಕುಟುಂಬಗಳಿವೆ. ಎಮ್ಮೆಗಳಲ್ಲದೆ ಸುಮಾರು 1000 ಹಸುಗಳಿವೆ.

ಪುಟ 14 ನೋಡಿ

ನೈಸ್ ಹಗರಣ: ಒಪ್ಪಂದ ರದ್ದು ಮಾಡಿ ತಪ್ಪಿತಸ್ತರ ಮೇಲೆ ಕ್ರಮ ಕೈಗೊಳ್ಳಬೇಕು

ಸಂಪಾದಕೀಯ

ನೈಸ್ ಹಗರಣ ಕರ್ನಾಟಕದಲ್ಲೇ ಅತಿ ದೊಡ್ಡ ಹಗರಣ ಎನ್ನಲಾಗುತ್ತದೆ. ಇದು ಸುಮಾರು 20 ಸಾವರ ಕೋಟಿ ರೂ. ಹಗರಣ ಎನ್ನಲಾಗುತ್ತದೆ. ಈ ಹಗರಣದಲ್ಲಿ ಸರಕಾರದ ಕಡೆಯಿಂದ ನಡೆದ ನೀತಿ–ನಿಯಮಗಳ ಉಲ್ಲಂಘನೆ, ನೈಸ್ ಕಂಪನಿಯ ಕಡೆಯಿಂದ ನಡೆದ ಒಪ್ಪಂದದ ಉಲ್ಲಂಘನೆಗೆ ಕರ್ನಾಟಕದಲ್ಲಂತೂ ಸಾಟಿಯಿಲ್ಲ. ಇದು ನವ–ಉದಾರವಾದದಡಿಯಲ್ಲಿ ತಾರಕಕ್ಕೇರುವ ಭ್ರಷ್ಟಾಚಾರಕ್ಕೆ ಅತ್ಯುತ್ತಮ ಉದಾಹರಣೆ. ಈಗ 'ಬೆಂಗಳೂರು– ಮೈಸೂರು ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿ) ಯೋಜನೆ ಸಂಬಂಧ 'ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್ ಪ್ರೈಸಸ್' (ನೈಸ್) ಜೊತೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದುಪಡಿಸುವಂತೆ ಸರ್ಕಾರಕ್ಕೆ ಕಾನೂನು ಇಲಾಖೆ ಶಿಫಾರಸು ಮಾಡಿದೆ. ಬಿಎಂಐಸಿ ಯೋಜನೆ ಕುರಿತಂತೆ ಅಧ್ಯಯನ ನಡೆಸಿದ್ದ ಕಾನೂನು ಸಚಿವ ಟಿ.ಬಿ. ಜಯಚಂದ್ರ ನೇತೃತ್ವದ ಸದನ ಸಮಿತಿ ವರದಿಯು ಕಳೆದ ವರ್ಷದ ಬೆಳಗಾವಿ ಅಧಿವೇಶನದಲ್ಲಿ ಮಂಡನೆಯಾಗಿತ್ತು. 392 ಪುಟಗಳ ಈ ಬೃಹತ್ ವರದಿ 22 ಅನುಚ್ಛೇದಗಳನ್ನು ಒಳಗೊಂಡಿದೆ.

ಈ ವರದಿಯನ್ನು ಪರಿಶೀಲಿಸಿದ ಕಾನೂನು ಇಲಾಖೆ, 'ಬಿಎಂಐಸಿ ಯೋಜನೆಗೆ ಸಂಬಂಧಿಸಿದಂತೆ ನೈಸ್ ಬಹಳಷ್ಟು ಷರತ್ತುಗಳನ್ನು ಉಲ್ಲಂಘಿಸಿರುವುದರಿಂದ ಒಪ್ಪಂದ ರದ್ದುಪಡಿಸಬೇಕು' ಎಂದು ಹೇಳಿದೆ. 'ಬಿಎಂಐಸಿ ಯೋಜನೆ ಅನುಷ್ಠಾನದಲ್ಲಿ ನೈಸ್ ಭಾರಿ ಅಕ್ರಮ ಎಸಗಿದೆ' ಎಂದು ಸದನ ಸಮಿತಿ ವರದಿಯಲ್ಲಿ ಹೇಳಿತ್ತು. ಈ ಅಕ್ರಮಗಳ ಕುರಿತು ಸಿಬಿಐ ಹಾಗೂ ಜಾರಿ ನಿರ್ದೇಶನಾಲಯದಿಂದ (ಇ.ಡಿ) ತನಿಖೆ ನಡೆಸಬೇಕೆಂದು ಸರ್ವಾನುಮತದಿಂದ ಶಿಫಾರಸು ಮಾಡಿತ್ತು. ಅಲ್ಲದೇ, ಸದನ ಸಮಿತಿ ವರದಿಯನ್ನು ಸಂಪೂರ್ಣವಾಗಿ ಅನುಷ್ಠಾನಗೊಳಿಸಬಹುದು ಎಂದೂ ಅಭಿಪ್ರಾಯಪಟ್ಟಿದೆ. ಬೆಂಗಳೂರು?ಮೈಸೂರು ಹೆದ್ದಾರಿ ಯೋಜನೆಗೆ 20,193 ಎಕರೆ ಜಮೀನು ಅಗತ್ಯವಿದೆ ಎಂದು ನೈಸ್ ಕ್ರಿಯಾ ಯೋಜನೆ ಒಪ್ಪಂದದಲ್ಲಿ ಹೇಳಲಾಗಿತ್ತು. ವಾಸ್ತವದಲ್ಲಿ ಅದಕ್ಕಿಂತಲೂ ಹೆಚ್ಚಿನ ಭೂಮಿ ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದೂ ಸದನ ಸಮಿತಿ ಹೇಳಿದೆ. 'ಬಿಎಂಐಸಿ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಎಪಿಎ) ವ್ಯಾಪ್ತಿಯಲ್ಲಿ ಮೂಲಸೌಕರ್ಯ ಅಭಿವೃದ್ಧಿಗಿಂತ ಅನಧಿಕೃತ ಬೆಳವಣಿಗೆಗಳು ಹೆಚ್ಚಾಗಿವೆ. ನೈಸ್ ಸಂಸ್ಥೆಗಾಗಿ ಸ್ವಾಧೀನ ಪಡಿಸಿಕೊಂಡಿದ್ದ 2,728 ಎಕರೆಯನ್ನು ಕೆಐಎಡಿಬಿಯ ನಿರಾಕ್ಷೇಪಣಾ ಪತ್ರ ಆಧರಿಸಿ ಭೂಸ್ವಾಧೀನದಿಂದ ಕೈಬಿಡಲಾಗಿದೆ. ನೈಸ್ ಪರವಾಗಿ ಭೂಸ್ವಾಧೀನದಿಂದ ಕೈಬಿಡಲಾಗಿರುವ ಭೂಮಿಯಲ್ಲಿ ಕೆಲವು ಪ್ರಭಾವಿಗಳು ವ್ಯಾಪಕ ವಿಸ್ತೀರ್ಣದ ಜಮೀನನ್ನು ಬೇನಾಮಿಯಾಗಿ ಹೊಂದಿದ್ದಾರೆ' ಎಂಬುದನ್ನೂ ವರದಿ ಉಲ್ಲೇಖಿಸಿದೆ. ಕಾನೂನು ಇಲಾಖೆಯ ಅಭಿಪ್ರಾಯಗಳನ್ನು ಪರಿಶೀಲಿಸಿ ಸಲಹೆ ನೀಡಲು ಸಾಮಾನ್ಯವಾಗಿ ಅಡ್ವೊಕೇಟ್ ಜನರಲ್ (ಎ.ಜಿ) ಅವರಿಗೆ ಕಳುಹಿಸಲಾಗುತ್ತದೆ. ಕಾನೂನು ಇಲಾಖೆ ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿ ತಿಂಗಳುಗಳೇ ಕಳೆದರೂ ನೈಸ್ ಸಂಸ್ಥೆಗೆ ಸಂಬಂಧಿಸಿದ ದಾಖಲೆಗಳು ಇನ್ನೂ ಅಡ್ವೊಕೇಟ್ ಜನರಲ್ ಅವರ ಕಚೇರಿಗೆ ತಲುಪಿಲ್ಲ.

ಬೆಂಗಳೂರು–ಮೈಸೂರು ಮಧ್ಯೆ 111 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ಕಾರಿಡಾರ್ ಈ ಯೋಜನೆ ಪ್ರಸ್ತುತತೆಯನ್ನೇ ಕಳೆದುಕೊಂಡಿದೆ. ಆದರೂ, ನೈಸ್ ಕಂಪನಿ 'ಫ್ರೇಮ್ವರ್ಕ್ ಅಗ್ರಿಮೆಂಟ್' ಬಳಸಿಕೊಂಡು ನ್ಯಾಯಾಲಯದಲ್ಲಿ ಯಶಸ್ವಿ ಹೋರಾಟ ನಡೆಸುತ್ತಿದೆ. ಸಾವಿರಾರು ಎಕರೆ ಭೂಮಿಯನ್ನು ವಶದಲ್ಲಿಟ್ಟುಕೊಂಡಿರುವ ಕಂಪನಿಯ ವೈಫಲ್ಯಗಳನ್ನು ಸದನ ಸಮಿತಿ ಯ ವರದಿ ಪಟ್ಟಿ ಮಾಡಿದೆ. 111 ಕಿ.ಮೀ. ಉದ್ದದ ಎಕ್ಸ್‌ಪ್ರೆಸ್ ಕಾರಿಡಾರ್, ಐದು ಟೌನ್ಶಿಪ್ಗಳು, 41 ಕಿ.ಮೀ. ಉದ್ದದ ಪೆರಿಫೆರಲ್ ರಸ್ತೆ ಹಾಗೂ 9.1 ಕಿ.ಮೀ. ಲಿಂಕ್ ರಸ್ತೆ ಒಳಗೊಂಡ ಈ ಯೋಜನೆಯಲ್ಲಿ ಆಗಿರುವ ಅಕ್ರಮಗಳನ್ನು ಸದನ ಸಮಿತಿ ಸಮಗ್ರವಾಗಿ ಮತ್ತು ಎಳೆಎಳೆಯಾಗಿ ಪಟ್ಟಿ ಮಾಡಿದೆ. ಸುಮಾರು 400 ಎಕರೆ ಭೂಮಿಯನ್ನು ನೈಸ್ ಕಂಪನಿ ಸ್ವಾಧೀನದಿಂದ ಸರಕಾರ ವಾಪಸ್ ಪಡೆಯಬೇಕು. ಯೋಜನೆ ಪೂರ್ಣವಾಗುವ ಮುನ್ನವೇ ಪೆರಿಫೆರಲ್ ಮತ್ತು ಲಿಂಕ್ ರಸ್ತೆಯಲ್ಲಿ ಟೋಲ್ ಸಂಗ್ರಹ ಮಾಡುತ್ತಿರುವುದು ಕಾನೂನುಬದ್ಧವಲ್ಲ ಎಂದೂ ವರದಿ ಹೇಳಿದೆ.

ಸದನ ಸಮಿತಿ ನೀಡಿರುವ ವರದಿಯಲ್ಲಿ ಪ್ರಸ್ತಾಪವಾಗಿರುವ ಅಂಶಗಳ ವಿವರ ಹೀಗಿದೆ ಎನ್ನಲಾಗಿದೆ:

– ಯೋಜನೆಗೆ ಭೂಸ್ವಾದೀನವಾದ 11,660 ಎಕರೆ ಜಮೀನನ್ನು ಭೂಸ್ವಾದೀನ ಪ್ರಕ್ರಿಯೆಯಿಂದ ಹೊರತುಪಡಿಸಬೇಕು.

– ಅನಧಿಕೃತವಾಗಿ ಸಂಗ್ರಹ ಮಾಡಿರುವ 1350 ಕೋಟಿ ರೂಗಳನ್ನು ಸರ್ಕಾರ ವಸೂಲಿ ಮಾಡಬೇಕು.

– ಯೋಜನೆಯ ಅನುಷ್ಠಾನಕ್ಕೆ ಮಾಡಿಕೊಂಡಿರುವ ತ್ರಿಪಕ್ಷೀಯ ಒಪ್ಪಂದ ಆತಂಕಕಾರಿ ಬೆಳವಣಿಗೆ.

–ಯೋಜನೆಯ ಅನುಷ್ಠಾನ ಮಾಡಿ 19 ವರ್ಷವಾದ್ರೂ ನೈಸ್ ಕಂಪನಿ ನಿರ್ದಿಷ್ಟ ವಿವರಗಳನ್ನು ಇನ್ನೂ ನೀಡಿರುವುದಿಲ್ಲ.

– ಬಂಡವಾಳ ಹೂಡಿಕೆಯ ಬ್ಯಾಲೆನ್ಸ್ ಶೀಟ್ ಗಳನ್ನು ಈವರೆಗೂ ಅಧಿಕೃತವಾಗಿ ಸಲ್ಲಿಸಿಲ್ಲ.

– ನೈಸ್ ಸಂಸ್ಥೆ ಬೆಂಗಳೂರು ವ್ಯಾಪ್ತಿಯನ್ನು ಹೊರತುಪಡಿಸಿ ಯಾವುದೇ ಪ್ರಗತಿ ಮಾಡದೇ, 4956 ಕೋಟಿ ರೂ ವಹಿವಾಟು ಮಾಡಿದೆ.

– ನೊಂದಣಿ ಮತ್ತು ಮುದ್ರಾಂಕ ಶುಲ್ಕದ ವಿನಾಯಿತಿ ಯನ್ನು 5688 ಎಕರೆಗೆ ಬದಲಾಗಿ 14337 ಎಕರೆಗೆ ನೀಡಲಾಗಿದೆ.

– ತಮ್ಮ ಸುಪರ್ಧಿಯಲ್ಲಿರುವ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆಯನ್ನು ಉತ್ತೇಜಿಸಿದ್ದಾರೆ.ಇದ್ರಿಂದ ಸರ್ಕಾರಕ್ಕೆ ಬರಬೇಕಾದ 250 ಕೋಟಿ ರೂ ನಷ್ಟವಾಗಿದೆ.

– ನ್ಯಾಯಾಲಯದ ಆದೇಶದಂತೆ ಯೋಜನೆ ಅನುಷ್ಠಾನ ಆಗಿಲ್ಲ. ಸೆಕ್ಷನ್ ಎ ವ್ಯಾಪ್ತಿಯ ಕಾಮಗಾರಿಗಳನ್ನು ನಿಯಮ ಬಾಹಿರವಾಗಿ ನಿಸೇಲ್ ಎಂಬ ಸಂಸ್ಥೆಗೆವಹಿಸಲಾಗಿದೆ.

ವರ್ಷದ ಹಿಂದೆ ಮಂಡಿಸಲಾದ ನೈಸ್ ವರದಿ ಕುರಿತು ಈ ವಾರ ವಿಧಾನ ಸಭೆಯಲ್ಲಿ ಚರ್ಚೆ ಆರಂಭವಾಗಿದೆ. ಕಳೆದ ವರ್ಷವೂ ವಿಧಾನಸಭೆಯಲ್ಲಿ ಈ ಬಗ್ಗೆ ಸುಧೀರ್ಘ ಚರ್ಚೆ ನಡೆದು ಸಿಬಿಐ ತನಿಖೆ ನಡೆಸುವಂತೆ ಎಲ್ಲ ಪಕ್ಷಗಳು ಒಕ್ಕೊರಲಿನಿಂದ ಒತ್ತಾಯಿಸಿದ್ದವು. ಚರ್ಚೆಯ ಸಂದರ್ಭದಲ್ಲಿ ಹಲವು ಸದಸ್ಯರು ಒಪ್ಪಂದವನ್ನು ರದ್ದು ಮಾಡಬೇಕು. ಅಲ್ಲದೆ ಒಪ್ಪಂದವನ್ನು ಉಲ್ಲಂಘಿಸಿ ನೈಸ್ ಕಂಪನಿ ಮಾಡುತ್ತಿರುವ ಅಕ್ರಮಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಎಂದು ಒತ್ತಾಯಿಸಿದ್ದಾರೆ. ಆದರೆ ಸರಕಾರ ಈ ಬಗ್ಗೆ ಮೀನಮೇಷ ಎಣಿಸುತ್ತಿರುವಂತೆ ಕಾಣುತ್ತಿದೆ. "ನೈಸ್ ಒಪ್ಪಂದ ರದ್ದುಪಡಿಸುವುದು ಸೂಕ್ಷ್ಮ ವಿಚಾರ. ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್ನಲ್ಲಿ ಅನೇಕ ತಕರಾರು ಅರ್ಜಿಗಳಿವೆ. ಅದನ್ನು ಗಮನದಲ್ಲಿಟ್ಟುಕೊಂಡು ಸದನ ಸಮಿತಿ ಮಾಡಿರುವ ಶಿಫಾರಸುಗಳನ್ನೂ ಪರಿಶೀಲಿಸಿ, ಕಾನೂನು ಇಲಾಖೆಯ ಸಲಹೆ ಪಡೆದು ಮುಂದಿನ ಕ್ರಮ ಕೈಗೊಳ್ಳುವುದಾಗಿ ಸಚಿವರು ತಿಳಿಸಿದರು.

ಈ ಬಗ್ಗೆ ಸರಕಾರ ಬೇಗನೇ ಧೃಢ ನಿರ್ಣಯ ಕೈಗೊಳ್ಳಬೇಕು. ಒಪ್ಪಂದ ರದ್ದತಿ ಮತ್ತು ನೈಸ್ ಕಂಫನಿ ಮೇಲೆ ಕಾನೂನು ಕ್ರಮವನ್ನು ವಿಳಂಬ ಮಾಡಬಾರದು. ನೈಸ್ ಕಂಪನಿ, ಅದರ ಒಡೆಯ ಖೇಣಿ ಮತ್ತು ಒಪ್ಪಂದವನ್ನು ಮೂರು ಪಕ್ಷಗಳೂ ಟೀಕಿಸುತ್ತಾ ಬಂದಿದ್ದರೂ, ಸರಕಾರದಲ್ಲಿ ಇದ್ದಾಗ ಯಾವುದೇ ಕ್ರಮದ ಅಭಾವದ ನಿಗೂಢತೆ ಕಂಡು ಬಂದಿದೆ. ಈ ಬಗ್ಗೆ ಭ್ರಷ್ಟಾಚಾರದ ಆಪಾದನೆ ಪ್ರತಿ ಚುನಾವಣೆಯಲ್ಲೂ ದಾಳವಾಗಿದೆ. ಇದು ನಿಲ್ಲಬೇಕು. ಈ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳಬೇಕು. ಇಂತಹ ಒಪ್ಪಂದ, ಅದರ ಉಲ್ಲಂಘನೆಯ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವ ಅಧಿಕಾರಿ–ರಾಜಕಾರಣಿಗಳನ್ನು ಗುರುತಿಸಿ ಶಿಕ್ಷಿಸಬೇಕು.

"ಸೌಹಾರ್ದತೆಗಾಗಿ ಕರ್ನಾಟಕ" ಮಾನವ ಸರಪಳಿಗೆ ಸಮಾಲೋಚನೆ

ಹೆಚ್ಚುತ್ತಿರುವ ಕೋಮುವಾದ, ಮೂಲಭೂತವಾದ, ಅಸಹಿಷ್ಣುತೆಗಳಿಗೆ ಪ್ರತಿಯಾಗಿ ಜನಸಾಮಾನ್ಯರ ಸಾಮರಸ್ಯವನ್ನು ತೋರ್ಪಡಿಸುವ, ಆ ಮೂಲಕ ಫ್ಯಾಸಿಸ್ಟ್ ಹುನ್ನಾರಗಳಿಗೆ ಪ್ರತಿರೋಧ ಒಡ್ಡುವ ಮಹತ್ವದ ಕಾರ್ಯಕ್ಕೆ ಕರ್ನಾಟಕ ಸಜ್ಜಾಗುತ್ತಿದೆ. ಜಾತ್ಯತೀತ – ಜನಪರ ಸಂಘಟನೆಗಳು, ಸಮಾಜಮುಖಿ ಕಾಳಜಿಯುಳ್ಳ ಸಾಹಿತಿಗಳು, ಪತ್ರಕರ್ತರು, ಕಲಾವಿದರು, ಸೃಜನಶೀಲ ಕ್ಷೇತ್ರದಲ್ಲಿರುವ ಸಮಾನಮನಸ್ಕರು ಒಗ್ಗೂಡಿ "ಸೌಹಾರ್ದತೆಗಾಗಿ ಕರ್ನಾಟಕ" ಅಭಿಯಾನವನ್ನು ಆರಂಭಿಸಿದ್ದಾರೆ. ಇದರ ಭಾಗವಾಗಿ ಗಾಂಧೀಜಿ ಹುತಾತ್ಮರಾದ ಜನವರಿ 30ರಂದು ರಾಜ್ಯದ ಉದ್ದಗಲಗಳನ್ನು ಮಾನವ ಸರಪಳಿಯಿಂದ ಬೆಸೆಯುವ ವಿಶಿಷ್ಟ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ನಿಟ್ಟಿನಲ್ಲಿ ನವೆಂಬರ್ 19ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಸಮಾಲೋಚನಾ ಸಭೆ ನಡೆಯಿತು. "2 ಸಾವಿರ ಕಿಲೋಮೀಟರ್'ಗಳುದ್ದಕ್ಕೆ ಸಾಗಲಿರುವ ಮಾನವ ಸರಪಳಿಯನ್ನು ನಿರ್ಮಿಸಲು 15 ಲಕ್ಷ ಜನ ಪಾಲ್ಗೊಳ್ಳಬೇಕಾಗುತ್ತದೆ. ಇದು ಅಸಾಧ್ಯವೆನಿಸಿದರೂ ಸಾಧ್ಯವಾಗಿಸಬೇಕಾದ ತುರ್ತು ಇದೆ. ಮಾನವ ಸರಪಳಿಯ ಮೂಲಕ ಸಶಕ್ತ ಸಂದೇಶ ರವಾನಿಸಬೇಕಿದೆ" ಎಂದು ಸೌಹಾರ್ದತೆಗಾಗಿ ಕರ್ನಾಟಕ ಅಭಿಯಾನದ ಸಂಘಟಕರಲ್ಲೊಬ್ಬರಾದ ಸಿಪಿಐ(ಎಂ) ಮುಖಂಡ ಜಿ.ವಿ.ಶ್ರೀರಾಮ ರೆಡ್ಡಿಯವರು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿ ನಿಡುಮಾಮಿಡಿ ವೀರಭದ್ರ ಚನ್ನಮಲ್ಲ ಸ್ವಾಮೀಜಿ, "ಕೋಮುವಾದದ ವಿಷಗಾಳಿಯಿಂದ ಸೌಹಾರ್ದತೆಗೆ ಧಕ್ಕೆ ಉಂಟಾಗುತ್ತಿದೆ. ಜಾತಿವಾದ, ಮೂಲಭೂತವಾದಗಳು ಪ್ರಜಾಪ್ರಭುತ್ವದ ಮೇಲೆ ಹಿಡಿತ ಸಾಧಿಸುತ್ತಿವೆ. ಇಂಥ ಸಂದರ್ಭದಲ್ಲಿ ಪ್ರಜಾಸತ್ತೆಯನ್ನು ಅವೆಲ್ಲದರಿಂದ ಮುಕ್ತಗೊಳಿಸುವ ಹೊಣೆ ನಮ್ಮೆಲ್ಲರ ಮೇಲಿದೆ" ಎಂದು ಅಭಿಪ್ರಾಯ ಪಟ್ಟಿದ್ದಾರೆ. "ಕೂಡಿ ಬಾಳುವುದು ಭಾರತೀಯ ಸಂಸ್ಕೃತಿಯ ಮೂಲಭೂತ ಗುಣಗಳಲ್ಲಿ ಒಂದು" ಎಂದು ಹೇಳಿದ ಸ್ವಾಮೀಜಿ, "ಭಿನ್ನ ಆಚಾರವಿಚಾರಗಳ ನಡುವೆಯೂ ಇಲ್ಲಿ ಸಾಮರಸ್ಯವಿತ್ತು. ಆದರೆ ಇಂದು ಈ ಸಹಬಾಳ್ವೆ– ಸಾಮರಸ್ಯಗಳಿಗೆ ದೊಡ್ಡ ಆಘಾತ ಉಂಟಾಗಿದೆ. ರಾಜಕೀಯ ಲಾಭಕ್ಕಾಗಿ ಇದನ್ನು ಉಂಟುಮಾಡಲಾಗುತ್ತಿದೆ. ಇದನ್ನು ನೋಡಿಕೊಂಡು ಮೌನವಾಗಿರುವುದು ಸಾಧ್ಯವಿಲ್ಲ, ಸರಿಯೂ ಅಲ್ಲ. ಆದ್ದರಿಂದ ಮಾನವ ಸರಪಳಿ ನಿರ್ಮಿಸಲು ಕೈಜೋಡಿಸಿ ಸೌಹಾರ್ದ ಸಾರಲು ಜೊತೆಯಾಗಿ" ಎಂದು ಕರೆ ನೀಡಿದ್ದಾರೆ.

ಸಮಾಲೋಚನಾ ಸಭೆಯಲ್ಲಿ ನಿಡುಮಾಮಿಡಿ ಸ್ವಾಮೀಜಿ, ನ್ಯಾಯಮೂರ್ತಿ ವಿ.ಗೋಪಾಲ ಗೌಡ, ಜಿವಿ.ಶ್ರೀರಾಮ ರೆಡ್ಡಿ, ಕೆ.ಮರುಳಸಿದ್ದಪ್ಪ, ನ್ಯಾಯಮೂರ್ತಿ ನಾಗಮೋಹನ ದಾಸ್, ಪ್ರೊ.



ಅರವಿಂದ ಮಾಲಗತ್ತಿ, ಪ್ರೊ. ಎಸ್. ಚಂದ್ರಶೇಖರ್, ಪ್ರೊ.ಸುಕನ್ಯಾ ಮಾರುತಿ, ಎಂ.ಎಸ್,ಸತ್ಯು, ಪಿ.ವಿ.ಲೋಕೇಶ್, ಶೂದ್ರ ಶ್ರೀನಿವಾಸ್, ಬಿ. ಗಂಗಾಧರ ಮೂರ್ತಿ ಮೊದಲಾದವರು ಉಪಸ್ಥಿತರಿದ್ದು ಸಲಹೆ ಸೂಚನೆಗಳನ್ನು ಹಂಚಿಕೊಂಡರು.

ಜನಸಾಮಾನ್ಯರನ್ನು ಬೆಸೆದು ಸೌಹಾರ್ದವನ್ನು ಸಾರುವ ಕೆಲಸ ಕರ್ನಾಟಕದ ನೆಲದಿಂದ ಆರಂಭವಾಗಿ ದೇಶದ ಇತರೆಡೆಗೂ ಹಬ್ಬಲಿದೆ. ಈ ಮಹತ್ಕಾರ್ಯಕ್ಕೆಮಾನವ ಸರಪಳಿಯ ಮೂಲಕ ಕನ್ನಡದ ನೆಲ ನಾಂದಿ ಹಾಡಲಿದೆ ಎಂಬುದು ಸಮಾಲೋಚನಾ ಸಭೆಯಲ್ಲಿ ಕೇಳಿಬಂದ ಮಹತ್ವದ ಮಾತು. ಜನಸಾಮಾನ್ಯರ ನಡುವೆ ನಾನಾರೂಪಗಳಲ್ಲಿ ಹರಿಯಬಿಡುತ್ತಿರುವ ಕೋಮು ದ್ವೇಷ, ಜಾತಿ ವೈಷಮ್ಯವೇ ಮೊದಲಾದ ಒಡಕಿನ ಹುನ್ನಾರಗಳಿಗೆ ಜನರ ನಡುವಿನಿಂದಲೇ ಸ್ಪಷ್ಟ ಪ್ರತಿರೋಧ ಹೊರಡಬೇಕಾದ ಅಗತ್ಯವಿದೆ. ಈ ನಿಟ್ಟಿನಲ್ಲಿ 'ಸೌಹಾರ್ದತೆಗಾಗಿ ಕರ್ನಾಟಕ' ಅಭಿಯಾನ ಮತ್ತು 'ಮಾನವ ಸರಪಳಿ' ಸಮರ್ಥ ಉತ್ತರವಾಗಿ ಹೊರಹೊಮ್ಮುವ ಭರವಸೆ ಇದೆ.

ಶಿವಮೊಗ್ಗ ಜಿಲ್ಲಾ ಸಿ.ಪಿ.ಐ.(ಎಂ) ಸಮ್ಮೇಳನ ಭದ್ರಾವತಿಯಲ್ಲಿ

ಬದಲಾವಣೆ ಚುನಾವಣೆಯಿಂದಲ್ಲ, ಹೋರಾಟದಿಂದ ಸಾಧ್ಯ: ಕಾ. ಶಂಕರ್

ದಿನಾಂಕ 19-11-2017ರಂದು ಸಿಪಿಐ(ಎಂ) ಪಕ್ಷದ ಶಿವಮೊಗ್ಗ ಜಿಲ್ಲಾ ಸಮ್ಮೇಳನವು ಭದ್ರಾವತಿ ನಗರದ ಉಂಬ್ಳೆಬೈಲು ರಸ್ತೆಯಲ್ಲಿರುವ ಲಯನ್ಸ್ ಕ್ಲಬ್ಬಿನ ಸಭಾಂಗಣದಲ್ಲಿ ಯಶಸ್ವಿಯಾಗಿ ನಡೆಯಿತು. ಸಮ್ಮೇಳನವನ್ನು ಉದ್ಘಾಟನೆ ಮಾಡಿ ಮಾತನಾಡಿದ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕರ್ನಾಟಕ ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರೂ ಹಿರಿಯ ಕಮ್ಯುನಿಸ್ಟ್ ನೇತಾರರೂ ಆದ ಕಾ. ಶಂಕರ್‌ರವರು ಸಮ್ಮೇಳದ ಪ್ರತಿನಿಧಿಗಳನ್ನೂ ಕಾರ್ಮಿಕರನ್ನೂ ಸಾರ್ವಜನಿಕರನ್ನೂ ಉದ್ದೇಶಿಸಿ ಸಮಾಜದ ಬದಲಾವಣೆಗೆ ಚುನಾವಣೆಗಳಿಂದಲ್ಲವೆಂದೂ ನಿರಂತರವಾದ ಚಳುವಳಿ ಮತ್ತು ಹೋರಾಟಗಳಿಂದ ಸಾಧ್ಯವೆಂದು ತಿಳಿಸಿದರು.

ಸಮ್ಮೇಳನದ ಆರಂಭಕ್ಕೂ ಮೊದಲು ಹಿರಿಯ ಕಮ್ಯೂನಿಸ್ಟ್ ದುರೀಣ ಕಾ. ರಂಗೇಗೌಡರು ಪಕ್ಷದ ಕೆಂಬಾವುಟವನ್ನು ಅನಾವರಣಗೊಳಿಸಿದರು ಹಾಗೂ ಕಾರ್ಮಿಕರಲ್ಲಿ ಹೋರಾಟದ ಮನೋಭಾವನೆಯನ್ನು ಬೆಳೆಸುವ ಹಾಗೂ ಭದ್ರಾವತಿಯ ಕಾರ್ಖಾನೆಗಳನ್ನು ಪುನಶ್ಚೇತನ ಗೊಳಿಸುವ ಅಗತ್ಯದ ಬಗ್ಗೆ ಮನವರಿಕೆ ಮಾಡಿಕೊಟ್ಟರು. ಕಾ. ಶಂಕರ್ ಅವರು ತಮ್ಮ ಮಾತುಗಳನ್ನು ಮುಂದುವರಿಸುತ್ತಾ, ವಿಶ್ವದೆಲ್ಲೆಡೆ ಕಮ್ಯುನಿಸ್ಟ್ ಸಂಗಾತಿಗಳು ನಡೆಸಿದ ಬಂಡವಾಳಶಾಹಿಗಳ ವಿರುದ್ದದ ಚಳುವಳಿ, ಹೋರಾಟದ ಫಲದಿಂದಾಗಿ ದುಡಿಯುವ ಜನರ ಸರ್ಕಾರಗಳು ಅಸ್ತಿತ್ವಕ್ಕೆ ಬಂದು ಕಾರ್ಮಿಕರು ಸರ್ಕಾರದ ಭಾಗವಾಗಿ ಅಧಿಕಾರವನ್ನು ನಡೆಸುವ ಅಪೂರ್ವವಾದ ಅವಕಾಶಗಳು ಲಭಿಸಿದವು, ಎಂದರು. ಇಂತಹ ಕಮ್ಯೂನಿಸ್ಟ್ ಸರ್ಕಾರಗಳು ಸಾಮಾನ್ಯ ಜನರಿಗೆ ಎಲ್ಲ ರೀತಿಯ ಶಿಕ್ಷಣ ಆರೋಗ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಿ ಅವರ ಬದುಕನ್ನು ಹಸನುಗೊಳಿಸುವ ನಿಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನೂ ಅವರ ಕಲ್ಯಾಣ ಕಾರ್ಯಗಳಲ್ಲಿ ಸತತವಾಗಿ ದುಡಿಯುತ್ತಾ ಬರುತ್ತಿರುವುದನ್ನೂ ಒತ್ತಿ ಹೇಳಿದರು. ಹಾಗಾಗಿ ಪ್ರಪಂಚದಾತ್ಯಂತ ಕಮ್ಯೂನಿಸ್ಟ್ ಸರ್ಕಾರಕ್ಕಾಗಿ ಚಳುವಳಿ ಮತ್ತು ಹೋರಾಟಗಳು ರೈತರೂ ಕಾರ್ಮಿಕರೂ ಸಾಮಾನ್ಯ ಜನರೂ ನಡೆಸುತ್ತಿದ್ದಾರೆಂದು ಸಭಿಕರ ಗಮನಕ್ಕೆ ತಂದರು.

ಭಾರತದಲ್ಲಿ ಕಾಂಗ್ರೆಸ್, ಬಿಜೆಪಿ, ಹಾಗೂ ಇನ್ನಿತರ ಪಕ್ಷಗಳು ತಮ್ಮ ಬಂಡವಾಳಶಾಹಿ ಧೋರಣೆಯಿಂದಾಗಿ ದೇಶದ ಬಡವರ, ಕೃಷಿ ಕಾರ್ಮಿಕರ ಬಡ ರೈತರ, ಕಾರ್ಮಿಕರ, ದಲಿತರ ಹಕ್ಕುಗಳನ್ನು ದಮನ ಮಾಡುತ್ತಿವೆ. ಬಿಜೆಪಿ ಪಕ್ಷವು ಸರ್ವಾಧಿಕಾರಿ, ಕೋಮುವಾದಿಯಗಿದ್ದು, ಬಂಡವಾಳ ಶಾಹಿಗಳ ಪರವಾಗಿ ಭಾರತದಲ್ಲಿ ಆಡಳಿತ ನಡೆಸುತ್ತಿವೆ. ಕಾಂಗ್ರೆಸ್ ಸುಮಾರು ದಶಕಗಳ ಕಾಲ ಈ ದೇಶದಲ್ಲಿ ಆಡಳಿತ ನಡೆಸಿದರೂ ಈ ವಿಚಾರಗಳಲ್ಲಿ ಅದು ಸಹ ಹೊರತಾಗಿಲ್ಲ. ಈ ಎರಡೂ ಪಕ್ಷಗಳು ಜಾತಿ ಧರ್ಮ ಭಾಷೆ ಗಡಿ ಮುಂತಾದ ವಿಚಾರಗಳ ಆಧಾರದ ಮೇಲೆ ಜನರನ್ನು ಒಡೆದು ಆಳುವ ನೀತಿಯನ್ನು ಅನುಸರಿಸಿಕೊಂಡು ಬರುತ್ತಿವೆ. ಆದರೆ ಎಡ ಪಕ್ಷಗಳು ಸಮಾಜದಲ್ಲಿ ಸಾಮರಸ್ಯದ ಜೀವನದ ಮಹತ್ವವನ್ನು ಜನರ ಮನಸ್ಸಿನಲ್ಲಿ ಬಿತ್ತುವ ಕೆಲಸ ಮಾಡುತ್ತಾ ಬಂದಿವೆಯೆಂದು ಒತ್ತಿ ಹೇಳಿದರು.



ಪ್ರದಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರದ ಬಿಜೆಪಿ ಸರ್ಕಾರವು ಬಡವರ ಉದ್ದಾರಕ್ಕಾಗಿ ನೋಟು ರದ್ದತಿ, ಜಿಎಸ್‌ಟಿ ಮುಂತಾದ ಕಾರ್ಯಕ್ರಮಗಳನ್ನು ತಂದಿರುವುದಾಗಿ ಹೇಳಿ ಬಡವರ ಮೇಲೆ ದಾಳಿ ನಡೆಸಿ ಬಂಡವಾಳಶಾಹಿ ಮತ್ತು ಕಾರ್ಪೋರೇಟ್ ಕಂಪನಿಗಳ ಪರವಾಗಿ ಕೆಲಸ ಮಾಡುತ್ತಿವೆ. ದೇಶದ ಆರ್ಥಿಕ ಸ್ಥಿತಿ ಅಧೋಗತಿಗಿಳಿಯುತ್ತಿದೆ. ಇದರ ಪರಿಣಾಮ ದುಡಿಯುವ ವರ್ಗದ ಮೇಲೆ ಹೆಚ್ಚಿನ ಹೊರೆ ಬಿದ್ದು ಬದುಕು ದುಸ್ತರ ವಾಗುತ್ತಿದೆ. ಈ ಸರ್ಕಾರದ ವಿರುದ್ಧ ಪ್ರಬಲ ಹೋರಾಟಗಳನ್ನು ಸಂಘಟಿಸಬೇಕಾಗಿದೆ. ಪ್ರದಾನಿ ನರೇಂದ್ರ ಮೋದಿಯವರನ್ನು ಭಾರತದ ಬಂಡವಾಳಶಾಹಿ ಶಕ್ತಿಗಳು, ಉದ್ದಿಮೆದಾರರು, ಸಂಘ ಪರಿವಾರದವರು, ಕೆಲವು ಆರ್ಥಿಕ ತಜ್ಞರು, ಜಾಗತಿಕ ನಾಯಕ ಎಂದು ಬಿಂಬಿಸುತ್ತಿದ್ದಾರೆ. ವಾಸ್ತವದಲ್ಲಿ ಮೋದಿಯವರು ರಾಷ್ಟ್ರನಾಯಕರಾಗಲು ಅನರ್ಹರು. ಅವರ ವಿಕಾಸದ ಮಾತುಗಳು ಕೇಳುವುದಕ್ಕಷ್ಟೆ ಚಂದ. ಆದರೆ ಆ ನಿಟ್ಟಿನಲ್ಲಿ ಕೆಲಸ ಮಾಡಲು ಈ 3-3/2 ವರ್ಷಗಳಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ ಎಂದು ಟೀಕಿಸಿದರು.

ಭದ್ರಾವತಿ ಉಕ್ಕಿನ ಕಾರ್ಖಾನೆಯ ಕಾರ್ಮಿಕ ಮುಖಂಡ ಕಾ. ಚಂದ್ರಹಾಸ, ಇವರು ಮಾತನಾಡಿ ಕಾರ್ಮಿಕವರ್ಗವು ವರ್ಗಪ್ರಜ್ಞೆ ಬೆಳೆಸಿಕೊಂಡು ಚಳುವಳಿಯ ಭಾಗವಾಗುವ ಪ್ರಾಮುಖ್ಯತೆಯನ್ನು ಜನರಿಗೆ ತಿಳಿಸಿ ಹೇಳಿದರು. ಸ್ಥಗಿತಗೊಂಡಿರುವ ಕಾರ್ಖಾನೆಗಳ ಪುನಶ್ಚೇತನಕ್ಕಾಗಿ ದೊಡ್ಡ ಮಟ್ಟದ ಹೋರಾಟದ ಅವಶ್ಯಕತೆಯ ಬಗ್ಗೆ ಹೇಳಿ ಕಾರ್ಮಿಕರನ್ನು ಹುರಿದುಂಬಿಸಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲೆಯ ಹಿರಿಯ ಕಮ್ಯೂನಿಸ್ಟ್ ನೇತಾರರಾದ ಕಾ. ಜಿ.ಎಸ್. ನಾಗರಾಜ್ ಮಾತನಾಡಿ ಭ್ರಷ್ಟಾಚಾರ ಮುಕ್ತ ಸರ್ಕಾರವನ್ನು ತರುವುದಾಗಿ ಜನತೆಯನ್ನು ನಂಬಿಸಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಎನ್.ಡಿ.ಎ. ಸರ್ಕಾರದ ಮಂತ್ರಿಗಳೂ ಪಕ್ಷದ ದುರೀಣರೂ ಭ್ರಷ್ಟಾಚಾರ ಎಗ್ಗಿಲ್ಲದಂತೆ ನಡೆಸುತ್ತಿರುವುದರ ಕಡೆಗೆ ಬೊಟ್ಟು ಮಾಡಿ ತೋರಿಸಿದರು. ಸಂಘ ಪರಿವಾರದ ನಾಯಕರು ಧರ್ಮದ ವಿಚಾರದಲ್ಲಿ ಕೋಮುಭಾವನೆಯನ್ನು ಕೆರಳಿಸುತ್ತಿರುವುದರ ಬಗ್ಗೆ ಸಾರ್ವಜನಿಕರು ಜಾಗೃತರಾಗಿರಲು ಮನವಿ ಮಾಡಿದರು.

ಹಿರಿಯ ನಾಯಕರಾದ ಕಾ. ಶಿವಶಂಕರ್, ಜಿಲ್ಲಾ ಕಾರ್ಯದರ್ಶಿ ಕಾ. ನಾರಾಯಣ, ಬಿಸಿಯೂಟ ನೌಕರರ ನಾಯಕರದ ಕಾ. ಹನುಮಮ್ಮ ಮುಂತಾದವರು ಉದ್ಘಾಟನಾ ಸಮಾರಂಭದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದರು. ಕಾ. ಅನಂತರಾಮ್ ವಂದನಾರ್ಪಣೆ ಮಾಡಿದರು. ಜಿಲ್ಲಾ ಸಮಿತಿ ಸದಸ್ಯರಾದ ಕಾ. ಪ್ರಭಾಕರನ್ ಮತ್ತು ಕಾ. ಮಂಜಣ್ಣ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಮಧ್ಯಾಹ್ನ ಪ್ರತಿನಿಧಿಗಳ ಸಭೆಯು ಹಿರಿಯ ನಾಯಕರಾದ ಕಾ. ಜಿ.ಎಸ್. ನಾಗರಾಜ್‌ರವರ ಅಧ್ಯಕ್ಷತೆಯಲ್ಲಿ ಹಾಗೂ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ. ಶಂಕರ್‌ರವರ ನೇತೃತ್ವದಲ್ಲಿ ನಡೆಯಿತು. ಆರಂಭದಲ್ಲಿ ಕಾ. ಪ್ರಭಾಕರನ್ ಅಗಲಿದ ಹಿರಿಯ ಸಂಗಾತಿಗಳಿಗೆ ಮತ್ತು ರಾಜ್ಯದ, ರಾಷ್ಟ್ರದ ಮತ್ತು ಅಂತರಾಷ್ಟ್ರದ ಗಣ್ಯ ಚೇತನಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಜಿಲ್ಲಾ ಕಾರ್ಯದರ್ಶಿ ಕಾ. ನಾರಾಯಣರವರು ಕರಡು ವರದಿಯನ್ನು ಸಭೆಗೆ ಮಂಡಿಸಿ ಚರ್ಚೆಗೆ ಆಹ್ವಾನಿಸಿದರು. ಪಕ್ಷದ ಬೆಳವಣಿಗೆಗೆ ಬೇಕಾದ ಅಗತ್ಯ ಹಾಗೂ ತುರ್ತು ಕ್ರಮದ ಬಗ್ಗೆ ಸುಧೀರ್ಘವಾಗಿ ಚರ್ಚಿಸಲಾಯಿತು. ನಂತರ ಮುಂದಿನ ಮೂರು ವರ್ಷಗಳಿಗಾಗಿ ಹೊಸ ಸಮಿತಿ ರಚಿಸಲಾಯಿತು. ಕಾ. ಜಿ.ಎಸ್.ನಾಗರಾಜ್, ಕಾ. ಶಿವಶಂಕರ್. ಕಾ. ಎಂ ನಾರಾಯಣ, ಕಾ. ಅನಂತರಾಮ್, ಕಾ. ಪ್ರಭಾಕರನ್ ಮತ್ತು ಕಾ. ಮಂಜಣ್ಣ ಹೊಸದಾಗಿ ಜಿಲ್ಲಾ ಸಮಿತಿಗೆ ಅವಿರೋಧವಾಗಿ ಆಯ್ಕೆಗೊಂಡರು. ಕಾ. ನಾರಾಯಣರವರು ಮತ್ತೊಂದು ಅವಧಿಗೆ ಜಿಲ್ಲಾ ಕಾರ್ಯದರ್ಶಿಯಾಗಿ ಪುನರಾಯ್ಕೆಯಾದರು. ಪ್ರತಿನಿಧಿಗಳ ಸಭೆಯು ಸಮ್ಮೇಳನದ ಭಾಗವಾಗಿ ಈ ಕೆಳಗಿನ ನಿರ್ಣಯಗಳನ್ನು ಅವಿರೋಧವಾಗಿ ಅಂಗೀಕರಿಸಲಾಯಿತು.

1) ಭದ್ರಾವತಿಯ ಎಂ.ಪಿ.ಎಂ. ಕಾರ್ಖಾನೆಯನ್ನು ಕೂಡಲೇ ಆರಂಭಿಸಬೇಕು.
2) ವಿ.ಐ.ಎಸ್.ಎಲ್. ಕಾರ್ಖಾನೆಯ ಖಾಸಗೀಕರಣ ಕ್ರಮವನ್ನು ವಿರೋಧಿಸಿ ಅದನ್ನು ರಕ್ಷಿಸಬೇಕು.
3) ಮನೆಯಿಲ್ಲದ ಬಡ ಕುಟುಂಬಗಳಿಗೆ ನಿವೇಶನಕೊಟ್ಟು ಮನೆ ಕಟ್ಟಿಕೊಡಬೇಕು.
4) ಬಗುರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು.
5) ಬೆಲೆ ಏರಿಕೆ ತಡೆಯಲು ಕೇಂದ್ರ ಸರ್ಕಾರ ಮುಂದಾಗಬೇಕು.
6) ರೈತರ ಬೆಳೆಗೆ ಯೋಗ್ಯ ಬೆಲೆ ನಿಗದಿ ಮಾಡಬೇಕು.

– ಕೆ.ಪ್ರಭಾಕರನ್, ಶಿವಮೊಗ್ಗ.

ಮಾದಕ ವ್ಯಸನಮುಕ್ತ ಉಳ್ಳಾಲಕ್ಕಾಗಿ ಜನಾಂದೋಲನ

ಉಳ್ಳಾಲ ಪ್ರದೇಶ ಸೇರಿದಂತೆ ಮಂಗಳೂರಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನಿಷೇಧಿತ ಮಾದಕ ವಸ್ತುಗಳ ಹಾವಳಿ ಮಿತಿ ಮೀರಿ ಯುವಜನರು ಹಾದಿ ತಪ್ಪುತ್ತಿರುವ ಅನೇಕ ಪ್ರಸಂಗಗಳು ನಡೆಯುತ್ತಿವೆ. ಗಾಂಜಾ ಮಾರಾಟ ಜಾಲಗಳು ಈ ಎಲ್ಲಾ ಪ್ರದೇಶದಲ್ಲಿ ಗುಪ್ತವಾಗಿ ಸಕ್ರಿಯವಾಗಿವೆ. ಮಾನಸಿಕ ರೋಗಿಗಳಿಗೆ ನೀಡಲಾಗುವ ಔಷಧಗಳನ್ನು ಮೆಡಿಕಲ್ ಶಾಪುಗಳಿಂದ ವೈದ್ಯರ ಚೀಟಿ ಇಲ್ಲದೆ ಪಡೆಯುತ್ತಿರುವುದೂ ತಿಳಿದು ಬರುತ್ತಿದೆ. ಸ್ಟೇಶನರಿಯಲ್ಲಿ ಮಾರಾಟವಾಗುವ ಅಂಟು ದ್ರವ್ಯಗಳನ್ನು ಅದರ ಮಾದಕ ರುಚಿಗಾಗಿ ಎಳೆಯ ವಿದ್ಯಾರ್ಥಿಗಳು ಬಳಸುತ್ತಿರುವುದೂ ಹೆಚ್ಚಾಗಿದೆ. ಮನೆಯವರ ಅರಿವಿಗೆ ಬಾರದಂತೆ ಗಾಂಜಾ ಗಿಡಗಳನ್ನು ಯುವಜನರು ಮನೆಯ ಆವರಣದಲ್ಲಿ ಬೆಳೆಯುತ್ತಿರುವುದು ತಿಳಿದುಬರುತ್ತದೆ. ಉಳ್ಳಾಲ ಪರಿಸರದಲ್ಲಿ ಅನೇಕ ಇಂಜಿನಿಯರಿಂಗ್, ಮೆಡಿಕಲ್ ಹಾಗೂ ಇತರ ಉನ್ನತ ಶಿಕ್ಷಣ ಸಂಸ್ಥೆಗಳು ಬೆಳೆದು ಬಂದಿದ್ದು, ಅವುಗಳ ಪರಿಸರದಲ್ಲಿ ಗಾಂಜಾ ಹಾಗೂ ಇತರ ಮಾದಕ ದ್ರವ್ಯಗಳ ಮಾರಾಟ ಹಾಗೂ ಸೇವನೆ ವ್ಯಾಪಕವಾಗಿರುವುದು ತಿಳಿದು ಬರುತ್ತಿದೆ.

ಉಳ್ಳಾಲ ವಲಯದ ಮುನ್ನೂರಿನಲ್ಲಿ ಕಳೆದ ವರ್ಷ ಅಲ್ಲಿನ ಡಿವೈಎಫ್ಐ ಗ್ರಾಮ ಘಟಕಗಳು ಒಗ್ಗೂಡಿ ಗ್ರಾಮಾದ್ಯಂತ ಮಾದಕ ದ್ರವ್ಯ ವ್ಯಸನದ ವಿರುದ್ಧ ಜನಾಂದೋಲನವನ್ನು ರೂಪಿಸಿತು. ಮಂಗಳೂರು ಪ್ರದೇಶದ ಪೋಲೀಸ್ ಇಲಾಖಾ ಅಧಿಕಾರಿಗಳಿಗೆ ಮಾದಕ ದ್ರವ್ಯ ಮಾರಾಟ ಜಾಲದ ಬಗ್ಗೆ ಹಲವು ಬಾರಿ ತಿಳಿಸಿದ್ದರೂ ತಮ್ಮ ವ್ಯಾಪ್ತಿಯೊಳಗೆ ಇಂಥ ಕುಕೃತ್ಯಗಳು ನಡೆಯುತ್ತಿದ್ದರೂ ಇಲಾಖೆ ನಿರಾಳವಾಗಿ ವರ್ತಿಸುತ್ತಿತ್ತು. ಅಲ್ಲದೆ ಈ ಜಾಲಗಳ ಪೋಷಕರಿಗೆ ಪೋಲೀಸ್ ಠಾಣೆಗಳಲ್ಲಿ ರಾಜ ಮರ್ಯಾದೆ ನೀಡುತ್ತಿದ್ದುದು ಅರಿವಿಗೆ ಬರುತ್ತಿದೆ. ಉಳ್ಳಾಲ ವಲಯದಲ್ಲಿ ಮಾದಕ ದ್ರವ್ಯ ಮಾರಾಟ ಜಾಲದ ಕ್ರಿಮಿನಲ್ ಕೃತ್ಯಗಳು ಹೆಚ್ಚುತ್ತಾ ಬಂದಿದ್ದು, ವೈಯಕ್ತಿಕ ನೆಲೆಯಲ್ಲಿ ಈ ಕ್ರಿಮಿನಲ್‌ಗಳ ಬಗ್ಗೆ ಪೋಲೀಸ್ ಠಾಣೆಗೆ ದೂರು ನೀಡುತ್ತಿರುವುದಾಗಲೀ, ಪ್ರತಿಭಟಿಸುವುದಾಗಲೀ ಸಾಧ್ಯವಾಗದೆ ಹೋದಂಥ ವಾತಾವರಣವಿತ್ತು. ಅಂಥ ಸನ್ನಿವೇಶದಲ್ಲೂ ಸದ್ಯ ನಾಗರೀಕರೂ, ಸಂಸಾರಿಗರೂ ಉಳ್ಳಾಲ ಮುಕ್ಕಚ್ಚೇರಿಯ ಜುಬೈರ್ ಎಂಬವರು ತಮ್ಮ ಪರಿಸರದ ಜಾಲ ವಿರುದ್ಧ ಧ್ವನಿಯೆತ್ತಿ ಪ್ರತಿಭಟಿಸಿದ್ದರು. ಈ ಕಾರಣಕ್ಕಾಗಿಯೇ ಈಗ ಒಂದೂವರೆ ತಿಂಗಳ ಹಿಂದೆ ತಂಡವೊಂದರಿಂದ ಅವರ ಕೊಲೆಯಾಗಿರುತ್ತದೆ. ಸಾರ್ವಜನಿಕರೂ ಈ ಕೊಲೆಯನ್ನು ಪ್ರತಿಭಟಿಸಿರುತ್ತಾರೆ. ಡಿವೈಎಫ್ಐ ಉಳ್ಳಾಲ ವಲಯ ಸಮಿತಿ ದ.ಕ.ಜಿಲ್ಲಾಸಮಿತಿ ಮಾರ್ಗದರ್ಶನದಲ್ಲಿ ಎರಡು ಬಾರಿ ಪ್ರತಿಭಟನಾ ಸಭೆ ನಡೆಸಿ ಗಾಂಜಾ ಮಾರಾಟ ಜಾಲದ ವಿರುದ್ಧ ಬಿಗಿ ಕ್ರಮ ಕೈಗೊಳ್ಳಲು ಆಗ್ರಹಿಸಿರುತ್ತಾರೆ. ಈ ಪ್ರತಿಭಟನೆಗಳ ಅನಂತರ ಪತ್ರಿಕೆಗಳಲ್ಲಿ ವರದಿಯಾಗುತ್ತಿರುವಂತೆ ಜಿಲ್ಲೆಯ ಪೋಲೀಸ್ ಇಲಾಖೆ ಹತ್ತಾರು ಗಾಂಜಾ ಮಾರಾಟ ತಂಡದ ಸದಸ್ಯರನ್ನು ವಶಕ್ಕೆ ಪಡೆದು ಕಾನೂನು ಕ್ರಮಕ್ಕೆ ಒಳಗೊಳಿಸುವ ಪ್ರಕ್ರಿಯೆ ಕಂಡು ಬರುತ್ತದೆ. ಡಿವೈಎಫ್ಐ ಪ್ರತಿಭಟನೆಗಳಿಲ್ಲವಾಗಿದ್ದರೆ, ಪೋಲೀಸ್ ಇಲಾಖೆಯ ಮೌನ ಪೋಷಣೆ ಮುಂದುವರಿಯುತ್ತಿತ್ತು.

ಮಾದಕ ದ್ರವ್ಯ ವ್ಯಸನಿ ಮಕ್ಕಳು, ಯುವಕರು ಸಾವಿರಕ್ಕೂ ಮಿಕ್ಕಿ ಸಂಖ್ಯೆಯಲ್ಲಿ ಮಂಗಳೂರು ಉಳ್ಳಾಲ ಪರಿಸರದ ಖ್ಯಾತ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿದ್ದಾರೆಂಬುದನ್ನು ತಜ್ಞ ವೈದ್ಯ ಡಾ.ಮೆನನ್ ಜಿಲ್ಲೆಯ ಜನರ ಗಮನಕ್ಕೆ ತಂದಿದ್ದಾರೆ. ಕುಟುಂಬದ ಗೌರವದ ಪ್ರಶ್ನೆಯ ಹೆಸರನ್ನು ಕೆಲವು ಸಭ್ಯ ನಾಗರಿಕರೂ ತಮ್ಮ ಕುಟುಂಬದ ಯುವಕರು ಮಾದಕ ವ್ಯಸನದ ದಾಸರಾಗಿರುವುದರ ಬಗ್ಗೆ ಆ ಮೂಲಕ ಮಾದಕ ದ್ರವ್ಯ ವ್ಯಸನ ಹರಡುವುದರ ಬಗ್ಗೆ ಉತ್ಸುಕತೆ ತೋರಿಸದೆ ಸಮಾಜಕ್ಕೆ ಅನ್ಯಾಯ ಎಸಗುತ್ತಿದ್ದಾರೆ.

ಇಡೀ ಸಮಾಜಕ್ಕೆ ಮಾದಕ ದ್ರವ್ಯ ವ್ಯಸನದ ಅಪಾಯದ ಬಗ್ಗೆ ಅರಿವು ನೀಡಬೇಕಾಗಿದೆ. ಅದರ ಪೂರೈಕೆ ಹೇಗೆ ನಡೆಯುತ್ತಿದೆ, ಹೇಗೆ ಹೆಚ್ಚುತ್ತಿದೆ ಎಂಬ ತಿಳುವಳಿಕೆ ಬೇಕು. ಈ ನಿಟ್ಟಿನಲ್ಲಿ ಡಿವೈಎಫ್ಐ ಉಳ್ಳಾಲ ವಲಯ ಸಮಿತಿಯು ಮಾದಕ ವ್ಯಸನ ಮುಕ್ತ ಉಳ್ಳಾಲಕ್ಕಾಗಿ ಸ್ವಾಸ್ಥ್ಯ ಸಮಾಜದ ನಿರ್ಮಾಣಕ್ಕಾಗಿ ಜನಾಂದೋಲನ ಅಭಿಯಾನವೊಂದನ್ನು ಹಮ್ಮಿಕೊಂಡಿದೆ. ಈ ಅಭಿಯಾನದ ರೂಪು ➡





ಬೀದರ್ ಜಿಲ್ಲಾ ಸಂಘಟನಾ ಸಮಿತಿಯ 3 ನೇ ಸಮ್ಮೇಳನದ ವರದಿ

ಒಟ್ಟು 8 ತಾಲೂಕುಗಳನ್ನು ಒಳಗೊಂಡಿರುವ ಬೀದರ್ ಜಿಲ್ಲೆಯ ಜನಸಂಖ್ಯೆ 17.03 ಲಕ್ಷ ಇದ್ದು, ಅವರಲ್ಲಿ 12.77 ಲಕ್ಷ ಗ್ರಾಮೀಣವಾಸಿಗಳಿದ್ದೂ 4.26 ಲಕ್ಷ ನಗರವಾಸಿಗಳಾಗಿದ್ದಾರೆ. 2011 ರ ಪ್ರಕಾರ 1000ಕ್ಕೆ 954 ಮಹಿಳೆಯರಿದ್ದೂ ಗ್ರಾಮಾಂತರದಲ್ಲಿ 963 ಮಹಿಳೆಯರಿದ್ದಾರೆ. 0–6ರ ವಯೋಮಾನದ ಮಕ್ಕಳ ಲಿಂಗಾನುಪಾತ ನಗರಗಳಲ್ಲಿ 1000ಕ್ಕೆ 944 ಇದ್ದು, ಗ್ರಾಮೀಣದಲ್ಲಿ 957 ಇರುವುದು ಲಿಂಗಾನುಪಾತದ ಕುಸಿತದ ಗಂಭೀರ ಎಚ್ಚರಿಕೆಯಾಗಿದೆ. ಒಟ್ಟು ಜನಸಂಖ್ಯೆಯಲ್ಲಿ 22.3% ರಷ್ಟು ಪರಿಶಿಷ್ಟ ಜಾತಿಯ ಜನರಿದ್ದೂ 17.13% ರಷ್ಟು ಪರಿಶಿಷ್ಟ ಪಂಗಡದ ಜನರಿದ್ದಾರೆ, ಒಟ್ಟು 3.20 ಲಕ್ಷ ಕುಟುಂಬಗಳಿದ್ದು, ಅದರಲ್ಲಿ ಇಂದಿಗೂ 71.50% ರಷ್ಟು ಕುಟುಂಬಗಳು ಸೌದೆ ಒಲೆಯನ್ನು ಆಧರಿಸಿರುವುದು ಜಿಲ್ಲೆಯ ಬಡತನಕ್ಕೆ ಹಿಡಿದ ಕನ್ನಡಿಯಾಗಿದೆ. ಒಟ್ಟು ಸಾಕ್ಷರತೆ 70.51% ಇದ್ದು, ಗಂಡಸರ ಸಾಕ್ಷರತೆ 79.09%, ಮಹಿಳೆಯರ ಸಾಕ್ಷರತೆ 61.55% ಇರುವುದು ಪ್ರಾದೇಶಿಕ ಮತ್ತು ಸಾಕ್ಷರತೆಯಲ್ಲಿ ಲಿಂಗ ಅಸಮಾನತೆಯನ್ನು ಸಾರುತ್ತವೆ. ಸುಮಾರು 17 ಲಕ್ಷ ಜನಸಂಖ್ಯೆ ಇರುವ ಜಿಲ್ಲೆಯಲ್ಲಿ ಸರ್ಕಾರಿ ಮತ್ತು ಖಾಸಗಿ ವೈದ್ಯರಿರುವುದು ಕೇವಲ 515. ಅಂದರೆ 10 ಸಾವಿರ ಮಂದಿಗೆ 3 ಡಾಕ್ಟರುಗಳ ಸಂಖ್ಯೆ ಇದ್ದೂ 10 ಸಾವಿರ ಜನರಿಗೆ 8 ಹಾಸಿಗೆಗಳ ಸೌಲಭ್ಯ ಮಾತ್ರವಿದೆ. ಶೇಕಡಾ 49.5 ರಷ್ಟು ಜನತೆ ಕೃಷಿಯನ್ನು ಆಧರಿಸಿದ್ದು, ಇತ್ತಿಚಿನ ವರ್ಷಗಳಲ್ಲಿ ಬರ ಮತ್ತು ನೆರೆಯ ವೈಪರೀತ್ಯದಿಂದಾಗಿ ಕೃಷಿಕರು ಸಂಕಷ್ಟಕ್ಕೆ ಸಿಲುಕಿದ್ದು, ಇದು ಜನರ ಬದುಕಿನ ಎಲ್ಲಾ ಮುಖಗಳ ಮೇಲೂ ಗಂಭೀರ ಪರಿಣಾಮವನ್ನು ಬೀರಿರುವುದನ್ನು ಕಾಣಬಹುದು. ಶ್ರೀಮಂತರ ಮಕ್ಕಳಿಗೆ, ಅವರ ಆರೋಗ್ಯಕ್ಕೆ ಹೈದ್ರಾಬಾದ್, ಬೆಂಗಳೂರು,ಸೋಲಾಪುರ್ ನಗರಗಳ ಬಾಗಿಲುಗಳು ತೆರೆದಿದ್ದರೆ, ಬಡವರ ಶಿಕ್ಷಣ, ಆರೋಗ್ಯ ಜಿಲ್ಲೆಯಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಆಧರಿಸಿರುತ್ತದೆ. ಪ್ರತಿದಿನ ಬೀದರ್ ಜಿಲ್ಲಾಸ್ಪತ್ರೆಯಿಂದ ಒಂದಲ್ಲಾ ಒಂದು ಚಿಕಿತ್ಸೆಯ ಕೊರತೆಯಿಂದ ಹೈದ್ರಾಬಾದ್ ಗೆ ಸರದಿ ಆಂಬ್ಯೂಲೆನ್ಸ್‌ಗಳು ಹೋಗುತ್ತಲೇ ಇರುತ್ತವೆ. ಬಡವರು ಚಿಕಿತ್ಸೆಗಾಗಿ ಆಂಬ್ಯೂಲೆನ್ಸ್‌ಗೆ ಹಣವೂ ಇಲ್ಲದೇ ಒಂದೊಮ್ಮೆ ಹೈದ್ರಾಬಾದ್‌ನಲ್ಲೆ ಸತ್ತರೆ ಹೆಣ ಹಿಂದಿರುಗಿಸಿ ತರಲು ಹಣವಿಲ್ಲದೇ ಪರದಾಡಿರುವ ಹೃದಯ ವಿದ್ರಾವಕ ಜೀವಂತ ಘಟನೆಗಳಿಗೆ ನಮ್ಮ ಸಂಗಾತಿಗಳು ಸ್ಪಂಧಿಸಿದ್ದಾರೆ.

ಇಂತಹ ಸಾಮಾಜಿಕ ಆರ್ಥಿಕ ಅಸಮಾನತೆಯ ಪ್ರಶ್ನೆಗಳಿಗೆ ಅಲ್ಲಿಂದ ರಾಜ್ಯ ಅಸೆಂಬಿಯನ್ನು ಮತ್ತು ಲೋಕಸಭೆಯನ್ನು ಪ್ರತಿನಿಧಿಸಿದ ಕಾಂಗ್ರೆಸ್ ಮತ್ತು ಬಿ.ಜೆ.ಪಿ, ಜೆ.ಡಿಎಸ್ ಜನಪ್ರತಿನಿಧಿಗಳು ಶಾಶ್ವತ ಪರಿಹಾರಗಳಿಗಾಗಿ ಪ್ರಯತ್ನಿಸಿರುವುದು ಕಾಣಸಿಗುವುದಿಲ್ಲ, ಮೇಲ್ಪದರದ ಕಾರ್ಯಕ್ರಮಗಳಿಂದಾಗಿ ಜನತೆಯ ಅಭದ್ರತೆ ಹಾಗೇ ಉಳಿದಿದ್ದು, ಅದು ಜಿಲ್ಲೆಯ ಸಮಗ್ರ ಅಭಿವೃದ್ಧಿಯ ಮೇಲೆ ಗಂಭೀರ ಪರಿಣಾಮವನ್ನು ಬೀರಿದೆ. ಈ ಅಸಮಾನತೆಯ ಪ್ರಶ್ನೆಗಳ ವಿರುದ್ಧ ಜನ ಸಂಘಟಿತರಾಗದಂತೆ ಕೋಮುವಾದಿ ಶಕ್ತಿಗಳು ಜಿಲ್ಲೆಯಾದ್ಯಂತ ಭಗವತ್ ಗೀತಾ ಸಪ್ತಾಹ, ವಿವೇಕಾನಂದ ಜಯಂತಿ, ಅಂಬೇಡ್ಕರ್ ಜಯಂತಿ, ಭಗತ್ ಸಿಂಗ್ ಜಯಂತಿಯ ಮುಖವಾಡಗಳ ಹಿಂದೆ ಕೋಮುವಾದಿ ಚಟುವಟಿಕೆಗಳಿಗೆ ಜನರನ್ನು ಸೆಳೆಯುತ್ತಿವೆ. ಹುಮನಾ ಬಾದ್ ನ ಮಾಣಿಕ್ ಪ್ರಭು ಸರ್ವಮತಾಚಾರ ದೇವಾಲಯವನ್ನು ಕೇಂದ್ರೀಕರಿಸಿಕೊಂಡು ಹೊಸ ಹೊಸ ಆಚರಣೆಗಳ ಮೂಲಕ ಸಾವಿರಾರು ಜನರನ್ನು ಅಣಿನೆರೆಸಿ ಕೋಮು ವಿಚಾರಗಳನ್ನು ಅತ್ಯಂತ ವ್ಯವಸ್ಥಿತವಾಗಿ ಬಿತ್ತುತ್ತಿದ್ದಾರೆ.



ಕಾಂ. ಪ್ರಭುಸಂತೋಷ್ಕರ್

ಇವೆಲ್ಲದರ ಕುರಿತು ಚರ್ಚಿಸಿದ ಪ್ರತಿನಿಧಿ ಅಧಿವೇಶನ ಪ್ರಮುಖವಾಗಿ ಮೂರು ನಿರ್ಣಯಗಳನ್ನು ಕೈಗೊಂಡಿದೆ. 1) ಬೀದರ್ ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯ ಹಣಕಾಸನ್ನು ಒದಗಿಸಿ ನಾಗರೀಕರಿಗೆ ಅಗತ್ಯ ಸೌಲಭ್ಯಗಳನ್ನು ಖಾತ್ರಿಗೊಳಿಸಲು ಒತ್ತಾಯಿಸಿ ಡಿಸೆಂಬರ್ ತಿಂಗಳಲ್ಲಿ ಜಿಲ್ಲಾ ಕೇಂದ್ರದಲ್ಲಿ ಹೋರಾಟಕ್ಕೆ ಕರೆ 2) ಹಮನಾಬಾದ್‌ನಲ್ಲಿರುವ ಕೆಮಿಕಲ್ ಫ್ಯಾಕ್ಟರಿಗಳಿಂದ ಹೊರಹೊಮ್ಮುತ್ತಿರುವ ಮಾಲಿನ್ಯ ನಿಯಂತ್ರಣ ಮಾಡಿ ಜನತೆಯ ರಕ್ಷಣೆಗಾಗಿ ಕ್ರಮ ಕೈಗೊಳ್ಳಲು ಒತ್ತಾಯಿಸಿ ನಿರ್ಣಯ 3) ಜನವರಿ 30 ಸೌಹಾರ್ಧತೆಗಾಗಿ ಕರ್ನಾಟಕ ಮಾನವ ಸರಪಳಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ನಿರ್ಣಯವನ್ನು ಕೈಗೊಳ್ಳಲಾಗಿದೆ

ಹಿಂದಿನ 3 ವರ್ಷಗಳ ಸಂಘಟನಾ ಅನುಭವಗಳ ಆಧಾರದಲ್ಲಿ ಸಮ್ಮೇಳನ ತನ್ನ ಗುರಿಗಳನ್ನು ಗುರುತಿಸಿಕೊಂಡಿದೆ. 1) ಮುಂದಿನ 3 ವರ್ಷದಲ್ಲಿ ಕನಿಷ್ಟ 200 ಪಕ್ಷದ ಸದಸ್ಯತ್ವವನ್ನು ಮಾಡಿಸುವುದು, 2) ಆಹಾರ, ಆರೋಗ್ಯ, ನಿವೇಶನಾ ರಹಿತರ ಹಕ್ಕುಗಳಿಗಾಗಿ ಉದ್ಯೋಗ ಖಾತ್ರಿ ಯೋಜನೆಯ ಜಾರಿಗಾಗಿ, ಅಸಂಘಟಿತ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ಹೋರಾಟಗಳನ್ನು ನಡೆಸುವುದು, 3) ಜನಶಕ್ತಿ ಚಂದಾಗಾಗಿ ವಿಶೇಷ ಯೋಜನೆಯನ್ನು ರೂಪಿಸುವುದು, 4) ಪಕ್ಷದ ಜಿಲ್ಲಾ ಸಂಘಟನಾ ಸಮಿತಿಸದಸ್ಯರಿಗೆ ಮತ್ತು ಶಾಖಾ ಕಾರ್ಯದರ್ಶಿಗಳಿಗೆ ಒಂದು ಹಂತದ ತರಬೇತಿ ಮತ್ತು ಪಕ್ಷದ ಸದಸ್ಯರಿಗೆ ಪ್ರತ್ಯೇಕ ತರಗತಿಗಳನ್ನು ನಡೆಸಲು ಗುರಿಗಳನ್ನು ನಿಗದಿ ಮಾಡಿಕೊಳ್ಳಲಾಗಿದೆ

ಪಕ್ಷದ ಸಂಘಟನೆಯನ್ನು ನಡೆಸಲು 7 ಸದಸ್ಯರು 2 ಆಹ್ವಾನಿತರನ್ನೊಳಗೊಂಡ 9 ಜನರ ಜಿಲ್ಲಾ ಸಂಘಟನಾ ಸಮಿತಿಯು ಸರ್ವಾನುಮತದಿಂದ ಆಯ್ಕೆಯಾಗಿದೆ, ಪ್ರಭು ಸಂತೋಷ್ಕರ್, ಆರ್.ಪಿ ರಾಜಾ, ಶ್ರೀದೇವಿ ಚಿವುಡೆ, ಇಸಾಮೊದ್ದೀನ್, ರೇಶ್ಮಾ ಹಂಸರಾಜ್, ಅಂಬೂಬಾಯಿ, ಬಸವರಾಜ ಮಾಳಗಿಯವರು ಸದಸ್ಯರಾಗಿ ಭೂಮಿಕಾ ಮತ್ತು ವಿಶ್ವನಾಥ ಉಪ್ಪೆಯವರು ಆಹ್ವಾನಿತ ಸದಸ್ಯರು. ಪ್ರಭುಸಂತೋಷ್ಕರ್ ಅವರು ಎರಡನೇಯ ಬಾರಿಗೆ ಜಿಲ್ಲಾ ಕಾರ್ಯದರ್ಶಿಯಾಗಿ ಆಯ್ಕೆಯಾಗಿರುತ್ತಾರೆ

ನವೆಂಬರ್ 18, 19 ಎರಡು ದಿನ ನಡೆದ ಈ ಸಮ್ಮೇಳನದಲ್ಲಿ ಮೊದಲ ದಿನ ಕೆಂಬಾವುಟಗಳ ಆಕರ್ಷಕ ಮೆರವಣಿಗೆ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿತ್ತು. ಗುತ್ತಿಗೆ ಕಾರ್ಮಿಕರ ಹಕ್ಕುಗಳ ರಕ್ಷಣೆಗಾಗಿ ದೆಹಲಿಯಲ್ಲಿ ನಡೆದ ಹೋರಾಟದಲ್ಲಿ ಭಾಗವಹಿಸಿ ಹಿಂತಿರುಗುವ ವೇಳೆ ಹೃದಯಾಘಾತದಿಂದ ನಿಧನರಾದ ಬಿ.ಎಸ್.ಎನ್.ಎಲ್ ಗುತ್ತಿಗೆ ಕಾರ್ಮಿಕರಾದ ಕಾಂ ಮುಸ್ತಾಪಾರವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿ ಬಹಿರಂಗ ಸಭೆಯ ಕಲಾಪಗಳನ್ನು ಆರಂಭಿಸಿದ್ದೂ ಭಾವನಾತ್ಮಕ ಕ್ಷಣವಾಗಿತ್ತು. ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿಗಳಾದ ಕಾಂ ಶ್ರೀರಾಮರೆಡ್ಡಿಯವರು ಮಾತನಾಡುತ್ತಾ ಜನತೆಯ ಸಂಕಷ್ಟಗಳಿಗೆ ಕೇಂದ್ರ ರಾಜ್ಯ ಸರ್ಕಾರಗಳ ಆರ್ಥಿಕ ನೀತಿಗಳೇ ಕಾರಣವಾಗಿದ್ದೂ ಅವು ಈ ದೇಶದ ಬಂಡವಾಳಶಾಹಿ ಮತ್ತು ಕಾರ್ಪೋರೇಟ್ ಕಂಪನಿಗಳಿಗೆ ಪೂರಕವಾಗಿವೆ, ಕೃಷಿ ಮತ್ತು ಕೈಗಾರಿಕೆಗಳು ವಿನಾಶದ ಅಂಚಿಗೆ ತಲುಪಿದ್ದೂ ಆಳುವ ಸರ್ಕಾರಗಳ ನಿರ್ಲಕ್ಷ್ಯಕ್ಕೆ ಒಳಗಾಗಿವೆ. ಅಭಿವೃದ್ಧಿಯ ಮುಖವಾಡದ ಹಿಂದೆ ನಡೆಯುತ್ತಿರುವ ಕೋಮುವಾದಿ ಪ್ರಯತ್ನಗಳನ್ನು ಬಗ್ಗುಬಡಿಯಬೇಕು, ಈ ದೇಶವನ್ನು ಯಾವುದೇ ಕಾರಣಕ್ಕೂ ಹಿಂದೂ ರಾಷ್ಟ್ರ ಮಾಡಲು ಬಿಡುವುದಿಲ್ಲ ಎಂದು ಎಚ್ಚರಿಸಿದರು. ಕಾಂ ನಿತ್ಯಾನಂದ ಸ್ವಾಮಿಯವರು, ರಾಜ್ಯ ಸಮಿತಿ ಸದಸ್ಯರಾದ ಕೆ.ಎಸ್ ಲಕ್ಷ್ಮಿಯವರು, ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ನೀಲಾ. ಕೆ ರವರು, ಕೃಷಿಕೂಲಿಕಾರರ ಸಂಘಟನೆಯ ಜಿಲ್ಲಾ ಮುಖಂಡರಾದ ಇಸಾಮೊದ್ದೀನ್ ರವರು ಮುಖ್ಯ ಅತಿಥಿಗಳಾಗಿ ಬಾಗವಹಿಸಿದ್ದರು. ಅಧ್ಯಕ್ಷತೆಯನ್ನು ಜಿಲ್ಲಾ ಕಾರ್ಯದರ್ಶಿಗಳಾದ ಪ್ರಭು ಸಂತೋಷ್ಕರ್‌ರವರು ವಹಿಸಿದ್ದರು.

ಪಕ್ಷಕ್ಕೆ ಬಂದ ಹಿರಿಯ ಸಂಗಾತಿಯಾಗಿ ಕಾಂ ಆರ್.ಪಿ ರಾಜಾರವರು ಕೆಂಪುಪತಾಕೆಯ ಧ್ವಜಾರೋಹಣವನ್ನು ನೆರವೇರಿಸಿದರು. ಪ್ರಜಾಪ್ರಭುತ್ವೀಯ ಚಳುವಳಿಯ ಭಾಗವಾಗಿ ಹುತಾತ್ಮರಾದ ಸಂಗಾತಿಗಳಿಗೆ ಇತರರಿಗೆ ಸೇರಿ ಕಾಂ ಅಂಬೂಬಾಯಿಯವರು ಶ್ರದ್ಧಾಂಜಲಿ ನಿರ್ಣಯನ್ನು ಮಂಡಿಸಿದರು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ನಿತ್ಯಾನಂದ ಸ್ವಾಮಿಯವರು ಪ್ರತಿನಿಧಿ ಅಧಿವೇಶನವನ್ನು ಉದ್ಘಾಟಿಸಿ ಮಾತನಾಡಿದರೆ ರಾಜ್ಯ ಸಮಿತಿ ಸದಸ್ಯರಾದ ಕಾಂ ಕೆ.ಎಸ್ ಲಕ್ಷ್ಮಿಯವರು ಸಮಾರೋಪ ಭಾಷಣ ಮಾಡಿದರು. ಪ್ರತಿನಿಧಿ ಅಧಿವೇಶನದಲ್ಲಿ 7 ಶಾಖೆಗಳನ್ನು ಪ್ರತಿನಿಧಿಸಿ ಬಂದ ಪ್ರತಿನಿಧಿಗಳು ಜಿಲ್ಲೆಯ ಜನರ ಭಾದಿತ ಸಮಸ್ಯೆಗಳನ್ನು ಸರಿಯಾದ ರೀತಿಯಲ್ಲಿ ಗುರುತಿಸಿ ಚರ್ಚಿಸಿ ಅವುಗಳ ಪರಿಹಾರಕ್ಕಾಗಿ ಹೋರಾಟವನ್ನು ಮುಂದಿನ ನಡೆಯನ್ನು ಗುರುತಿಸಿಕೊಂಡದ್ದೂ ಸ್ಪೂರ್ತಿಧಾಯಕವಾಗಿತ್ತು. ಅದರಲ್ಲೂ ಯುವಕರು ವಿವಿಧ ರಂಗಗಳಿಂದ ಬಂದು ಪಕ್ಷದ ಸದಸ್ಯರಾದವರು ಸಿ.ಪಿ.ಐ(ಎಂ) ಪಕ್ಷದ ಸದಸ್ಯರಾಗಿ ಗುರುತಿಸಿಕೊಳ್ಳುವುದು ಜೀವಮಾನದ ಹೆಮ್ಮೆಯ ವಿಚಾರವೆಂದು ಹೇಳಿಕೋಂಡದ್ದೂ ಎಲ್ಲರೊಳಗೂ ಸ್ಪೂರ್ತಿಯನ್ನು ಹೆಚ್ಚಿಸಿತ್ತು.

ಕೆ.ಎಸ್. ಲಕ್ಷ್ಮಿ

➡ ರೇಷೆಗಳನ್ನು ಹಮ್ಮಿಕೊಳ್ಳಲು ಉಳ್ಳಾಲ ವಲಯದ ವಿವಿಧ ಸಂಘ ಸಂಸ್ಥೆಗಳ ಜಂಟಿ ಸಭೆಯನ್ನು 2017 ನವಂಬರ್ 17 ರಂದು ಕುತ್ತಾರು ಮುನ್ನೂರಿನ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಮಾಲೋಚನಾ ಸಭೆಯೊಂದನ್ನು ಏರ್ಪಡಿಸಿತ್ತು.

ಡಿವೈಎಫ್‌ಐ ಉಳ್ಳಾಲ ವಲಯ ಸಮಿತಿ ಅಧ್ಯಕ್ಷ ಜೀವನ್‌ರಾಜ್ ಕುತ್ತಾರ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವಾರ್ತಾಭಾರತಿ ಪತ್ರಿಕೆಯ ಹಿರಿಯ ಉಪಸಂಪಾದಕರಾದ ಪುಷ್ಪರಾಜ್ ಬಿ.ಎನ್‌ರವರು ತಮ್ಮ ಪತ್ರಿಕಾ ತಂಡ ನಡೆಯಿಸಿದ್ದ ಅಧ್ಯಯನ ಆಧಾರದಲ್ಲಿ ಜಿಲ್ಲೆಯಲ್ಲಿರುವ ಮಾದಕ ದ್ರವ್ಯ ವ್ಯಸನದ ಮಾರಾಟ ಹಾಗೂ ಅಪಾಯಗಳ ಬಗ್ಗೆ ವಿವರಣೆ ನೀಡಿದರು. ಡಿವೈಎಫ್‌ಐ ದ.ಕ.ಜಿಲ್ಲಾ ಸಮಿತಿ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್ ಮಂಡಿಸಿದ ಅಭಿಯಾನದ ಕ್ರಿಯಾ ಯೋಜನೆಯ ಆಧಾರದಲ್ಲಿ ಸಭಿಕರು ಚರ್ಚೆಯಲ್ಲಿ ಭಾಗವಹಿಸಿದರು. ಸಿಪಿಐ(ಎಂ) ಉಳ್ಳಾಲ ವಲಯ ಮುಖಂಡ ಕೃಷ್ಣಪ್ಪ ಸಾಲ್ಯಾನ್, ಸಮುದಾಯದ ವಾಸುದೇವ ಉಚ್ಚಿಲ್ ಮತ್ತಿತರರು ಸಲಹೆ ಸೂಚನೆ ನೀಡಿದರು. ಗ್ರಾಮ ಪಂಚಾಯತ್ ಸದಸ್ಯರು ಹಾಗೂ ಸಂಸ್ಥೆಗಳ ಗಣ್ಯರು ತಮ್ಮ ಅಭಿಪ್ರಾಯ ನೀಡಿದರು. ಸುನಿಲ್ ಕುತ್ತಾರು ಸ್ವಾಗತಿಸಿ ವಂದಿಸಿದರು.

ಸಿಪಿಐ(ಎಂ) ಜಿಲ್ಲಾ ಸಮ್ಮೇಳನಗಳು

ಬೆಂಗಳೂರು ಉತ್ತರ : ನವೆಂಬರ್ 24–25, ಬೆಂಗಳೂರು.
ಧಾರವಾಡ : ನವೆಂಬರ್ 25–26, ಗಜೇಂದ್ರಗಡ
ಕೊಡಗು : ನವೆಂಬರ್ 26–27, ಸಿದ್ಧಾಪುರ.
ಬಿಜಾಪುರ : ಡಿಸೆಂಬರ್ 2–3 ಬಿಜಾಪುರ.
ಬೆಂಗಳೂರು ಗ್ರಾಮಾಂತರ : ಡಿಸೆಂಬರ್ 3, ನೆಲಮಂಗಲ.
ಬೆಳಗಾವಿ : ಡಿಸೆಂಬರ್ 2–3
ಗುಲ್ಬರ್ಗಾ: ಡಿಸೆಂಬರ್ 3–5, ಕಮಲಾಪುರ.
ಬಳ್ಳಾರಿ: ಡಿಸೆಂಬರ್ 9–10, ಕಂಪ್ಲಿ.
ತುಮಕೂರು : ಡಿಸೆಂಬರ್ 9–10 ತುಮಕೂರು.
ಯಾದಗಿರಿ : ಡಿಸೆಂಬರ್ 8–9
ಹಾಸನ : ಡಿಸೆಂಬರ್ 9–10, ಸಕಲೇಶಪುರ.
ಮಂಡ್ಯ : ಡಿಸೆಂಬರ್ 12–13
ಚಿಕ್ಕಬಳ್ಳಾಪುರ : ಡಿಸೆಂಬರ್ 13–14, ಗುಡಿಬಂಡೆ.
ಬೆಂಗಳೂರು ದಕ್ಷಿಣ : ಡಿಸೆಂಬರ್ 15–17, ಬೆಂಗಳೂರು.
ಮೈಸೂರು : ಡಿಸೆಂಬರ್ 16–17, ಹುಣಸೂರು
ದಕ್ಷಿಣ ಕನ್ನಡ : ಡಿಸೆಂಬರ್ 17–18, ಮಂಗಳೂರು.
ಉತ್ತರ ಕನ್ನಡ : ಡಿಸೆಂಬರ್ 17–18, ದಾಂಡೇಲಿ.
ಕೋಲಾರ : ಡಿಸೆಂಬರ್ 22–23, ಕೋಲಾರ.
ರಾಯಚೂರು : ಡಿಸೆಂಬರ್ 23–24, ರಾಯಚೂರು.
ದಾವಣಗೆರೆ : ಡಿಸೆಂಬರ್ 24–25, ದಾವಣಗೆರೆ.
ಉಡುಪಿ : ಡಿಸೆಂಬರ್ 24–26, ಬೈಂದೂರು.

ಅತಿಥಿ ಅಂಕಣ



ಪ್ರೊ. ರಾಜೇಂದ್ರ ಚೆನ್ನಿ

ಪದ್ಮಾವತಿ ಪ್ರಸಂಗ

ಮೊದಲಿನಿಂದಲೂ ಕ್ಷತ್ರಿಯ ಹಾಗೂ ರಾಜಪೂತ ಜಾತಿಗಳು ಭಾರತೀಯ ವರ್ಣಾಶ್ರಮದಲ್ಲಿ ತಮ್ಮನ್ನು ಮೇಲಿನ ಅಂತಸ್ತಿನಲ್ಲಿ ಇಟ್ಟುಕೊಳ್ಳಲು ಅನೇಕ ದಂತಕತೆಗಳನ್ನು, ಸುಳ್ಳು ಐತಿಹ್ಯಗಳನ್ನು ರಚಿಸಿಕೊಳ್ಳುತ್ತ ಬಂದಿವೆ. ಈ ಸಮುದಾಯಗಳ ಪ್ರಧಾನ ಚಾರಿತ್ರಿಕ ನಂಬಿಕೆಯೆಂದರೆ ಮುಸ್ಲಿಮ್ ಆಕ್ರಮಣಕಾರರ ಹಾಗೂ ಸಾಮ್ರಾಜ್ಯಗಳ ವಿರುದ್ಧ ಹೋರಾಡಿದ ಸಮುದಾಯಗಳು ತಾವು ಎನ್ನುವುದು. ಅನೇಕ ಪ್ರತಿಷ್ಠಿತ ರಾಜಪೂತ ಕುಟುಂಬಗಳು ಮುಸ್ಲಿಮ್ ರಾಜಮನೆತನಗಳ ಜೊತೆಗೆ ವಿವಾಹ ಸಂಬಂಧವನ್ನು ಇಟ್ಟುಕೊಂಡಿದ್ದನ್ನು ಹಾಗೂ ನೂರಾರು ರಾಜಪೂತ ಯೋಧರು, ಸೇನಾನಿಗಳು ಹಾಗೂ ಅಧಿಕಾರಿಗಳು ಮೊಘಲ್ ಸಾಮ್ರಾಜ್ಯಕ್ಕಾಗಿ ದುಡಿದಿದ್ದರು ಎನ್ನುವುದನ್ನು ಈ ಕಥನವು ಮರೆಮಾಚುತ್ತದೆ. ಈ ಮುಸ್ಲಿಮ್ ವಿರೋಧಿ, ದೇಶಪ್ರೇಮಿ ಕಥನದ ಪ್ರಮುಖ ಆಧಾರವೆಂದರೆ ಶತ್ರುಗಳ ದಾಳಿಗೆ ಬಲಿಯಾಗುವ ಬದಲು ರಾಜಪೂತ ಸ್ತ್ರೀಯರು ಆತ್ಮ ಸಮರ್ಪಣೆ ಮಾಡಿಕೊಂಡರು ಎನ್ನುವುದು.

ಇಷ್ಟೊಂದು ಹಿಂಸೆ ಹಾಗೂ ಬೆದರಿಕೆಗಳು ಈ ಪ್ರಸಂಗದಲ್ಲಿ ಇರದಿದ್ದರೆ ಇದನ್ನು ಆಧುನಿಕ ಭಾರತದ ಅತ್ಯಂತ ಅಸಂಗತ ಪ್ರಸಂಗಗಳಲ್ಲಿ ಒಂದು ಎಂದುಕೊಂಡು ಸುಮ್ಮನಿರಬಹುದಿತ್ತು. ಅಥವಾ ನಮ್ಮಲ್ಲಿ ರಾಜಕೀಯವು ಸಿನಿಮಾದ ಎಲ್ಲಾ ತಂತ್ರಗಳನ್ನು ಅಳವಡಿಸಿಕೊಂಡು ಸಿನಿಮೀಯವಾಗಿರುವುದರ ಉದಾಹರಣೆಯಾಗಿ ನೋಡಬಹುದಿತ್ತು. ಆದರೆ 'ಪದ್ಮಾವತಿ' ಚಲನಚಿತ್ರ ಪ್ರಸಂಗವು ಭಾರತೀಯ ರಾಜಕೀಯವು ತಲುಪಿರುವ ಅಸಹ್ಯಕರ ಹಾಗೂ ಅಪಾಯಕಾರಿ ಸ್ಥಿತಿಯ ದ್ಯೋತಕವಾಗಿದೆ. ಈಗಿರುವ ರಾಜಕೀಯ ವ್ಯವಸ್ಥೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಆಖೈರಾಗಿ ಮುಗಿಸಿಬಿಡುವ ಹಂತದಲ್ಲಿ ಏನೆಲ್ಲ ಮಾಡಬಹುದು ಎನ್ನುವುದರ ಸಂಕೇತವು ಆಗಿದೆ.

ಇಂಥ ಪ್ರಸಂಗವು ಇಂದೇ ಹುಟ್ಟಿ ಬೆಳೆದುದಲ್ಲ. ಇದರ ಹಿಂದೆ ಸ್ವಾತಂತ್ರ್ಯೋತ್ತರ ಇತಿಹಾಸದಲ್ಲಿ ಭಾರತೀಯ ಪ್ರಜಾತಂತ್ರವು ಸೋಲುತ್ತ ಬಂದಿರುವ ಹಿನ್ನೆಲೆಯೂ ಇದೆ. ಭಾರತೀಯ ಸ್ವಾತಂತ್ರ್ಯ ಹೋರಾಟದ ಆರಂಭದ ಕಾಲದಿಂದಲೂ ಪ್ರಜಾತಂತ್ರ ಹಾಗೂ ಸೆಕ್ಯೂಲರ್ ವಾದದಲ್ಲಿ ಕಿಂಚಿತ್ತೂ ನಂಬಿಕೆಯಿಲ್ಲದ ಬಲಪಂಥೀಯ ಚಿಂತನೆಯೊಂದನ್ನು ಇಲ್ಲಿಯ ಬಲಪಂಥೀಯ ಸಂಘಟನೆಗಳು ಚಾಲ್ತಿಗೆ ತಂದಿದ್ದವು. ಸ್ವತಂತ್ರ ಭಾರತವು ಹಿಂದೂ ರಾಷ್ಟ್ರವಾಗಬೇಕೆನ್ನುವ ಉದ್ದೇಶವುಳ್ಳ ಈ ಸಂಘಟನೆಗಳು ಗಾಂಧಿ ಪ್ರೇರಿತ ಸ್ವಾತಂತ್ರ್ಯ ಚಳುವಳಿಯಿಂದ ದೂರವುಳಿದು ಅಂದಿನ ಮಹಾಮಂಥನದಲ್ಲಿ ಹೊರಹೊಮ್ಮಿದ ಪ್ರಜಾಪ್ರಭುತ್ವವಾದಿ, ಸೆಕ್ಯೂಲರ್‌ವಾದಿ ಚಿಂತನೆಗಳಿಂದ ದೂರ ಉಳಿದವು. ಬಹಳ ಹಿಂದೆಯೆ ಮಹಾತ್ಮ ಫುಲೆಯವರು ಗುರುತಿಸಿದಂತೆ ಭಾರತದ ಇತಿಹಾಸದುದ್ದಕ್ಕೂ ಶೋಷಕ ವರ್ಗವಾಗಿ ದಲಿತರನ್ನು, ಹಿಂದುಳಿದ ವರ್ಗದವರನ್ನು ದಮನಮಾಡಿಕೊಂಡು ಬಂದಿದ್ದ ಬ್ರಾಹ್ಮಣ–ಭಟ್‌ಜಿ–ಶೇಟ್‌ಜಿ ಸಮುದಾಯಗಳೇ ಈ ಕಾಲದಲ್ಲೂ ಒಂದುಗೂಡಿ ಈ ಬಲಪಂಥೀಯ ಸಂಘಟನೆಗಳನ್ನು ಸ್ಥಾಪಿಸಿದವು. ಅದರಲ್ಲಿ ವಿಶೇಷವಾಗಿ ಬ್ರಾಹ್ಮಣವರ್ಗವು ಸಾವಿರಾರು ವರ್ಷಗಳಿಂದ ಉಳಿದುಬಂದ ಅಸಮಾನತೆಗಳನ್ನು ಆಧುನಿಕ ಭಾರತದಲ್ಲಿಯೂ ಮುಂದುವರೆಸಲು ಪಣತೊಟ್ಟಿತ್ತು. ಹೀಗಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿ ತನ್ನದೇ ಕಾರಣಗಳಿಗಾಗಿಯಾದರೂ ಸರಿ, ಕೆಲವು ಸುಧಾರಣೆಗಳನ್ನು, ಕಾನೂನುಗಳನ್ನು ತಂದರೆ ಅವನ್ನು ವಿರೋಧಿಸುತ್ತ ಬಂದಿತು. "ಮುಸ್ಲಿಮರು ಹಾಗೂ ಕ್ರಿಶ್ಚಿಯನ್‌ರು ದರೋಡೆಕೋರರು" ಎಂದು ಹೇಳಿದ ದುಷ್ಟ ಬ್ರಾಹ್ಮಣ ಚಿಂತಕರೇ ಈ ಸಂಘಟನೆಗಳ ಮಾರ್ಗದರ್ಶಿಯಾದರು. ಆದರೆ ಭಾರತದ ಬಹುಸಂಖ್ಯಾತರು ಸ್ವಾತಂತ್ರ್ಯ ಚಳುವಳಿಯ ಪ್ರವಾಹದಲ್ಲಿ ಗಾಂಧಿ, ಅಂಬೇಡ್ಕರ್‌ರಂಥ ನಾಯಕರಿಂದಾಗಿ ಈ ಸಂಘಟನೆಗಳು ಸಾರ್ವಜನಿಕ ಮುಖವೇ ಇಲ್ಲದ ರಹಸ್ಯವಾಗಿ ಕೆಲಸ ಮಾಡುವ ಸಂಘಟನೆಗಳಾಗಿಯೇ ಉಳಿಯುವಂತೆ ಮಾಡಿದವು. ಅವು ಭಾರತದ ವಿಭಜನೆಯ ಸಂದರ್ಭದಲ್ಲಿ ಮಾತ್ರ ಸಕ್ರಿಯವಾಗಿ ಅಂದಿನ ಹಿಂಸೆಯಲ್ಲಿ ಭಾಗವಹಿಸಿದವು. ಗಾಂಧೀಜಿಯ ಕೊಲೆಗೆ ಕಾರಣವಾಗುವ ಸಿದ್ಧಾಂತಗಳನ್ನು ರೂಪಿಸಿಕೊಟ್ಟವು.

ಸ್ವಾತಂತ್ರ್ಯ ನಂತರವೂ ಕೋಮುಗಲಭೆ ಹಾಗೂ ಹಿಂಸೆಗಳಲ್ಲಿ ಈ ಸಂಘಟನೆಗಳ ನೇರವಾದ ಪಾತ್ರವಿದೆ. ಈ ಸಂಘಟನೆಗಳು ತಮ್ಮ ಚಿಂತನೆಯನ್ನು ಕಟ್ಟಿಕೊಂಡಿದ್ದು ಭಾರತದ ಇತಿಹಾಸವನ್ನು ಪುನರ್‌ರಚಿಸುವ ಪ್ರಯತ್ನದ ಮೇಲೆ. ವೇದ, ಪುರಾಣಗಳ ಶ್ರೇಷ್ಠ ಹಿಂದೂ ನಾಗರೀಕತೆಯ ಕಲ್ಪನೆ, ಹಿಂದೂ ಸಾಮ್ರಾಜ್ಯಗಳ ಸ್ಥಾಪನೆ ಮತ್ತು ನಂತರ "ಹೊರಗಿನ ದಾಳಿಕೋರರಾದ ಮುಸಲ್ಮಾನರ ದಾಳಿಗಳಿಂದ" ಈ ರಾಷ್ಟ್ರಕ್ಕೆ ಆದ ಹಿನ್ನಡೆ ಇವೇ ಮುಂತಾದ ಆಧಾರಗಳ ಮೇಲೆ ಬಲಪಂಥೀಯ ಚರಿತ್ರೆಯ ಬರಹವನ್ನು ಕಟ್ಟಲಾಯಿತು. ಇದರಲ್ಲಿ ಜಾತಿವ್ಯವಸ್ಥೆಯು ವಿವೇಕಪೂರ್ಣವಾದ ಸಾಮಾಜಿಕ ಸಾಮರಸ್ಯದ ವ್ಯವಸ್ಥೆಯಾಗಿ ಬಿಂಬಿತವಾದರೆ, ಅಸ್ಪೃಶ್ಯತೆಯು ಇದ್ದಿತೆನ್ನುವ ಪ್ರಸ್ತಾಪವೂ ಇರುವುದಿಲ್ಲ. ಈ ಚಿಂತನೆಯ ಉದ್ದೇಶವು ಬ್ರಾಹ್ಮಣ–ಭಟ್‌ಜಿ ಅಧಿಕಾರವನ್ನು ಗಟ್ಟಿಗೊಳಿಸುವುದಾಗಿದೆ. ಇದು ಸಫಲವಾಗಬೇಕಾದರೆ ಜನಸಮುದಾಯವು ವೈಚಾರಿಕ ಕತ್ತಲೆಯಲ್ಲಿ ಇರುವುದು ಅನಿವಾರ್ಯ. ಜಾತಿ ವ್ಯವಸ್ಥೆಯು ಇರುವುದು ಅನಿವಾರ್ಯ. ಅವುಗಳ ಮಧ್ಯ ಇರುವ ಅಸಮಾನತೆಯನ್ನು ಮರೆಸುವಂತೆ ಅವುಗಳಿಗೆಲ್ಲ ಸಮಾನವಾದ 'ಹಿಂದೂ' ಅಸ್ಮಿತೆಯನ್ನು ಕೊಡಲಾಗುತ್ತದೆ. ಆದರೆ ಸಹಸ್ರಾರು ವರ್ಷಗಳ ಜಾತಿ ದ್ವೇಷ, ಕೆಳಜಾತಿಗಳ ಬಗೆಗಿನ ತಿರಸ್ಕಾರ ಇವುಗಳನ್ನು ಬಿಡಲಾಗುವುದಿಲ್ಲ.

ಜಾತಿಗಳ ಹುಸಿಚರಿತ್ರೆ

ಹೀಗಾಗಿ ಸ್ವಾತಂತ್ರ್ಯದ ನಂತರ ವಿವಿಧ ಜಾತಿಗಳು ತಮ್ಮದೇ ಸಂಘಟನೆಗಳನ್ನು ರಚಿಸಿಕೊಂಡು, ತಮ್ಮ ಸಮುದಾಯದ ಹುಸಿಚರಿತ್ರೆಯನ್ನು ಕಟ್ಟಿಕೊಂಡು ಅವಶ್ಯವಿದ್ದರೆ ಪ್ರಜಾಪ್ರಭುತ್ವದ ಮೂಲ ನಂಬಿಕೆಗಳನ್ನು ನಡುವಳಿಕೆಗಳನ್ನು ನಾಶಮಾಡಿದರೂ ಬಲಪಂಥೀಯ ಸಂಘಟನೆಗಳಿಗೆ ಯಾವುದೇ ಆಕ್ಷೇಪಣೆ ಇರುವುದಿಲ್ಲ. ಏಕೆಂದರೆ ಸ್ಥೂಲವಾಗಿ ಈ ಸಂಘಟನೆಗಳು ಬಲಪಂಥೀಯ ರಾಜಕೀಯದ ಪರವಾಗಿಯೇ ಇರುತ್ತವೆ. ಜಾತಿ ವಿನಾಶ, ಸೆಕ್ಯೂಲರ್‌ವಾದ, ವೈಚಾರಿಕತೆ ಇವುಗಳನ್ನು ವಿರೋಧಿಸುತ್ತವೆ. ಉದಾಹರಣೆಗೆ ಕರ್ನಾಟಕದ ಪ್ರಬಲ ಜಾತಿಗಳಲ್ಲಿ ಒಂದಾದ ಲಿಂಗಾಯತ ಜಾತಿ ಸಮೂಹವನ್ನು ನೋಡಬಹುದು. 19ನೇ ಶತಮಾನದ ಕೊನೆಗೆ, 20ನೇ ಶತಮಾನದ ಆರಂಭದಲ್ಲಿ ಲಿಂಗಾಯತರು ತಮ್ಮ ಸಂಘಟನೆಗಳನ್ನು ಕಟ್ಟಿಕೊಂಡರು. ಶಿಕ್ಷಣ, ಉದ್ಯೋಗ, ರಾಜಕೀಯ ಪ್ರತಿನಿಧಿತ್ವ ಇವುಗಳಿಗಾಗಿ ಈ ಸಂಘಟನೆಗಳು ದುಡಿದವು. ಆದರೆ ಕ್ರಮೇಣವಾಗಿ ಇವು ಸಮಾನತೆಯ ಚಿಂತನೆಯ ಆಕರವಾಗಿದ್ದ ವಚನಗಳಲ್ಲಿಯ ಮೌಲ್ಯಗಳನ್ನು ಬದಿಗೊತ್ತಿ ಬಲಪಂಥೀಯ ನಿಲುವಿನ ಕಡೆಗೆ ವಾಲತೊಡಗಿದವು. ಹೀಗಾಗಿಯೇ ಕಾಂಗ್ರೆಸ್ ಪಕ್ಷ ಲಿಂಗಾಯತರನ್ನು ಅಲಕ್ಷ್ಯ ಮಾಡಿದೆ, ದೇವೇಗೌಡರು, ಕೃಷ್ಣ ಇವರಿಂದಾಗಿ ಕರ್ನಾಟಕ ಸರಕಾರದಲ್ಲಿ ಅಧಿಕಾರಿಗಳು ಕೇವಲ ಒಕ್ಕಲಿಗರಾಗಿದ್ದಾರೆ, ಇವೇ ಮುಂತಾದ ನಂಬಿಕೆಗಳನ್ನು ಬಳಸಿಕೊಂಡು ಬಿ.ಜೆ.ಪಿ ಲಿಂಗಾಯತರ ಅದರಲ್ಲೂ ಉತ್ತರ ಕರ್ನಾಟಕದ ಲಿಂಗಾಯತರ ಹಿತಾಸಕ್ತಿಯನ್ನು ಕಾಪಾಡುತ್ತದೆಯೆನ್ನುವ ತಪ್ಪು ನಿರ್ಧಾರದಿಂದಾಗಿ ಆ ಪಕ್ಷವನ್ನು ಬೆಂಬಲಿಸತೊಡಗಿತು. ಭಾರತದ, ಅದರಲ್ಲೂ ಕರ್ನಾಟಕದ ಸಾಮಾಜಿಕ–ರಾಜಕೀಯ ವಿದ್ಯಮಾನವೆಂದರೆ ಲಿಂಗಾಯತ, ಒಕ್ಕಲಿಗ, ಕುರುಬ ಜಾತಿಗಳ ಸಂಘಟನೆಗಳು ಬೆಳೆದಂತೆ, ಅದೇ ಮಾದರಿಯಲ್ಲಿ ಇತರ ಜಾತಿ ಸಂಘಟನೆಗಳೂ, ಸಂಘಟಿತವಾಗಿ ತೊಡಗಿದವು.



ಈ ರಾಜಕೀಯ ಕ್ರಿಯೆಗೆ ಅನಿವಾರ್ಯವಾದುದೆಂದರೆ ಪ್ರತಿಯೊಂದು ಜಾತಿ–ಸಮುದಾಯವೂ ತನ್ನದೇ ಆದ "ಚರಿತ್ರೆಯನ್ನು" ಕಟ್ಟಿಕೊಳ್ಳುತ್ತದೆ. ತನ್ನದೇ ಆದ ಧಾರ್ಮಿಕ ಗುರುಗಳನ್ನು ಹಾಗೂ ಸಾಂಸ್ಕೃತಿಕ ನಾಯಕರುಗಳನ್ನು ಹುಡುಕಿಕೊಳ್ಳುತ್ತದೆ. ಅಲ್ಲದೇ ಈ ಗುರುಗಳ ಬಗ್ಗೆ, ನಾಯಕರುಗಳ ಬಗ್ಗೆ ಅಥವಾ ಈ ಸಮುದಾಯವು ಹಿಂದೆ ಅನುಸರಿಸಿದ್ದ ಕಸುಬುಗಳ ಬಗ್ಗೆ ಯಾವುದೇ ಚರ್ಚೆ ನಡೆದರೆ ಅದನ್ನು "ತನ್ನ ಭಾವನೆಗಳಿಗಾದ" ಅನ್ಯಾಯವೆಂದು ಸಾರ್ವಜನಿಕ ಪ್ರತಿಭಟನೆಯಲ್ಲಿ ಈ ಸಮುದಾಯಗಳು ತೊಡಗುತ್ತದೆ. ವಿಶೇಷವಾಗಿ ಯಾವುದೇ ಚರಿತ್ರೆಕಾರರು, ಬರಹಗಾರರು ವಿಭಿನ್ನವಾದ ವಾಸ್ತವಗಳನ್ನು ಅಥವಾ ವಾದಗಳನ್ನು ಮಂಡಿಸಿದರೆ ನೇರವಾಗಿ ಹಿಂಸೆಗೆ ಇಳಿಯುತ್ತವೆ. ಉದಾಹರಣೆಗೆ ಪಾಶ್ಚಾತ್ಯ ವಿದ್ವಾಂಸನೊಬ್ಬ ಶಿವಾಜಿಯ ಬಗ್ಗೆ ಗಂಭೀರವಾದ ಅಧ್ಯಯನ ಮಾಡಿ ಬರೆದದ್ದನ್ನು ಒಪ್ಪದ ಸಮುದಾಯಗಳು ಅವನ ಗ್ರಂಥವನ್ನು ನಿಷೇಧಿಸುವ ಜೊತೆಗೆ ಅವನು ಕೆಲಸ ಮಾಡಿದ ಹಾಗೂ ಭಾರತದ ಶ್ರೇಷ್ಠ ಅಧ್ಯಯನ ಸಂಸ್ಥೆಯನ್ನು ಭಾಗಶಃ ನಾಶ ಮಾಡಿದವು. ಮುಸ್ಲಿಮ್ ಸಮುದಾಯವು ಸಲ್ಮಾನ್ ರಶ್ದಿಯ ಕಾದಂಬರಿಯನ್ನು ನಿಷೇಧಿಸುವುದರಲ್ಲಿ ಯಶಸ್ವಿಯಾಯಿತು.

ರಾಜಪೂತ್ ದಂತಕತೆಗಳಿಗೆ ಅಪಾಯ..

ಈಗ ಬಿ.ಜೆ.ಪಿ ಆಡಳಿತದಲ್ಲಿ ದೇಶದ ಉದ್ದಕ್ಕೂ ಹಿಂಸೆ, ನಿಷೇಧ, ಬೆದರಿಕೆಗಳ ಪರ್ವವೇ ಆರಂಭವಾಗಿದೆ. ಕಾರಣ ಸರಳವಾಗಿದೆ. ಈ ಹಿಂದೆ ಹೇಳಿದಂತೆ ಯಾವುದೇ ಬಗೆಯ ಅವೈಚಾರಿಕತೆ, ಕರ್ಮಠ ಚಿಂತನೆ, ಇತಿಹಾಸವೆನ್ನುವ ಜ್ಞಾನಪ್ರಕಾರದ ಮೇಲಿನ ದಾಳಿ, ಕಲೆಯ ಕ್ರಿಯಾಶೀಲ ಅಭಿವ್ಯಕ್ತಿ ಸ್ವಾತಂತ್ರ್ಯಗಳ ವಿನಾಶಗಳನ್ನು ಬಲಪಂಥೀಯ ಸಂಸ್ಥೆಗಳು ಅತ್ಯಂತ ಪ್ರೀತಿಯಿಂದ ಸ್ವಾಗತಿಸುತ್ತವೆ.

ಈ ಹಿನ್ನೆಲೆಯಲ್ಲಿ 'ಪದ್ಮಾವತಿ' ಪ್ರಸಂಗದಲ್ಲಿ ಹೊಸದೇನು ಇಲ್ಲ. ಮೊದಲಿನಿಂದಲೂ ಕ್ಷತ್ರಿಯ ಹಾಗೂ ರಾಜಪೂತ ಜಾತಿಗಳು ಭಾರತೀಯ ವರ್ಣಾಶ್ರಮದಲ್ಲಿ ತಮ್ಮನ್ನು ಮೇಲಿನ ಅಂತಸ್ತಿನಲ್ಲಿ ಇಟ್ಟುಕೊಳ್ಳಲು ಅನೇಕ ದಂತಕತೆಗಳನ್ನು, ಸುಳ್ಳು ಐತಿಹ್ಯಗಳನ್ನು ರಚಿಸಿಕೊಳ್ಳುತ್ತ ಬಂದಿವೆ. ಈ ಸಮುದಾಯಗಳ ಪ್ರಧಾನ ಚಾರಿತ್ರಿಕ ನಂಬಿಕೆಯೆಂದರೆ ಮುಸ್ಲಿಮ್ ಆಕ್ರಮಣಕಾರರ ಹಾಗೂ ಸಾಮ್ರಾಜ್ಯಗಳ ವಿರುದ್ಧ ಹೋರಾಡಿದ ಸಮುದಾಯಗಳು ತಾವು ಎನ್ನುವುದು. ಅನೇಕ ಪ್ರತಿಷ್ಠಿತ ರಾಜಪೂತ ಕುಟುಂಬಗಳು ಮುಸ್ಲಿಮ್ ರಾಜಮನೆತನಗಳ ಜೊತೆಗೆ ವಿವಾಹ ಸಂಬಂಧವನ್ನು ಇಟ್ಟುಕೊಂಡಿದ್ದನ್ನು ಹಾಗೂ ನೂರಾರು ರಾಜಪೂತ ಯೋಧರು, ಸೇನಾನಿಗಳು ಹಾಗೂ ಅಧಿಕಾರಿಗಳು ಮೊಘಲ್ ಸಾಮ್ರಾಜ್ಯಕ್ಕಾಗಿ ದುಡಿದಿದ್ದರು ಎನ್ನುವುದನ್ನು ಈ ಕಥನವು ಮರೆಮಾಚುತ್ತದೆ.

ಈ ಮುಸ್ಲಿಮ್ ವಿರೋಧಿ, ದೇಶಪ್ರೇಮಿ ಕಥನದ ಪ್ರಮುಖ ಆಧಾರವೆಂದರೆ ಶತ್ರುಗಳ ದಾಳಿಗೆ ಬಲಿಯಾಗುವ ಬದಲು ರಾಜಪೂತ ಸ್ತ್ರೀಯರು ಆತ್ಮ ಸಮರ್ಪಣೆ ಮಾಡಿಕೊಂಡರು ಎನ್ನುವುದು. ತಮ್ಮ ದೇಹಗಳ ಪಾವಿತ್ರ್ಯತೆಯನ್ನು ಮುಸ್ಲಿಮ್ ದಾಳಿಕೋರರಿಂದ ಉಳಿಸಿಕೊಂಡಿದ್ದರಿಂದ ಇವರನ್ನು ಆರಾಧಿಸಲಾಗುತ್ತದೆ. ಹೀಗಾಗಿ ಈ ಚರಿತ್ರೆಯ ಕಥನವನ್ನು ತಿರುಚಲಾಗಿದೆ. ಎನ್ನುವ ಕೇವಲ ವದಂತಿಯಿಂದಲೇ ಈ ಸಮುದಾಯ ಸಂಘಟನೆಗಳು ಸಾರ್ವಜನಿಕ ಹಿಂಸೆಗೆ ಇಳಿದಿವೆ. ಅಲ್ಲದೆ 'ಪದ್ಮಾವತಿ' ಚಿತ್ರದ ನಿರ್ದೇಶಕರನ್ನು ಕೊಲ್ಲುವುದಾಗಿಯೇ ಹಾಗೂ ನಾಯಕಿ ದೀಪಿಕಾ ಪಡುಕೋಣೆಯ ಮೂಗನ್ನು ಕತ್ತರಿಸುವುದಾಗಿಯೂ ಸಾರ್ವಜನಿಕ ಹೇಳಿಕೆಗಳನ್ನು ಮಾಧ್ಯಮದ ಎದುರಿಗೇ ಕೊಟ್ಟಿವೆ. ಬಾಳ ಠಾಕ್ರೆಯವರ ಸಾವಿನ ಸಂದರ್ಭದಲ್ಲಿ ಮುಂಬೈ ಬಂದ್ ಬಗ್ಗೆ ಒಂದು ಇ–ಮೈಲ್ ಸಂದೇಶ ಕಳಿಸಿದ್ದಕ್ಕಾಗಿ ಇಬ್ಬರು ಯುವತಿಯರನ್ನು ಬಂಧಿಸಿದ್ದ ಭಾರತದ ನಿರ್ಲಜ್ಜ ಪೋಲೀಸರು ಸುಮ್ಮನಿದ್ದಾರೆ. ತಾವೇ ಇಂದಿನ ಭಾರತದ ಉದ್ಧಾರಕರು ಎನ್ನುವ ಹಾಗೆ ಎಲ್ಲದರಲ್ಲೂ ಮೂಗು ತೂರಿಸುವ ನಮ್ಮ ನ್ಯಾಯಾಲಯಗಳು ಸುಮ್ಮನಿವೆ. ಈ ಲೇಖನ ಬರೆಯುವ ಹೊತ್ತಿಗೆ ಬಿ.ಜೆ.ಪಿಯ ಮೂರು ರಾಜ್ಯಗಳ ಮುಖ್ಯಮಂತ್ರಿಗಳು 'ಪದ್ಮಾವತಿ'ಯ ವಿರೋಧಕ್ಕೆ ಬೆಂಬಲ ನೀಡಿದ್ದಾರೆ. ಅನೇಕ ಮಂತ್ರಿಗಳು ಕೂಡ.

"fringe elements" ಅಲ್ಲ! "ಕೇಂದ್ರ"ದ ಆಶೀವಾದದಿಂದ..

ನಮ್ಮ ಮೂರ್ಖ ಮಾಧ್ಯಮಗಳು " ಇದು "fringe elements" ಅಂದರೆ ಬಿ.ಜೆ.ಪಿ ಅಥವಾ ಆರ್.ಎಸ್.ಎಸ್ ಅಲ್ಲ, ಕೆಲವು ತುಂಡು ಸಂಘಟನೆಗಳು ಮಾಡುತ್ತಿರುವ ಕೆಲಸವೆಂದು ಹೇಳಿ ಎಲ್ಲರನ್ನೂ ದಾರಿತಪ್ಪಿಸುತ್ತಿವೆ. ಬಲಪಂಥೀಯ ಸಂಘಟನೆಗಳಲ್ಲಿ ಹಾಗೂ ರಾಜಕೀಯ ಪಕ್ಷಗಳಲ್ಲಿ "ಕೇಂದ್ರ" ಹಾಗೂ "fringe" ಗಳಿರುವುದಿಲ್ಲ. ಪದ್ಮಾವತಿ ವಿದ್ಯಮಾನಗಳು ನೇರವಾಗಿ ದೇಶದ ಪ್ರಧಾನಮಂತ್ರಿಗಳು ಹಾಗೂ ಆರ್.ಎಸ್.ಎಸ್. ನಾಯಕರ ಆಶೀರ್ವಾದದಿಂದಲೇ ನಡೆಯುತ್ತಿವೆ. ಈ ವಿದ್ಯಮಾನಗಳು ಹಿಂದೂ ಮತಗಳನ್ನು ಹಾಗೂ ಮನಸ್ಸುಗಳನ್ನು ವಿಭಾಗಿಸುವ ಕೆಲಸಗಳು ಮುಗಿದ ಮೇಲೆ ಇದೆಲ್ಲವು fringe element ನಿಂದ ನಡೆದವು ಎಂದು ಆರೋಪಿಸಲಾಗುತ್ತವೆ ! ಈ ಆರೋಪವು ನಿಜವೆನ್ನುವುದಾದರೆ fringe elements ಗಳ ಮೇಲೆ ಕೂಡ ನಿಯಂತ್ರಣವಿಲ್ಲದ ಕೇಂದ್ರ ಸರ್ಕಾರವು ತಕ್ಷಣ ಅಧಿಕಾರವನ್ನು ತ್ಯಜಿಸಬೇಕಲ್ಲವೆ? ಇದು ನಮ್ಮ ಮಾಧ್ಯಮ ಮೂರ್ಖರಿಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಅವುಗಳ ಒಡೆಯರು ಮಹಾತ್ಮ ಫುಲೆಯವರ ಭಾಷೆಯಲ್ಲಿ ಭಟ್‌ಜಿ–ಶೇಠ್‌ಜಿ ವರ್ಗದ ಶೇಠ್‌ಜಿಗಳು.

ಇಡೀ ಪ್ರಸಂಗವನ್ನು ಬಲಪಂಥೀಯ ಸರಕಾರಗಳು ತಮ್ಮ ಪರವಾಗಿದೆ ಎಂದು ಬೀಗುತ್ತಿವೆ. ಆದರೆ ಅವೈಚಾರಿಕ, ಹಿಂಸಾತ್ಮಕ ರಾಜಕೀಯ ಎಲ್ಲವನ್ನೂ ನಾಶಮಾಡುತ್ತದೆ. ಉದಾಹರಣೆಗೆ ಕರ್ನಾಟಕದ ಕನ್ನಡ ಸಂಘಟನೆಗಳು ದೀಪಿಕಾ ಪಡುಕೋಣೆ ಕನ್ನಡ ಪುತ್ರಿ, ಕರ್ನಾಟಕದ ಮಗಳು, ಅವಳ ಮೂಗಿನ ತಂಟೆಗೆ ಹೋದರೆ ಕರ್ನಾಟಕದಲ್ಲಿರುವ ಪ್ರತಿಭಟನಾನಿರತ ಸಮುದಾಯದ ಎಲ್ಲ ಸದಸ್ಯರ ಮೂಗುಗಳನ್ನು "ನೋಡಿಕೊಳ್ಳುತ್ತೇವೆ" ಎಂದೇನಾದರೂ ಶುರುಮಾಡಿದರೆ? ಒಂದು ಮಾತಂತೂ ಸತ್ಯ "Those who live by the sword shall perish by the sword" ಅನ್ನುವ ಹಾಗೆ ಅವೈಚಾರಿಕ, ಹಿಂಸಾಪರ ರಾಜಕೀಯವನ್ನು ಉತ್ತೇಜಿಸಿ, ಬಳಸಿಕೊಳ್ಳುವ ಬಲಪಂಥೀಯ ರಾಜಕಾರಣವು ಅದರಿಂದಲೇ ನಾಶವಾಗುತ್ತದೆ. ●

‘ಪದ್ಮಾವತಿ’ಗೆ ಅಡ್ಡಿ: ಹಿಂದುತ್ವದ ಸಾಂಸ್ಕೃತಿಕ ದಬ್ಬಾಳಿಕೆಗೆ ತಾಜಾ ದೃಷ್ಟಾಂತ



* ಪ್ರಕಾಶ್ ಕಾರಟ್

‘ಪದ್ಮಾವತಿ’ಯನ್ನು ದಮನಿಸಲು ನಡೆಸುತ್ತಿರುವ ಪ್ರಯತ್ನ ಕೇವಲ ಮತ ಬ್ಯಾಂಕ್ ರಾಜಕೀಯ ಅಲ್ಲ. ಇದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಿಸುವ ಹಾಗೂ ಯಾವುದೇ ಸಾಂಸ್ಕೃತಿಕ ನಿರ್ಮಾಣಗಳು ಹಿಂದುತ್ವದ ಪ್ರತಿಗಾಮಿ ಮೌಲ್ಯಗಳಿಗೆ ಅನುಗುಣವಾಗಿರುವಂತೆ ಒತ್ತಡ ಹೇರುವ ಕುತ್ಸಿತ ಪ್ರಯತ್ನವಾಗಿದೆ. ಸಂಸ್ಕೃತಿಯನ್ನು ನಿಯಂತ್ರಿಸಲಿಕ್ಕಾಗಿ ಜನಜಂಗುಳಿಯನ್ನು ಪೊಲೀಸ್‌ಗಿರಿ ನಡೆಸಲು ಬಳಸಿಕೊಳ್ಳುತ್ತಿರುವುದು ಗೋರಕ್ಷಣೆಯ ಹೆಸರಿನಲ್ಲಿ ಈಗಾಗಲೇ ನಡೆಸಲಾಗುತ್ತಿರುವ ದೌರ್ಜನ್ಯಗಳನ್ನು ಹೋಲುತ್ತದೆ.

‘ಪದ್ಮಾವತಿ’ ಚಲನಚಿತ್ರದ ಬಗ್ಗೆ ನಡೆಸುತ್ತಿರುವ ಹೇಯ ಪ್ರತಿಭಟನೆ ಮತ್ತು ಅದರ ನಿರ್ದೇಶಕ ಹಾಗೂ ಮುಖ್ಯ ನಾಯಕಿಯ ತಲೆ ಕಡಿಯುವುದಾಗಿ ಹಾಕಿದ ಬೆದರಿಕೆಗಳು ಗುಂಪು ಗೂಂಡಾ ಆಡಳಿತವು ಯಾವ ರೀತಿಯಲ್ಲಿ ಮೋದಿ ರಾಜ್ಯಭಾರದ ಪ್ರಮುಖ ಲಕ್ಷಣವಾಗಿದೆ ಎಂಬುದರ ಸ್ಪಷ್ಟ ಉದಾಹರಣೆಯಾಗಿದೆ. ಯಾವುದೇ ಕಲಾತ್ಮಕ ಅಥವಾ ಸಾಂಸ್ಕೃತಿಕ ನಿರ್ಮಾಣಗಳು ಸಂಕುಚಿತ–ಪ್ರತಿಗಾಮಿ ಮೌಲ್ಯಗಳಿಗೆ ಅನುಗುಣವಾಗಿಲ್ಲದಿದ್ದರೆ ಅವುಗಳು ವಿಚ್ಛಿದ್ರಕಾರಿ ಗುಂಪುಗಳಿಂದ ಸುರಕ್ಷಿತವಾಗಿರುವುದಿಲ್ಲ ಎನ್ನುವುದನ್ನು ಈ ಬೆಳವಣಿಗೆಗಳು ತೋರಿಸುತ್ತವೆ.

ಈ ಸಿನಿಮಾವು ಚಿತ್ತೋರ್‌ನ ರಾಣಿ ಪದ್ಮಾವತಿಯ ಐತಿಹ್ಯ ಕುರಿತದ್ದಾಗಿದೆ. 13ನೇ ಶತಮಾನದಲ್ಲಿ ದೆಹಲಿಯ ಸುಲ್ತಾನ್ ಅಲ್ಲಾವುದ್ದೀನ್ ಖಿಲ್ಜಿ ಚಿತ್ತೋರ್ ಮೇಲೆ ಆಕ್ರಮಣ ಮಾಡಿದಾಗ ಪದ್ಮಾವತಿ ಆತನ ಕೈಗೆ ಸಿಕ್ಕಿ ಬೀಳುವುದಕ್ಕಿಂತ ಸಾಯುವುದೇ ಲೇಸು ಎಂದು ‘ಜೌಹರ್’(ಆತ್ಮಾಹುತಿ)ಮಾಡಿಕೊಂಡಳು ಎನ್ನಲಾಗುತ್ತದೆ. ಪದ್ಮಾವತಿ ಒಬ್ಬ ಐತಿಹಾಸಿಕ ವ್ಯಕ್ತಿಯಲ್ಲ. ಒಂದು ಐತಿಹ್ಯವಾಗಿದ್ದು ಅದು ಒಂದು ಸಾಂಸ್ಕೃತಿಕ ನೆನಪಾಗಿದೆ. ಹೀಗಾಗಿ ಪದ್ಮಾವತಿ ಬಗ್ಗೆ ಅನೇಕ ರೀತಿಯ ಕಥಾನಕಗಳಿವೆ. ಆದ್ದರಿಂದ ಈ ಸಿನಿಮಾ ಇತಿಹಾಸವನ್ನು ತಿರುಚಿದೆ ಎಂದು ಹೇಳುವುದರಲ್ಲಿ ಯಾವುದೇ ಅರ್ಥವಿಲ್ಲ.

ಸಿನಿಮಾವನ್ನು ಯಾರೊಬ್ಬರೂ ನೋಡದೆಯೇ ಅದರ ಮೇಲೆ ದಾಳಿ ಮಾಡುತ್ತಿದ್ದಾರೆ. ಸಿನಿಮಾದಲ್ಲಿ ಇದೆಯೆನ್ನಲಾದ ಆಕ್ಷೇಪಾರ್ಹವಾದ ಯಾವುದೇ ದೃಶ್ಯಗಳು ಇಲ್ಲ ಎಂದು ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ ಹೇಳಿದ್ದಾರೆ.

ಯಾವುದೇ ಒಂದು ಸಿನಿಮಾಕ್ಕೆ ಕೇಂದ್ರೀಯ ಸಿನಿಮಾ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಸಿ) ಸರ್ಟಿಫಿಕೆಟ್ ನೀಡಿದ ನಂತರವಷ್ಟೇ ಆ ಸಿನಿಮಾವನ್ನು ಬಿಡುಗಡೆ ಮಾಡಲಾಗುತ್ತದೆ. ಯಾವುದೇ ಒಂದು ಚಲನಚಿತ್ರವು ಸಾರ್ವಜನಿಕ ಬಿಡುಗಡೆಗೆ ಅರ್ಹವೇ ಅಲ್ಲವೇ ಎಂಬುದನ್ನು ನಿರ್ಧರಿಸುವ ಏಕೈಕ ಅಧಿಕೃತ ಸಂಸ್ಥೆ ಸಿಬಿಎಫ್‌ಸಿ. ಸಿಬಿಎಫ್‌ಸಿ ಸಿನಿಮಾವನ್ನು ನೋಡುವ ಮುನ್ನವೇ ಅದನ್ನು ನಿಷೇಧಿಸಬೇಕೆಂದು ಆಗ್ರಹಿಸಲಾಗುತ್ತಿದೆ. ಸಿನಿಮಾಕ್ಕೆ ವಿರೋಧ ವ್ಯಕ್ತಪಡಿಸುತ್ತಿರುವುದು ಯಾವುದೋ ಕೆಲವು ಸಣ್ಣ ಪುಟ್ಟ ಗುಂಪುಗಳು ಮಾತ್ರವೇ ಅಲ್ಲ, ಮುಖ್ಯವಾಹಿನಿಯ ರಾಜಕಾರಣಿಗಳು ಮತ್ತು ಬಿಜೆಪಿಯ ಮುಖ್ಯಮಂತ್ರಿಗಳು ಕೂಡ ವಿರೋಧಿಸುತ್ತಿದ್ದಾರೆ.

ರಾಜಸ್ತಾನದ ರಜಪೂತ ಸಂಘಟನೆಗಳು ಆರಂಭಿಸಿದ ಪ್ರತಿರೋಧಕ್ಕೆ ರಾಜಸ್ತಾನ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶ ಮುಖ್ಯಮಂತ್ರಿಗಳು ಬೆಂಬಲ ಸೂಚಿಸಿದ್ದಾರೆ. ‘ರಾಷ್ಟ್ರಮಾತೆ’ ಪದ್ಮಾವತಿಯನ್ನು ಅವಮಾನಿಸುತ್ತಿರುವ ಕಾರಣದಿಂದ ಈ ಸಿನಿಮಾವನ್ನು ತಮ್ಮ ರಾಜ್ಯದಲ್ಲಿ ಬಿಡುಗಡೆ ಮಾಡುವುದಿಲ್ಲ ಎಂದು ಮಧ್ಯಪ್ರದೇಶ ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಘೋಷಿಸಿದ್ದಾರೆ. ಇದರಿಂದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥರಿಗೆ ಅತೃಪ್ತಿಯಾಗಿರಬಹುದು. ಯಾಕೆಂದರೆ ಗೋವನ್ನು ‘ರಾಷ್ಟ್ರಮಾತೆ’ ಎಂದು ಅವರು ಈ ಹಿಂದೆಯೇ ಕರೆ ನೀಡಿದ್ದಾರೆ!. ಸಿನಿಮಾದಲ್ಲಿನ ‘ಆಕ್ಷೇಪಾರ್ಹ ಭಾಗಗಳನ್ನು’ ತೆಗೆದುಹಾಕದ ಹೊರತು ಪದ್ಮಾವತಿ ಬಿಡುಗಡೆಗೆ ತನ್ನ ಸರಕಾರ ಅವಕಾಶ ನೀಡುವುದಿಲ್ಲ ಎಂದೂ ಆದಿತ್ಯನಾಥ ಘೋಷಿಸಿದ್ದಾರೆ. ನಟ–ನಟಿಯರಿಗೆ ಹಾಗೂ ಸಿನಿಮಾದೊಂದಿಗೆ ಸಂಬಂಧಿಸಿದ ಇತರರಿಗೆ ಬೆದರಿಕೆ ಹಾಕುವವರಿಗಿಂತ ನಿರ್ದೇಶಕ ಸಂಜಯ್ ಲೀಲಾ ಬನ್ಸಾಲಿ ಅವರೇನೂ ಕಡಿಮೆ ತಪ್ಪಿತಸ್ಥರಲ್ಲ ಎಂಬ ಆಘಾತಕಾರಿ ಹೇಳಿಕೆಯನ್ನೂ ಆದಿತ್ಯನಾಥ ನೀಡಿದ್ದಾರೆ. ಇದು ಬನ್ಸಾಲಿ ಮತ್ತು ನಟಿ ದೀಪಿಕಾ ಪಡುಕೋಣೆ ಅವರನ್ನು ಹತ್ಯೆಗೈಯುವ ಬೆದರಿಕೆ ಹಾಕುವವರನ್ನು ರಕ್ಷಿಸುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ.

ಬಿಜೆಪಿ ಮುಖ್ಯಮಂತ್ರಿಗಳು ನೀಡಿರುವ ಹೇಳಿಕೆಗಳನ್ನು ಪ್ರಧಾನಿಯಾಗಲೀ ಬಿಜೆಪಿ ನಾಯಕತ್ವವಾಗಲೀ ವಿರೋಧಿಸಲೂ ಇಲ್ಲ ಅಥವಾ ತಮಗೂ ಅದಕ್ಕೂ ಸಂಬಂಧವಿಲ್ಲ ಎಂದೂ ಹೇಳಿಲ್ಲ. ವಾಸ್ತವವಾಗಿ, ಅದಕ್ಕೆ ಬದಲು ಹರ್ಯಾಣದ ಇನ್ನೊಬ್ಬ ಬಿಜೆಪಿ ನಾಯಕ ಸೂರಜ್ ಪಾಲ್ ಅಮು, ಭನ್ಸಾಲಿ ಮತ್ತು ದೀಪಿಕಾ ತಲೆ ಕಡಿದವರಿಗೆ ಹತ್ತು ಕೋಟಿ ರೂಪಾಯಿ ಬಹುಮಾನ ನೀಡುವುದಾಗಿ ಆಶ್ವಾಸನೆ ನೀಡಿದ್ದಾರೆ.

ರಾಜಸ್ತಾನದ ಕೆಲವು ಕಾಂಗ್ರೆಸ್ ನಾಯಕರು ಕೂಡ ಪದ್ಮಾವತಿ ಸಿನಿಮಾವನ್ನು ತೀವ್ರವಾಗಿ ವಿರೋಧಿಸುತ್ತಿರುವುದೂ ಖಂಡನೀಯ. ಸಿನಿಮಾಕ್ಕೆ ಆಕ್ಷೇಪ ವ್ಯಕ್ತಪಡಿಸುವಲ್ಲಿ ಬಿಜೆಪಿ ಮುಖ್ಯಮಂತ್ರಿಗಳೊಂದಿಗೆ ಪಂಜಾಬ್‌ನ ಕಾಂಗ್ರೆಸ್ ಮುಖ್ಯಮಂತ್ರಿ ಕ್ಯಾಪ್ಟನ್ ಅಮರಿಂದರ್ ಸಿಂಗ್ ಕೂಡ ಕೈಜೋಡಿಸಿ ಪ್ರತಿಭಟನೆಗಳಿಗೆ ಬೆಂಬಲ ಸೂಚಿಸಿದ್ದಾರೆ.

ಬಿಜೆಪಿ ರಾಜ್ಯಗಳಲ್ಲಿ ಈ ರೀತಿಯ ಬೆದರಿಕೆಗಳನ್ನು ಒಡ್ಡಿದವರನ್ನು ಬಂಧಿಸಿದ್ದಾಗಲೀ ಮೊಕದ್ದಮೆ ಹೂಡಿದ್ದಾಗಲೀ ಒಂದೇ ಒಂದು ಪ್ರಕರಣ ನಡೆದಿಲ್ಲ. ಅದಕ್ಕೆ ಬದಲಾಗಿ, ಈ ರಾಜ್ಯಗಳ ಮುಖ್ಯಮಂತ್ರಿಗಳು ಬಳಸಿದ ಭಾಷೆಗಳು ಮತ್ತು ತೆಗೆದುಕೊಂಡ ನಿಲವುಗಳು ಗುಂಪು ಉನ್ಮಾದಕ್ಕೆ ಪ್ರೋತ್ಸಾಹ ನೀಡುವಂತಿವೆ.

‘ಪದ್ಮಾವತಿ’ಯನ್ನು ದಮನಿಸಲು ನಡೆಸುತ್ತಿರುವ ಪ್ರಯತ್ನ ಕೇವಲ ಮತ ಬ್ಯಾಂಕ್ ರಾಜಕೀಯ ಅಲ್ಲ. ಇದು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಿಸುವ ಹಾಗೂ ಯಾವುದೇ ಸಾಂಸ್ಕೃತಿಕ ನಿರ್ಮಾಣಗಳು ಹಿಂದುತ್ವದ ಪ್ರತಿಗಾಮಿ ಮೌಲ್ಯಗಳಿಗೆ ಅನುಗುಣವಾಗಿರುವಂತೆ ಒತ್ತಡ ಹೇರುವ ಕುತ್ಸಿತ ಪ್ರಯತ್ನವಾಗಿದೆ. ಸಂಸ್ಕೃತಿಯನ್ನು ನಿಯಂತ್ರಿಸಲಿಕ್ಕಾಗಿ ಜನಜಂಗುಳಿಯನ್ನು ಪೊಲೀಸ್‌ಗಿರಿ ನಡೆಸಲು ಬಳಸಿಕೊಳ್ಳುತ್ತಿರುವುದು ಗೋರಕ್ಷಣೆಯ ಹೆಸರಿನಲ್ಲಿ ಈಗಾಗಲೇ ನಡೆಸಲಾಗುತ್ತಿರುವ ದೌರ್ಜನ್ಯಗಳನ್ನು ಹೋಲುತ್ತದೆ.

ಗೋವಾದಲ್ಲಿ ನಡೆಯುವ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಪ್ರದರ್ಶನಕ್ಕೆಂದು ಜ್ಯೂರಿ ಆಯ್ಕೆ ಮಾಡಿದ ಎರಡು ಸಿನಿಮಾಗಳನ್ನು ವಾರ್ತೆ ಮತ್ತು ಪ್ರಸಾರ ಖಾತೆ ಕೈಬಿಟ್ಟಿರುವುದು ಈ ಸಾಂಸ್ಕೃತಿಕ ದಬ್ಬಾಳಿಕೆಗೆ ಬಿಜೆಪಿಯ ಕೇಂದ್ರ ಸರಕಾರದ ಸಮ್ಮತಿ ಇದೆಯೆನ್ನುವುದಕ್ಕೆ ಸಾಕ್ಷಿಯಾಗಿದೆ.

ಪದ್ಮಾವತಿ ಸಿನಿಮಾಕ್ಕೆ ಸಿಬಿಎಫ್‌ಸಿ ಸರ್ಟಿಫಿಕೆಟ್ ದೊರೆಯುವುದನ್ನು ಖಾತರಿಪಡಿಸುವುದು ಹಾಗೂ ಅದನ್ನು ಸಾರ್ವಜನಿಕರ ವೀಕ್ಷಣೆಗೆ ಬಿಡುಗಡೆ ಮಾಡುವುದು ತುಂಬಾ ಮಹತ್ವದ್ದಾಗಿದೆ. ಚಿತ್ರಮಂದಿರಗಳಲ್ಲಿ ಈ ಸಿನಿಮಾ ಪ್ರದರ್ಶನವಾಗುವಂತೆ ನೋಡಿಕೊಳ್ಳುವುದು ಆಯಾ ರಾಜ್ಯ ಸರಕಾರಗಳ ಹೊಣೆಯಾಗಿದೆ. ಹಾಗೂ ಸಿನಿಮಾ ಪ್ರದರ್ಶನಕ್ಕೆ ಅಡ್ಡಿಪಡಿಸುವವರನ್ನು ಕಾನೂನು ಪ್ರಕಾರ ಶಿಕ್ಷಿಸುವುದನ್ನು ಕೂಡ ಅವುಗಳು ಖಾತರಿಪಡಿಸಬೇಕು.

ಅನು: ವಿಶ್ವ



TOI ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ



ಸಂವಿಧಾನಿಕ ಹಕ್ಕುಗಳನ್ನು ಬುಡಮೇಲು ಮಾಡುವ ಬಲಪಂಥೀಯ ಕಾವಲುಕೋರ ಪಡೆಗಳ ವಿರುದ್ಧ ಕ್ರಮ ಕೈಗೊಳ್ಳಿ–ಎಐಡಿಡಬ್ಲ್ಯುಎ ಆಗ್ರಹ

ಪೂರ್ವನಿರ್ಧಾರಿತ ದಿನದಂದು ‘ಪದ್ಮಾವತಿ’ ಚಲನಚಿತ್ರದ ಬಿಡುಗಡೆಯನ್ನು ತಡೆಯಲು ಶ್ರೀ ರಾಜಪೂತ ಕರ್ಣಿ ಸೇನಾ ಮತ್ತಿತರ ಬಲಪಂಥೀಯ ಕಾವಲುಕೋರ ಸಂಘಟನೆಗಳು ಒಡ್ಡಿರುವ ಬೆದರಿಕೆಗಳು ಮತ್ತು ಹರಿಯಬಿಟ್ಟಿರುವ ಹಿಂಸಾಚಾರವನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಬಲವಾಗಿ ಖಂಡಿಸಿದೆ. ಇಂತಹ ಸಂವಿಧಾನ ಬಾಹಿರ ಸಂಘಟನೆಗಳು ನಡೆಸುತ್ತಿರುವ ‘ಗೂಂಡಾ ರಾಜ್ಯ’ದ ಸಮಾನಾಂತರ ವ್ಯವಸ್ಥೆಗೆ ಸಂವಿಧಾನಾತ್ಮಕವಾಗಿ ಚುನಾಯಿಸಲ್ಪಟ್ಟ ರಾಜ್ಯಸರಕಾರಗಳು ಪರಮಾನಂದದಿಂದ ಬಲಿ ಬೀಳುತ್ತಿರುವುದು ಇದನ್ನು ಇನ್ನಷ್ಟು ಉಲ್ಬಣಗೊಳಿಸುತ್ತಿದೆ.

ಮಧ್ಯಪ್ರದೇಶ, ಉತ್ತರಪ್ರದೇಶ, ರಾಜಸ್ಥಾನ ಮತ್ತು ಪಂಜಾಬಿನ ರಾಜ್ಯಸರಕಾರಗಳು ಕರ್ಣಿ ಸೇನಾ ಸೂಚಿಸಿರುವ ಬದಲಾವಣೆಗಳನ್ನು ಒಳಗೊಳ್ಳದೆ ಈ ಚಿತ್ರದ ಪ್ರದರ್ಶನಕ್ಕೆ ಅವಕಾಶ ಕೊಡುವುದಿಲ್ಲ ಎಂದು ಸಾರಿರುವುದು ಅತ್ಯಂತ ಆತಂಕದ ಸಂಗತಿ. ಸುಪ್ರಿಂ ಕೋರ್ಟ್ ಕೂಡ ಈ ಚಿತ್ರದ ಬಿಡುಗಡೆಯನ್ನು ನಿಲ್ಲಿಸಲು ನಿರಾಕರಿಸಿ ಈ ವಿಷಯದಲ್ಲಿ ತನ್ನ ತೀರ್ಮಾನವನ್ನು ಕೇಂದ್ರೀಯ ಚಲನಚಿತ್ರ ಸೆನ್ಸಾರ್ ಮಂಡಳಿ ತಿಳಿಯಪಡಿಸಬೇಕು ಎಂದು ನಿರ್ದೇಶನ ನೀಡಿರುವಾಗ ಇಂತಹ ಕಾನೂನುಬಾಹಿರ ಮತ್ತು ಅಸಂವಿಧಾನಿಕ ಘೋಷಣೆಗಳು ಬಂದಿವೆ ಎಂಬ ಸಂಗತಿಯತ್ತ ಎಐಡಿಡಬ್ಲ್ಯುಎ ಗಮನ ಸೆಳೆದಿದೆ.

ಪಿತೃಪ್ರಧಾನ ವ್ಯವಸ್ಥೆಯನ್ನು ಬಲಪಡಿಸುವ ಪ್ರಯತ್ನ

‘ಪದ್ಮಾವತಿ’ ಒಂದು ಕಾಲ್ಪನಿಕ ಪೌರಾಣಿಕ ಪಾತ್ರ, ಇಂತಹ ಒಬ್ಬ ಮಹಿಳೆ ನಿಜವಾಗಿಯೂ ಇದ್ದಳೇ ಎಂದು ದೇಶದ ಪ್ರತಿಷ್ಠಿತ ಇತಿಹಾಸಕಾರರು ಪ್ರಶ್ನಿಸುತ್ತಾರೆ. ನಿಜ ಹೇಳಬೇಕೆಂದರೆ ‘ಪದ್ಮಾವತಿ’ಯ ಚಿತ್ರಣ ಹಲವು ಹಂತಗಳು ಮತ್ತು ನಿರೂಪಣೆಗಳ ಮೂಲಕ ಹಾದು ಬಂದಿದೆ. ಸಮಯ ಕಳೆದ ಹಾಗೆ ಇದು ರಜಪೂತರ ಈ ಕ್ಷತ್ರಿಯ ರಾಜಪ್ರಭುತ್ವ ವರ್ಗ ತನ್ನ ಆಳ್ವಿಕೆಗೆ ಒಳಪಟ್ಟವರ ಮೇಲೆ ಯಜಮಾನಿಕೆ ಮತ್ತು ಹತೋಟಿಯನ್ನು ಕಾಯ್ದುಕೊಳ್ಳುವುದಕ್ಕೆಂದೇ ರೂಪುಗೊಂಡ ಪಾಳೆಯಗಾರೀ ಮತ್ತು ಪಿತೃಪ್ರಧಾನ ಕಲ್ಪನೆಗಳನ್ನು ಬಿಂಬಿಸಲಾರಂಭಿಸಿತು. ‘ಹಿಂದುತ್ವ’ದ ಕಲ್ಪನೆಯಲ್ಲಿ ‘ಸ್ತ್ರೀತ್ವ’ ಎಂಬುದು ರಾಷ್ಟ್ರದ ಗೌರವದೊಂದಿಗೆ ತಳುಕು ಹಾಕಿಕೊಂಡಿದೆ. ಆದ್ದರಿಂದ ಇಂತಹ ಗುಂಪುಗಳ ‘ಪದ್ಮಾವತಿ’ ಕುರಿತ ಚಿತ್ರಣ ಇಂತಹ ಸಂಪ್ರದಾಯಶರಣ ‘ಸ್ತ್ರೀತ್ವ’ವನ್ನು ಬಲಪಡಿಸುವ ರಾಷ್ಟ್ರತ್ವ ಮತ್ತು ನೈತಿಕತೆಯನ್ನು ಪ್ರೋತ್ಸಾಹಿಸುತ್ತಿದ್ದರೆ ಅದರಲ್ಲಿ ಆಶ್ಚರ್ಯವೇನಿಲ್ಲ. ಇಂತಹ ‘ಪಿತೃಪ್ರಧಾನ ವ್ಯವಸ್ಥೆಯ ಹತೋಟಿಯನ್ನು ಬಲಪಡಿಸುವ ಪ್ರಯತ್ನಗಳನ್ನು ಎಐಡಿಡಬ್ಲ್ಯುಎ ವಿರೋಧಿಸುತ್ತಲೇ ಬಂದಿದೆ. ಆದ್ದರಿಂದ **ಆಯ್ಕೆಯ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿಯ ಬಹುತ್ವದ ಆಂದೋಲನಗಳ ಪರವಾಗಿ ಅದು ನಿಲ್ಲುತ್ತದೆ ಎಂದು ಈ ಕುರಿತ ಎಐಡಿಡಬ್ಲ್ಯುಎ ಹೇಳಿಕೆ ಸ್ಪಷ್ಟಪಡಿಸಿದೆ.**

ಈ ಹಿನ್ನೆಲೆಯಲ್ಲಿ ಕರ್ಣಿ ಸೇನಾದ ಪ್ರಸಕ್ತ ಕೃತ್ಯಗಳು ಮತ್ತು ಅದಕ್ಕೆ ಬಿಜೆಪಿಯ ಚುನಾಯಿತ ಶಾಸಕರು ಮತ್ತು ಮಂತ್ರಿಗಳಿಂದ ಸಿಕ್ಕಿರುವ ಬೆಂಬಲ ಆಳುವ ವ್ಯವಸ್ಥೆ ಪ್ರಸಕ್ತ ರಾಜಕೀಯದಲ್ಲಿ ತನ್ನ ಪ್ರಾಬಲ್ಯವನ್ನು ವಿಸ್ತರಿಸಲು ಮಹಿಳಾ–ವಿರೋಧಿ ಮತ್ತು ಮತ್ತು ಮೇಲ್ಜಾತಿ ಸಂಘಟನೆಗಳೊಂದಿಗೆ ಹೇಗೆ ರಾಜಿ ಮಾಡಿಕೊಳ್ಳುತ್ತಿದೆ ಎಂಬುದನ್ನು ಎತ್ತಿ ತೋರಿದೆ ಎಂದು ಅಭಿಪ್ರಾಯ ಪಟ್ಟಿರುವ ಎಐಡಿಡಬ್ಲ್ಯುಎ, ಈ ಪ್ರಕ್ರಿಯೆಯಲ್ಲಿ ಅವರು ಚಿತ್ರ ನಿರ್ದೇಶಕ ಮತ್ತು ಈ ಚಿತ್ರ ತಯಾರಿಕೆಯಲ್ಲಿ ಭಾಗವಹಿಸಿದ ನಟ–ನಟಿಯರ ಮೇಲೆ ದುಷ್ಟ ದಾಳಿಯನ್ನು ಹರಿಯಬಿಟ್ಟಿದ್ದಾರೆ; ಕಾಲ್ಪನಿಕ ಚಾರಿತ್ರ್ಯವಂತೆ (ಪದ್ಮಾವತಿ)ಗೆ ತದ್ವಿರುದ್ಧವಾಗಿ “ದುಡಿಯುವ ಮಹಿಳೆ”(ಇಲ್ಲಿ ಪದ್ಮಾವತಿ ಪಾತ್ರ ಮಾಡುವ ನಟಿ)ಯನ್ನು “ಕೆಟ್ಟವಳು ಮತ್ತು ಚಾರಿತ್ರ್ಯಹೀನೆ” ಎಂದು ಬಿಂಬಿಸಲಾಗುತ್ತಿದೆ. ಹೀಗೆ ಮಾಡುವಾಗ ಅವರು ನಾಯಕ ನಟಿಯ ಗಂಭೀರ ಚಾರಿತ್ರ್ಯಹತ್ಯೆ ಮಾಡುತ್ತಿರುವುದನ್ನು, ಆಕೆಯ ಮೂಗು ಕೊಯ್ಯುವ ಮತ್ತು ಚಿತ್ರದ ನಟ–ನಟಿಯರೂ ಸೇರಿದಂತೆ ಚಿತ್ರತಂಡಕ್ಕೆ ಕೊಲೆ ಬೆದರಿಕೆ ಹಾಕುತ್ತಿರುವುದನ್ನು ಎಐಡಿಡಬ್ಲ್ಯುಎ ಬಲವಾಗಿ ಖಂಡಿಸಿದೆ.

ಮೇಲ್ಜಾತಿ ವೋಟ್‌ಬ್ಯಾಂಕ್

ಈ ಇಡೀ ವಿವಾದವನ್ನು ಆಳುವ ಪಕ್ಷ ಮುಂಬರುವ ಚುನಾವಣೆಗಳ ಹಿನ್ನೆಲೆಯಲ್ಲಿ ಜನಗಳ ಗಮನವನ್ನು ತನ್ನ ವಿಫಲತೆಗಳಿಂದ ಬೇರೆಡೆಗೆ ತಿರುಗಿಸಲು ಬಳಸುತ್ತಿದೆ ಎಂದೂ ಎಐಡಿಡಬ್ಲ್ಯುಎ ಅಭಿಪ್ರಾಯ ಪಟ್ಟಿದೆ. **ಈ ಪ್ರತಿಭಟನೆಗಳು ದೇಶದ ಕಾರ್ಮಿಕರು ಮತ್ತು ರೈತರು ಕೇಂದ್ರ ಮತ್ತು ರಾಜ್ಯ ಸರಕಾರಗಳ ನವ–ಉದಾರವಾದಿ ಧೋರಣೆಗಳ ವಿರುದ್ಧ ಬಂಡೆದ್ದಿರುವ ಸಂದರ್ಭದಲ್ಲಿ ನಡೆಯುತ್ತಿವೆ ಎಂಬುದನ್ನು ಗಮನಿಸಬೇಕು** ಎಂದಿರುವ ಅದು ಚುನಾವಣೆಗಳ ಸಮಯದಲ್ಲಿ ಬಿಜೆಪಿ ಮಾಡಬೇಕೆಂದಿರುವ ಕೋಮುವಾದಿ ಧ್ರುವೀಕರಣದ ಬುನಾದಿಯಾಗಿ ಮೇಲ್ಜಾತಿ ಹಿಂದೂ ‘ವೋಟ್ ಬ್ಯಾಂಕ್’ನ್ನು ಉಳಿಸಿಕೊಳ್ಳುವ ಗುರಿಯಿಟ್ಟುಕೊಂಡು ಇದನ್ನು ಮಾಡುತ್ತಿದೆ ಎಂದು ವಿಶ್ಲೇಷಿಸಿದೆ. ತಾನೊಂದು ಮಹತ್ವದ ‘ವೋಟ್ ಬ್ಯಾಂಕ್’, ತನ್ನನ್ನು ಉಪೇಕ್ಷಿಸಲು ಸಾಧ್ಯವಿಲ್ಲ ಎಂದು ಕರ್ಣಿ ಸೇನಾ ಈಗಾಗಲೇ ಬಿಜೆಪಿಗೆ ನೆನಪಿಸಿದೆ ಎಂಬ ಸಂಗತಿಯತ್ತವೂ ಅದು ಗಮನ ಸೆಳೆದಿದೆ.

ಈ ಬಲಪಂಥೀಯ ಶಕ್ತಿಗಳು ಹರಿಯಬಿಟ್ಟಿರುವ ಈ ದುಷ್ಟ ಪ್ರವೃತ್ತಿಗಳ ವಿರುದ್ಧ ಸಾರ್ವಜನಿಕ ಮತ್ತು ರಾಜಕೀಯ ಒತ್ತಡಗಳನ್ನು ತರಬೇಕು, ಕಾನೂನುಬಾಹಿರ ಬೆದರಿಕೆಗಳನ್ನು ಹಾಕುತ್ತಿರುವವರನ್ನು ಮತ್ತು ಚಿತ್ರದ ಬಿಡುಗಡೆಗೆ ಅಡ್ಡಿಪಡಿಸುತ್ತಿರುವುದಕ್ಕೆ ಕಾರಣರಾದವರನ್ನು ಶಿಕ್ಷಿಸಲು ಕೂಡ ಸಾರ್ವಜನಿಕ ಮತ್ತು ರಾಜಕೀಯ ಒತ್ತಡಗಳನ್ನು ಕಟ್ಟಬೇಕು ಎಂದು ಎಐಡಿಡಬ್ಲ್ಯುಎ ಎಲ್ಲ ಪ್ರಗತಿಪರ ಮತ್ತು ಪ್ರಜಾಪ್ರಭುತ್ವ ಆಂದೋಲನಗಳಿಗೆ ಕರೆ ನೀಡಿದೆ.



ಆಳುವವರಿಗೆ ಸವಾಲೆಸೆದ ರೈತರ ಕಾರ್ಯಾಚರಣೆ-ಕಿಸಾನ್ ಸಂಸತ್ ಮತ್ತು 2 ಮಸೂದೆಗಳು

ಎಲ್ಲ ಕೃಷಿಸಾಲಗಳಿಂದ ಮುಕ್ತಿ, ಎಲ್ಲ ಬೆಳೆಗಳಿಗೆ ಮತ್ತು ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟಿನಷ್ಟು ಬೆಲೆಗಳನ್ನು ಆಗ್ರಹಿಸಿ ಎರಡು ಮಸೂದೆಗಳು

ಎರಡು ತಿಂಗಳ ಪ್ರಚಾರಾಂದೋಲನ, ತೀವ್ರತರ ಹೋರಾಟ ಮತ್ತು ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಾಚರಣೆಯ ಯೋಜನೆ

ಎರಡೇ ವಾರಗಳ ಅಂತರದಲ್ಲಿ ದೇಶದ ರಾಜಧಾನಿ ಎರಡು ಚಾರಿತ್ರಿಕ ಪ್ರತಿಭಟನೆಗಳನ್ನು ಕಂಡಿದೆ ನವಂಬರ್ 9ರಿಂದ 11 ರ ವರೆಗೆ ದೇಶದ ಕಾರ್ಮಿಕ ವರ್ಗದ ಆಕ್ರೋಶವನ್ನು ಅಭಿವ್ಯಕ್ತಗೊಳಿಸಿದ ಮೂರುದಿನಗಳ ಅಭೂತಪೂರ್ವ ಮಹಾಪಡಾವ್ ನಂತರ ನವಂಬರ್ 20 ಮತ್ತು 21ರಂದು ದೇಶದ ರೈತರು ನವೀನ ರೀತಿಯಲ್ಲಿ ತಮ್ಮ ಆಕ್ರೋಶವನ್ನು ಪ್ರದರ್ಶಿಸಿದ್ದಾರೆ.

ಈ ಚಾರಿತ್ರಿಕ ಪ್ರತಿಭಟನೆಯಲ್ಲಿ 184 ರೈತ ಸಂಘಟನೆಗಳನ್ನು ಪ್ರತಿನಿಧಿಸುವ ಸಾವಿರಾರು ರೈತರು ದೇಶದ ಮೂಲೆಮೂಲೆಗಳಿಂದ ರಾಜಧಾನಿಗೆ ಬಂದರು. ದೇಶದ ದುಡಿಯುವ ಜನರಿಗಾಗಿ ಶಾಸನಗಳನ್ನು ರಚಿಸಬೇಕಾದ ಸಂಸತ್ತಿನ ಬಳಿಯೇ ಅದು ಮುಚ್ಚಿದ್ದರೂ, ತಾವೇ ಸಭೆ ಸೇರಿ, ಕಿಸಾನ್ ಮುಕ್ತಿ ಸಂಸದ್ ನಡೆಸಿದರು, ಇನ್ನು ಬೇಡಿಕೆಗಳನ್ನಿಡುವುದಿಲ್ಲ, ನಮ್ಮ ಎರಡು ಪ್ರಧಾನ ಪ್ರಶ್ನೆಗಳ ಮೇಲಿನ ಈ ಮಸೂದೆಗಳನ್ನು ಸಂಸತ್ತಿಗೆ ಕೊಡುತ್ತಿದ್ದೇವೆ, ಅವೆರಡನ್ನೂ ಅನುಮೋದಿಸಿ ಪಾಸು ಮಾಡಲೇಬೇಕು ಎಂದು ಎಚ್ಚರಿಸಿದರು. ಈ ನವೀನ ಕಾರ್ಯಾಚರಣೆಯ ಒಂದು ಹಕ್ಕಿನೋಟವನ್ನು ನೀಡುವ ಇದರ ರೂವಾರಿಗಳಲ್ಲಿ ಒಬ್ಬರಾದ ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ

ಹನ್ನನ್ ಮೊಲ್ಲ ರವರ ಲೇಖನ



ನವಂಬರ್ 20ರಂದು ರಾಮಲೀಲಾ ಮೈದಾನದಿಂದ ಹತ್ತಾರು ಸಾವಿರ ಕೆಂಪು, ನೀಲಿ, ಹಳದಿ, ಗುಲಾಬಿ ಬಾವುಟಗಳನ್ನು ಹಿಡಿದ ರೈತರು ಸಂಸದ್ ಮಾರ್ಗದ ಕಡೆಗೆ ಮೆರವಣಿಗೆ ಹೊರಡುವುದರೊಂದಿಗೆ ಈ ಅಭೂತಪೂರ್ವ ಪ್ರತಿಭಟನೆ ಆರಂಭವಾಯಿತು. ಸುಮಾರಾಗಿ ಪ್ರತಿಯೊಂದು ರಾಜ್ಯದಿಂದಲೂ ಬಂದಿದ್ದ ರೈತರು ಮೋದಿ ಸರಕಾರ ತಮ್ಮ ವಿಶ್ವಾಸ ಕಳಕೊಂಡಿರುವುದನ್ನು ಸಾರಿ ಹೇಳಿದರು.

ಅಖಿಲ ಭಾರತ ಕಿಸಾನ್ ಸಂಘರ್ಷ ಸಮನ್ವಯ ಸಮಿತಿ(ಎಐಕೆಎಸ್‌ಸಿಸಿ) ಬಾವುಟದೊಂದಿಗೆ ಸಾಗಿದ ಈ ಮೆರವಣಿಗೆಗೆ ಸಮನ್ವಯ ಸಮಿತಿಯ ಸಂಯೋಜಕ ವಿಎಂಸಿಂಗ್‌ರೊಂದಿಗೆ ಎಐಕೆಎಸ್ ಅಧ್ಯಕ್ಷ ಡಾ.ಅಶೋಕ ಧವಳೆ, ಸ್ವರಾಜ್ ಅಭಿಯಾನ್‌ನ ಮುಖಂಡರಾದ ಯೋಗೇಂದ್ರ ಯಾದವ್, ಜೈಕಿಸಾನ್ ಆಂದೋಲನದ ಅವಿಕ್ ಸಾಹಾ, ಎಐಕೆಎಂಎಸ್‌ನ ರಾಜಾರಾವ್‌ಸಿಂಗ್, ಪ್ರೇಮ್ ಸಿಂಗ್ ಮತ್ತು ಕಾರ್ತಿಕ್ ರಾಯ್, ಎಐಕೆಕೆಎಂಎಸ್‌ನ ಅಶೀಷ್ ಮಿತ್ತಲ್ ಮತ್ತು ಚಂದ್ರಶೇಖರ್, ಸ್ವಾಭಿಮಾನಿ ಶೇತ್ಕರ್ ಸಂಘಟನಾದ ಮುಖಂಡ ರಾಜು ಶೆಟ್ಟಿ ಮತ್ತಿತರರು ನೇತೃತ್ವ ನೀಡಿದರು. ಎಐಕೆಎಸ್‌ನ ಇತರ ಮುಖಂಡರಾದ ಉಪಾಧ್ಯಕ್ಷ ಅಮ್ರ ರಾಮ್, ಜಂಟಿ ಕಾರ್ಯದರ್ಶಿಗಳಾದ ವಿಜೂ ಕೃಷ್ಣನ್, ಕೆ ಕೆ ರಾಗೇಶ್ ಮತ್ತು ಬಾದಲ್ ಸರೋಜ್, ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣ ಪ್ರಸಾದ್ ಮತ್ತು ರಾಜ್ಯ ಕಿಸಾನ್‌ಸಭಾಗಳ ಮುಖಂಡರೂ ಮೆರವಣಿಗೆಗೆ ನೇತೃತ್ವ ನೀಡಿದವರಲ್ಲಿ ಸೇರಿದ್ದರು.

ರಾಜಧಾನಿಯ ಇತರ ಕಡೆಗಳಿಂದಲೂ, ಅಂಬೇಡ್ಕರ್ ಭವನ, ಗುರುದ್ವಾರ ರಕಬ್‌ಗಂಜ್, ದಿಲ್ಲಿಯ ವಿವಿಧ ಪ್ರಮುಖ ರೈಲ್ವೆ ನಿಲ್ದಾಣಗಳಿಂದಲೂ ಮೆರವಣಿಗೆಗಳು ಸಂಸದ್ ಮಾರ್ಗದಲ್ಲಿನ ಕಿಸಾನ್ ಮುಕ್ತಿ ಸಂಸದ್‌ನ ಸ್ಥಳವನ್ನು ತಲುಪಿದವು. ಎಲ್ಲ ಸಂಘಟನೆಗಳು ದೊಡ್ಡ ಸಂಖ್ಯೆಯಲ್ಲಿ ರೈತರನ್ನು ಅಣಿನೆರೆಸಿದ್ದು ಕಂಡು ಬಂತು. ಬಹುಶಃ ಎಐಕೆಎಸ್‌ನ ತಂಡಗಳು ಬಹಳ ದೊಡ್ಡ ಪ್ರಮಾಣದಲ್ಲಿ ಈ ಮೆರವಣಿಗೆಗಳಲ್ಲಿ ಭಾಗವಹಿಸಿದವು.

ಈ ಕಿಸಾನ್ ಮುಕ್ತಿ ಸಂಸದ್ 19ರಾಜ್ಯಗಳಲ್ಲಿ 10 ಸಾವಿರ ಕಿ.ಮೀ.ಗಿಂತಲೂ ಹೆಚ್ಚು ಕ್ರಮಿಸಿದ ಕಿಸಾನ್ ಮುಕ್ತಿ ಯಾತ್ರಾಗಳನ್ನು ಪೂರ್ಣಗೊಳಿಸಿದ ನಂತರ ನಡೆದಿದೆ.

ಪುಟ 11 ನೋಡಿ





ಬೆಂಗಳೂರು ದೇಶದ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾಗಿದ್ದು, 2017 ರಲ್ಲಿ ಅದರ ಜನಸಂಖ್ಯೆ 1.23 ಕೋಟಿ ಆಗಿದೆ. ಕಾಸ್ಮೊಪಾಲಿಟನ್ ಪರಿಸರವಿರುವ ನಗರವಾಗಿರುವುದರಿಂದ ಉದ್ಯೋಗ ಅರಸಿ ವಲಸೆ ಬರುತ್ತಾರೆ. ಐಟಿ–ಬಿಟಿಗಳ ಕೇಂದ್ರಗಳಿಗೆ ವಲಸೆ ಬರುವ ಜನರಿಗೆ ಬದುಕಲು ಸೂಕ್ತವಾದ ಪ್ರದೇಶ. ನಗರದ ಸಾಕ್ಷರತಾ ಪ್ರಮಾಣ 89% ಇದೆ, ಲಿಂಗಾನುಪಾತ 1000ಕ್ಕೆ 934 ಇದೆ. ಸಾಕಷ್ಟು ಸಂಖ್ಯೆಯಲ್ಲಿ ನಗರ ವೇಗವಾಗಿ ಬೆಳೆದಂತೆಲ್ಲಾ ಮೂಲಭೂತ ಸೌಲಭ್ಯಗಳ ಕೊರತೆ ಸಹ ಇದೆ.

ತಲೆ ಮೇಲೊಂದು ಸೂರು ಇಲ್ಲ

ಬೃಹತ್ ಬೆಂಗಳೂರು ವಿಸ್ತಾರಗೊಳ್ಳುವುದರೊಂದಿಗೆ ಭೂಮಿಯ ಬೆಲೆಯು ನಿರಂತರವಾಗಿ ಏರಿಕೆಯಾಗುತ್ತಿದೆ. ರೀಯಲ್ ಎಸ್ಟೇಟ್ ದಂಧೆ ಅವ್ಯಾಹತವಾಗಿ ನಡೆಯುವುದಲ್ಲದೆ, ಕೊಲೆ, ಸುಲಿಗೆಗಳಂತಹ ಘಟನೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಸರಕಾರಿ ವಸತಿ ಯೋಜನೆಗಳು (ಬಸವ ವಸತಿ, ಇಂದಿರಾ ಅವಾಸ್ ಆಶ್ರಯ, ನರ್ಮ ಯೋಜನೆ, ರಾಜೀವ್ ಗಾಂದಿ ವಸತಿ ಯೋಜನೆ ಮತ್ತು ಅಂಬೇಡ್ಕರ್ ವಸತಿ ಯೋಜನೆ) ಗಳಿದ್ದರೂ ಬಡಜನರಿಗೆ ನಿವೇಶನ ಮರಿಚಿಕೆಯಾಗಿದೆ. ರಾಜ್ಯದಲ್ಲಿ 52% ರಷ್ಟು ಜನರಿಗೆ ಸ್ವಂತ ಮನೆಯಿಲ್ಲ, ನಗರದಲ್ಲಿ 597 ಸ್ಲಂಗಳಿದ್ದು, 387 ಸ್ಲಂ ಗಳು ಸರ್ಕಾರದ ಮಾನ್ಯತೆಯನ್ನು ಪಡೆದಿದ್ದು, ಲಕ್ಷಾಂತರ ಜನರು ಈ ಸ್ಲಂಗಳಲ್ಲಿ ವಾಸಮಾಡುತ್ತಾರೆ.

ಬೆಂಗಳೂರಿನ ನಾಗರಿಕ ಸಮಸ್ಯೆಗಳು



ಗೌರಮ್ಮ

ಭೂಮಿ ಒತ್ತುವರಿ ಯಾಗಿರುವ ಬಗ್ಗೆ ಅಧ್ಯಯನಕ್ಕೆ ಈ ಹಿಂದೆ ನೇಮಿಸಿದ ಎ.ಟಿ ರಾಮಸ್ವಾಮಿ ಸಮಿತಿ 40 ಸಾವಿರ ಎಕರೆ ಭೂಮಿಯನ್ನು ದೊಡ್ಡ ಶ್ರೀಮಂತರು, ರಾಜಕಾರಣಿಗಳು ಒತ್ತುವರಿ ಮಾಡಿಕೊಂಡಿರುವುದಾಗಿ ತನ್ನ ವರದಿಯಲ್ಲಿ ಹೇಳಿತ್ತು. ಈ ಭೂಮಿಯನ್ನು ಸಾರ್ವಜನಿಕರ ಉಪಯೋಗಕ್ಕೆ ಬಳಸುವಂತೆ, ನಿವೇಶನ ರಹಿತರಿಗೆ ನಿವೇಶನ ನೀಡಬೇಕೆಂದು ಒತ್ತಾಯಿಸಿ ಸಿಪಿಐ(ಎಂ) ಹೋರಾಟವನ್ನು ನಡೆಸಿತ್ತು. ಹಲವಾರು ಇದುವರೆಗೂ ಅವರಿಗೆ ಹಕ್ಕುಪತ್ರ ನೀಡದೆಯಿರುವುದನ್ನು ಗಮನಿಸಬೇಕು. ಕೆರೆ ಕುಂಟೆಗಳ ಒತ್ತುವರಿಯಾಗಿರುವುದನ್ನು ತೆರವುಗೊಳಿಸಲು ಸುಪ್ರೀಂ ಕೋರ್ಟ್ ಆದೇಶದ ಆಧಾರದಲ್ಲಿ ಕೊಳಿವಾಡ ಸಮಿತಿ ಸ್ಲಂಗಳನ್ನು ತೆರವುಗೊಳಿಸಲು ಬಂದಾಗ ಜಿಲ್ಲಾ ಮಟ್ಟದ ಹೋರಾಟವನ್ನು ಮಾಡಲಾಗಿದೆ. ಸ್ಲಂ ಜನರಿಗೆ ಹಕ್ಕುಪತ್ರ ನೀಡಬೇಕು ಮತ್ತು ನಿವೇಶನ ರಹಿತರಿಗೆ ನಿವೇಶನ ನೀಡಬೇಕೆಂದು ಒತ್ತಾಯಿಸಿ ಜುಲೈ 2017 ರಲ್ಲಿ ಹೋರಾಟವನ್ನು ಮಾಡಲಾಗಿದೆ. ನಿವೇಶನ ಹಾಗು ಭೂಮಿ ಹೋರಾಟಗಳು ಬಿಡಿ ಬಿಡಿಯಾಗಿ ನಡೆದಿರುವ ಪರಿಣಾಮ ಹೋರಾಟದ ಲಾಭ ಪಡೆಯಲು ಸಾದ್ಯವಾಗಿಲ್ಲ. ಭೂ ಪ್ರಶ್ನೆಗಳ ಮೇಲೆ ಒಂದು ಸಂಘರ್ಷಾತ್ಮಕ ಹೋರಾಟ ರೂಪಿಸಲು ಬೇಕಾದ ಜನ, ಸಂಘಟನೆಯನ್ನು ಕಟ್ಟಲು ಅಗತ್ಯವಾದ ಸಂಘಟನಾ ಸಾಮರ್ಥ್ಯ ಬೆಳೆಸಬೇಕಾಗಿದೆ. ಇತ್ತೀಚಿಗೆ ರಾಜ್ಯ ಸರ್ಕಾರ ವಸತಿ ನೀಡುವುದಾಗಿ ಘೋಷಿಸಿದ್ದು, ಅ ಯೋಜನೆಯ ಸ್ವರೂಪವನ್ನು ಅರ್ಥ ಮಾಡಿಕೊಂಡು ಬಡಜನರಿಗೆ ವಸತಿ ಕೊಡಿಸಲು ಮುಂದಿನ ದಿನಗಳಲ್ಲಿ ಸಂಘಟನಾತ್ಮಕವಾದ ಹೋರಾಟ ರೂಪಿಸಲು ಸಾದ್ಯವಾಗಬೇಕು.

ಕಸ ವಿಲೇವಾರಿಯ ಅಧ್ವಾನಗಳು

ಬೆಂಗಳೂರು ನಗರದಲ್ಲಿ ಪ್ರಸಕ್ತ ಕಸ ಉತ್ಪತ್ತಿಯು ದಿನವೊಂದಕ್ಕೆ 4000 ಟನ್‌ಗಿಂತಲೂ ಜಾಸ್ತಿಯಿದ್ದು, ಅದು ಜನಸಂಖ್ಯೆ ಬೆಳೆದಂತೆ ಇನ್ನೂ ಹೆಚ್ಚಾಗಲಿದೆ. ನಗರದ ಬಹುತೇಕ ವಾರ್ಡ್‌ಗಳ ವಾಸ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ಘನ ತ್ಯಾಜ್ಯದಲ್ಲಿ ಹೆಚ್ಚಿನ ಪ್ರಮಾಣದ ಕೊಳೆಯುವ ಕಸವಿದೆ. ಈ ಕಸವು ಕಡಿಮೆ ಕ್ಯಾಲೋರಿ ಮೌಲ್ಯ (ಕೆಲರಿಫಿಕ್ ವ್ಯಾಲ್ಯೂ – ಒಂದು ಕೆ.ಜಿ ಕಸದಲ್ಲಿ 800 ರಿಂದ 1800 ಕಿಲೋ ಕ್ಯಾಲೊರಿಸ್), ಹೆಚ್ಚಿನ ತೇವಾಂಶ (ಶೇ. 50ರಿಂದ 80), ಹೆಚ್ಚಿನ ಸಾವಯವ ಅಂಶ (ಶೇ. 60ಕ್ಕಿಂತ ಹೆಚ್ಚು) ಮತ್ತು ಕಡಿಮೆ ಪುನರ್ಬಳಕೆ ಮಾಡಬಹುದಾದ ವಸ್ತುಗಳನ್ನು(ಕಾಗದ, ಪ್ಲಾಸ್ಟಿಕ್, ಲೋಹಗಳು, ಇತ್ಯಾದಿ) ಹೊಂದಿದೆ.

ಕಸದಲ್ಲಿರುವ ಕೊಳೆಯುವ ವಸ್ತುಗಳೆಂದರೆ ತರಕಾರಿ ಮತ್ತು ಹಣ್ಣು ತ್ಯಾಜ್ಯಗಳು, ಇವು ಶೇ. 65ರಿಂದ 90 ರಷ್ಟಿರುತ್ತವೆ. ಇಂತಹ ಕೊಳೆಯುವ ಕಸವನ್ನು ದಿನಂಪ್ರತಿ ಸಂಗ್ರಹಿಸಿ ವಿಲೇವಾರಿ ಮಾಡಬೇಕು. ಕಸದ ಉತ್ಪಾದನೆ ಮೂಲ ವಿಶ್ಲೇಷಿಸಿದರೆ, ಮನೆಗಳಲ್ಲಿ ಶೇ 54, ಮಾರುಕಟ್ಟೆ, ಕಲ್ಯಾಣ ಮಂಟಪಗಳಲ್ಲಿ ಶೇ 20. ವಾಣಿಜ್ಯ ವಿಭಾಗಗಳಲ್ಲಿ ಶೇ 17, ಇತರೆ ಶೇ 9 ಕಸ ಉತ್ಪಾದನೆಯಾಗುತ್ತದೆ.

ಬಿಬಿಎಂಪಿ ಕಸ ಗುತ್ತಿಗೆ:

4,073 ಬಿಬಿಎಂಪಿ ಪೌರಕಾರ್ಮಿಕರು, 18,500 ಗುತ್ತಿಗೆ ಪೌರಕಾರ್ಮಿಕರು, 650 ಆಟೋಟಿಪ್ಪರ್, 600 ಕಸ ಸಾಗಣೆ ವಾಹನಗಳು 4 ಸಾವಿರ ಟನ್ ಕಸ ನಿರ್ವಹಿಸಲು 1 ವರ್ಷದ ಹಿಂದೆ 350 ಕೋಟಿ ಖರ್ಚನ್ನು ನಿಗದಿ ಪಡಿಸಲಾಗಿತ್ತು. ಬಿಬಿಎಂಪಿಯನ್ನು 294 ಆರೋಗ್ಯ ವಾರ್ಡ್‌ಗಳಾಗಿ ವಿಂಗಡಿಸಲಾಗಿತ್ತು. ಈ ಹಿಂದೆ, 112 ಆರೋಗ್ಯ ವಾರ್ಡ್‌ಗಳ ಕಸಗಳನ್ನು ಬಿಬಿಎಂಪಿಯ ಆರೋಗ್ಯ ಶಾಖೆಯು ನಿರ್ವಹಿಸುತ್ತಿತ್ತು ಮತ್ತು 182 ಆರೋಗ್ಯ

ಪುಟ 10 ಕ್ಕೆ

ಸಿಪಿಐ(ಎಂ)ನ ಬೆಂಗಳೂರು ಉತ್ತರ ಜಿಲ್ಲಾ ಘಟಕದ 22ನೇ ಸಮ್ಮೇಳನ ಇದೇ ನವೆಂಬರ್ 24–26 ವರೆಗೆ ಕೃಷ್ಣರಾಜಪುರಂ ನಲ್ಲಿ ನಡೆಯುತ್ತಿದ್ದು, ಬೆಂಗಳೂರಿನ ಜನರ ಸಮಸ್ಯೆಗಳ ಬಗ್ಗೆ ಸಮಗ್ರ ಚರ್ಚೆ ನಡೆಸಲಿದೆ. ಈ ಸಂದರ್ಭದಲ್ಲಿ ನಗರದ ಸಮಸ್ಯೆಗಳ ಎರಡು ಆಯಾಮಗಳ ಬಗ್ಗೆ ಸಿಪಿಐ(ಎಂ)ನ ಬೆಂಗಳೂರು ಉತ್ತರ ಜಿಲ್ಲಾ ಸಮಿತಿಯ ಇಬ್ಬರು ನಾಯಕರ ಲೇಖನ.

ಬೆಂಗಳೂರಿನ ಯುವಜನ ಮತ್ತು ಉದ್ಯೋಗ



ಪ್ರತಾಪ ಸಿಂಹ

ವಿಶ್ವದಲ್ಲಿಯೇ ಅತ್ಯಂತ ಡೈನಾಮಿಕ್ ನಗರ ಬೆಂಗಳೂರು(ನಂ.1 ಸ್ಥಾನ). ಇದರಲ್ಲಿ ಬೆಂಗಳೂರಿನ ಡೈನಾಮಿಕ್ ಯುವಕರ ಕೊಡುಗೆ ದೊಡ್ಡದಿದೆ. ವಿಶ್ವದ ಖಾಸಗೀ ಬಂಡವಾಳದ ಲಾಭಕೋರ ನೀತಿ, ನಮ್ಮ ಯುವಕರ ಶ್ರಮ ಹಾಗು ಹಣಕಾಸಿನ ಅನಿವಾರ್ಯ ಸ್ಥಿತಿಗಳು ಬೆಂಗಳೂರನ್ನು ಡೈನಾಮಿಕ್ ನಗರವನ್ನಾಗಿಸಿದೆ. ಇದಕ್ಕಾಗಿ Pizza hut ನಿಂದ Flipcart ವರೆಗೆ, Peenya ಕಬ್ಬಿಣದ ಕಾರ್ಖಾನೆಯಿಂದ, Orion Mallನ Toilet ಬಾಗಿಲಲ್ಲಿ ನಿಲ್ಲುವವರೆಗೆ ಬೆಂಗಳೂರಿನ ಡೈನಾಮಿಕ್ ಯುವಕರ ಬೆವರು ಲೀಟರ್ ಗಟ್ಟಲೆ ಹರಿದಿದೆ.

ಬೆಂಗಳೂರಿನ ಒಟ್ಟು ಜನಸಂಖ್ಯೆಯಲ್ಲಿ 16 ರಿಂದ 40ರ ವಯಸ್ಸಿನ ಅಂದಾಜು ಶೇ. 70ರಷ್ಟು ಯುವಕರಿದ್ದಾರೆ. ಶಿಕ್ಷಣ, ಉದ್ಯೋಗ ಕ್ಷೇತ್ರದಲ್ಲಿ ಬಹುತೇಕ ಯುವ ಜನತೆ ತೊಡಗಿಕೊಂಡಿದೆ. ಹೆಚ್ಚಿನ ಪ್ರಮಾಣದಲ್ಲಿ ಖಾಸಗಿ ಬಂಡವಾಳದ (ಹಿಡಿತದ) ಅಡಿಯಲ್ಲಿ ದುಡಿಯುತ್ತಿರುವ ಯುವಜನತೆಯು ಯಾವುದೇ ವ್ಯಕ್ತಿಗತ ಹಕ್ಕುಗಳನ್ನಾಗಲೀ, ಉದ್ಯೋಗದ ಭದ್ರತೆಯನ್ನಾಗಲೀ, ಸಾಮಾಜಿಕ, ಸಾಂಸ್ಕೃತಿಕ ತೊಡಗಿಸಿಕೊಳ್ಳಲು ಅವಕಾಶಗಳಾಗಲೀ, ಆರ್ಥಿಕ ಸ್ಥಿರತೆಯಾಗಲೀ ಇಲ್ಲದೆ ಅತಂತ್ರಗೊಂಡಿದೆ. ತನಗೆ ಸಂಬಳ ನೀಡುವ ಮಾಲೀಕರ ಅಗತ್ಯದಂತೆ ದುಡಿಯುವ ಅನಿವಾರ್ಯತೆಯಲ್ಲಿ ಯುವಜನತೆ ಸಿಲುಕಿಕೊಂಡಿದೆ.

ಎಲ್ಲಾ ಸ್ತರದ ಉದ್ಯೋಗಗಳಲ್ಲಿ ಉದ್ಯೋಗದ ಅಭದ್ರತೆ ಇರುವುದು ಸಾಮಾನ್ಯವಾಗಿದೆ. ಹೀಗಾಗಿ ಅತಂತ್ರದ ಸ್ಥಿತಿಯಲ್ಲಿ ದುಡಿಯುವಂತಾಗಿದೆ. ಮತ್ತೊಂದೆಡೆ ಕೆಲಸದ ಅವಧಿ ಕೇವಲ 8 ಗಂಟೆಗೆ ಸೀಮಿತವಾಗಿಲ್ಲ. 9 ರಿಂದ 10 ಗಂಟೆ ಕೆಲಸದ ಅವದಿ ಇದೆ. ಕಡಿಮೆ ಕೂಲಿ ಕಾರಣದಿಂದಾಗಿ ಓವರ್ ಟೈಮ್ ಮಾಡುವುದು ಅನಿವಾರ್ಯವಾಗಿದೆ. ಇನ್ನೊಂದೆಡೆ ವಾಸಸ್ಥಳ ಮತ್ತು ಉದ್ಯೋಗದ ಸ್ಥಳಕ್ಕೂ ಸಾಮಾನ್ಯವಾಗಿ ಬಹಳ ಅಂತರ ಇರುವುದರಿಂದ ಪ್ರಯಾಣದ ಸಮಯ ಹೆಚ್ಚಿಸಿದೆ. ಹೀಗಾಗಿ ಇವರ ಬಹುತೇಕ ಸಮಯ ದುಡಿಮೆಗೆ ಮೀಸಲಾಗಿದೆ. ಹೀಗಾಗಿ ದುಡಿಯುವ ಯುವಜನರು ತನ್ನ ದೈಹಿಕ–ಮಾನಸಿಕ ವಿಶ್ರಾಂತಿಗೂ ಸಮಯ ನೀಡಲಾರದ ಸ್ಥಿತಿಯಲ್ಲಿದ್ದಾರೆ. ಮನರಂಜನೆ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ವಂಚಿತರಾಗುತ್ತಿದ್ದಾರೆ. ವಲಸಿಗರಾದವರಲ್ಲಿ ಪರಕೀಯ ಭಾವನೆಯೂ ಸೇರಿದೆ. ಬಂಡವಾಳಶಾಹಿ ವ್ಯವಸ್ಥೆ ತೂರಿಬಿಡುತ್ತಿರುವ ಆಧುನಿಕೋತ್ತರವಾದದ ಸೆಳೆತಕ್ಕೆ ಸಿಕ್ಕ ಯುವಜನರಲ್ಲಿ ವ್ಯಕ್ತಿಕೇಂದ್ರಿತ ಮೌಲ್ಯಗಳು ಬೇರೂರುವಂತೆ ಮಾಡಿವೆ.

ಯುವಜನರ ಸಮಸ್ಯೆಗಳು

ಯುವಜನತೆಯ ಮೇಲಿನ ಸಾಂಸ್ಕೃತಿಕ ಪ್ರಭಾವ ಅತ್ಯಂತ ಪರಿಣಾಮಕಾರಿಯಾಗಿದೆ. ಇದು ಬಹಳ ಗಂಬೀರವೂ ಅಪಾಯಕಾರಿಯೂ ಆದ ವಿಷಯ. ಹಿಂದೆ ಹೆಚ್ಚಿನ ಪ್ರಮಾಣದಲ್ಲಿ ನಿರುದ್ಯೋಗಿಗಳಾಗಿದ್ದ ಯುವಜನತೆ ಭಾಷಾಭಿಮಾನ ಸೇರಿದಂತೆ ಹಲವು ರೀತಿಯ ಅಸ್ಮಿತೆಗಳಿಗೆ ಒಳಗಾಗುತ್ತಿದ್ದರು. ಆದರೆ ಇಂದು ಅದು ರೂಪಾಂತರಗೊಂಡು ಧಾರ್ಮಿಕ ಅಸ್ಮಿತೆ ಪ್ರಬಲಗೊಳ್ಳುತ್ತಿದೆ. ದೇವಾಲಯ, ಪ್ರಾರ್ಥನಾ ಮಂದಿರಗಳು, ಧಾರ್ಮಿಕ ಸಂಘ–ಸಂಸ್ಥೆಗಳಲ್ಲಿ, ಧಾರ್ಮಿಕ ಚಟುವಟಿಕೆಗಳಲ್ಲಿ ಯುವಜನರ ತೊಡಗಿಸುವಿಕೆ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತಿದೆ. ಬಹುತೇಕ ಯುವಜನರು ಧಾರ್ಮಿಕ ಆಚರಣೆಗಳು, ಅಂಧ ಶ್ರದ್ಧೆಯ ಪಾಲನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಮೂಲಕ ಕೋಮು ರಾಜಕೀಯದ ಸಂಸ್ಕೃತಿ ಯುವಜನರನ್ನು ಇನ್ನಿಲ್ಲದಂತೆ ಆವರಿಸಿಕೊಳ್ಳುತ್ತಿದೆ. ಯುವಜನರು ಕ್ರಿಯಾಶೀಲರಾಗಿರವ ಶಿಕ್ಷಣ ಕೇಂದ್ರಗಳು–ಉದ್ಯೋಗಸ್ಥ ಸ್ಥಳಗಳು, ಕಾರ್ಖಾನೆಗಳು, ಕಛೇರಿಗಳು, ಸೇವಾ ಕೇಂದ್ರಗಳು, ಧಾರ್ಮಿಕ ಆಚರಣೆ ಮತ್ತು ನಂಬಿಕೆಯ ಪ್ರಭಾವಗಳಿಂದ ಆವರಿಸಲ್ಪಟ್ಟಿವೆ. ಬದಲಾಗಿ, ವೈಜ್ಞಾನಿಕ – ಪ್ರಗತಿಪರವಾದ, ಕೆಳಸಮುದಾಯಗಳ ಜನಸಂಸ್ಕೃತಿಯನ್ನು ಹರಡಬಲ್ಲ–ಬೆಳೆಸಬಲ್ಲ ಸ್ಥಳಗಳಾಗಲಿ, ಅವಕಾಶಗಳಾಗಲಿ, ಅಂತಹ ವಾತಾವರಣವಾಗಲಿ ಬೆಂಗಳೂರಿನ ಯುವಜನರಿಗೆ ಲಭ್ಯವೇ ಇಲ್ಲದಷ್ಟು ನಗಣ್ಯವಾಗಿದೆ. ಕೋಮುವಾದಿ ಧರ್ಮ ಸಂಸ್ಕೃತಿಯು ಭಾಷೆ, ಜಾತಿಯ ಆಸ್ಮಿತೆಗಳನ್ನೂ ಒಳಗೊಂಡು ಯುವಜನಾಂಗವನ್ನು ಉದ್ರೇಕಿಸುವ ಮಟ್ಟಕ್ಕೆ ತಲುಪಿದೆ.

ನಮ್ಮ ದೇಶದ ಯಾವ ಸರ್ಕಾರಗಳೂ ಇಷ್ಟು ಅಗಾಧ ಸಂಖ್ಯೆಯ ಯುವ ಸಮುದಾಯವನ್ನು ಸಮರ್ಪಕವಾಗಿ ಬಳಸಿಕೊಂಡಿಲ್ಲ. ದೇಶದ ಪ್ರಗತಿಯಲ್ಲಿ ಪ್ರಧಾನ ಪಾತ್ರ ವಹಿಸಬೇಕಾದ ಈ ಯುವಶಕ್ತಿ ಇಂದು ಕೇವಲ ಖಾಸಗಿ ಬಂಡವಾಳವು ತನ್ನ ಲಾಭ ಹೆಚ್ಚಳಕ್ಕೆ ಬಳಕೆಯಾಗುತ್ತಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ಯುವಜನತೆ ದೇಶದ ರಾಜಕೀಯ ನೀತಿ ನಿರೂಪಣೆಯಲ್ಲಿ ಆಸಕ್ತಿಯಿಂದ ಭಾಗವಹಿಸುತ್ತಾ ನಿರ್ಣಾಯಕ ಪಾತ್ರ ನಿರ್ವಹಿಸಿದ್ದಾರೆ. ಆದರೆ ಅವರ ಅಶೋತ್ತರಗಳನ್ನು ಕಡೆಗಣಿಸುತ್ತಾ ಬರಲಾಗಿದೆ.

ಪುಟ 10 ಕ್ಕೆ

ಬೆಂಗಳೂರಿನ ನಾಗರಿಕ ಸಮಸ್ಯೆಗಳು......... ಪುಟ 9 ರಿಂದ

ವಾರ್ಡ್‌ಗಳ ಕಸ ನಿರ್ವಹಣೆಯನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿಯವರಿಗೆ ವಹಿಸಲಾಗಿತ್ತು.

ಒಂದೆರಡು ವರ್ಷದಿಂದೀಚೆಗೆ ಕಸ ನಿರ್ವಹಣೆ ಕಾರ್ಯವನ್ನು ಬಿಬಿಎಂಪಿಯ ಕಾಮಗಾರಿ ಇಲಾಖೆಗೆ ವಹಿಸಲಾಗಿದ್ದು, ಸಮಸ್ಯೆ ಉಲ್ಬಣಗೊಂಡಿದೆ. ಬೆಂಗಳೂರು ನಗರದಲ್ಲಿ ದಿನ ಕಳೆದಂತೆ ಕಸ ವಿಲೇವಾರಿ ಸಮಸ್ಯೆ ಉಲ್ಬಣಿಸುತ್ತಿದೆ. ರಸ್ತೆಗಳಲ್ಲಿ ಬಿದ್ದಿರುವ ಕಸ ವಿಲೇವಾರಿಯಾಗದೆ ಕೊಳೆಯುತ್ತಿದ್ದು, ಜನರು ದುರ್ನಾತದ ನಡುವೆ ದಿನ ಕಳೆಯುವಂತಾಗಿದೆ. ಒಂದೆಡೆ ಬಹುಪಾಲು ಗುತ್ತಿಗೆದಾರರು ಕಸ ವಿಲೇವಾರಿ ಕಾರ್ಯವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲ. ಕಸದ ನಿರ್ವಹಣೆ ಸರಿಯಾಗಿ ನಿರ್ವಹಿಸ ಬೇಕಾದರೆ 200 ಮನೆಗೊಬ್ಬ ಪೌರ ಕಾರ್ಮಿಕ ಬೇಕು. ಈಗಿರುವುದು 700 ರಿಂದ 1000 ಮನೆಗೆ ಒಬ್ಬ. ಆತನೂ ಸಹ 70% ಗುತ್ತಿಗೆ ಕಾರ್ಮಿಕ. ಅರೆಹೊಟ್ಟೆಯಲ್ಲಿ, ಕನಿಷ್ಟ ಕೂಲಿಯಿಲ್ಲದೆ ಅರೋಗ್ಯ ಕವಚವಿಲ್ಲದೆ ದುಡಿಯುತ್ತಿದ್ದಾರೆ. ಇದರಲ್ಲೂ ಸಹ ಕೆಲವೊಂದು ಕಡೆಯಲ್ಲಿ 4–5 ತಿಂಗಳಾದರೂ ಸಂಬಳ ನೀಡದೆ ಗುತ್ತಿಗೆದಾರರು ತಲೆ ಮರೆಸಿಕೊಂಡಿರುವುದು ಸಹ ಬೆಳಕಿಗೆ ಬಂದಿದೆ. ತ್ಯಾಜ್ಯ ನಿರ್ವಹಣೆಗೆ 2006ರ ನಂತರ ನೋಂದಣಿಯಾದ ವಾಹನ ಬಳಸಬೇಕೆಂದು ನಿಯಮವಿದ್ದರೂ 3204 ವಾಹನಗಳ ಪೈಕಿ 1099 ವಾಹನ 2006 ಕ್ಕಿಂತ ಮೊದಲು ನೊಂದಣಿಯಾದ ವಾಹನ ಬಳಸುವ ಮೂಲಕ 198 ವಾರ್ಡಗಳಲ್ಲಿ ಹಲವು ನಿಯಮ ಉಲ್ಲಂಘನೆ ಮಾಡುವ ಮೂಲಕ ಕೋಟಿಗಟ್ಟಲೆ ಹಣ ನುಂಗಿ ಹಾಕಲಾಗಿದೆ. ಕಳೆದ ವರ್ಷ ಕೇವಲ 22 ತಿಂಗಳಲ್ಲಿ 631 ಕೋಟಿ ಕಸ ವಿಲೇವಾರಿಗೆ ವೆಚ್ಚ ಮಾಡಲಾಗಿದೆ. ಟೆಂಡರ್ ಮೂಲಕ 261.93 ಕೋಟಿ. ಟೆಂಡರ್ ಇಲ್ಲದೆ 144.60 ಕೋಟಿ, ಇಲಾಖೆಯಿಂದ ತ್ಯಾಜ್ಯ ನಿರ್ವಹಣೆಗೆ 196.61 ಕೋಟಿ. ಹೆಚ್ಚುವರಿ ಸಿಬ್ಬಂದಿ ವಾಹನಕ್ಕೆ 26.95 ಕೋಟಿ ಸೇರಿದಂತೆ ಸುಳ್ಳು ಮಾಹಿತಿಯನ್ನು ದಾಖಲಿಸುವ ಮೂಲಕ 631 ಕೋಟಿ ರೂ ವೆಚ್ಚ ಮಾಡಲಾಗಿದೆ.

ಕಸ ನಿರ್ವಹಣೆ ವೆಚ್ಚ:

ದೆಹಲಿಯಲ್ಲಿ 9000 ಟನ್ ಕಸ ನಿರ್ವಹಣೆಗೆ 200 ಕೋಟಿ, ಚೆನ್ನೈ 4000 ಟನ್ ಗೆ 116 ಕೋಟಿ, ಕಲ್ಕತ್ತಾ 4000ಟನ್ ಗೆ 100 ಕೋಟಿ, ಖರ್ಚು ಮಾಡುತ್ತಿದ್ದು, ಬೆಂಗಳೂರು ಹಿಂದೆ 4000 ಟನ್ ಕಸಕ್ಕೆ 350 ಕೋಟಿ ಖರ್ಚು ಮಾಡುತ್ತಿತ್ತು. ಈಗ ಪ್ರಸ್ತುತ 650 ರಿಂದ 700 ಕೋಟಿಗಳನ್ನು ಖರ್ಚು ಮಾಡುತ್ತಿದರೂ ಸಹ ಕಸದ ಸಮಸ್ಯೆ ತಪ್ಪಿಲ್ಲ. ಇನ್ನೊಂದೆಡೆ ಗುತ್ತಿಗೆದಾರರು ಸಮರ್ಪಕವಾಗಿ ಕಾರ್ಯ ನಿರ್ವಹಿಸುವಂತೆ ಮಾಡಲು ಬಿಬಿಎಂಪಿ ಆಡಳಿತ ಕ್ರಮ ಕೈಗೊಳ್ಳುತ್ತಿಲ್ಲ. ಗುತ್ತಿಗೆದಾರರ ಅಸಹಕಾರ ಹಾಗೂ ಪಾಲಿಕೆ ಅಧಿಕಾರಿಗಳ ಬೇಜವಾಬ್ದಾರಿತನದಿಂದ ನಗರದ ನೈರ್ಮಲ್ಯ ಹದಗೆಡುತ್ತಿದೆ. ಆಯಾ ದಿನದ ಕಸ ವಿಲೇವಾರಿಯಾಗದೆ ಜನರು ಫಜೀತಿ ಪಡುವಂತಾಗಿದೆ. ಗುತ್ತಿಗೆ ಪೌರ ಕಾರ್ಮಿಕರ ಸೇವೆಯಲ್ಲಿ ಸಾಕಷ್ಟು ವ್ಯತ್ಯಯವಾಗಿದ್ದು, ಬಹಳಷ್ಟು ಬಡಾವಣೆಗಳಲ್ಲಿ ಮನೆ– ಮನೆಯಿಂದ ಕಸ ಸಂಗ್ರಹಣೆ ಸ್ಥಗಿತಗೊಂಡಿದೆ. ಹಾಗೆಯೇ ಆಟೊ ಟಿಪ್ಪರ್‌ಗಳೂ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ.

ಏನು ಮಾಡಬೇಕು? ವೈಜ್ಞಾನಿಕ ಕಸನಿರ್ವಹಣ ಘಟಕ ಮತ್ತು ನಿರ್ವಹಣೆಗೆ ಸರ್ಕಾರದ ಮೇಲೆ ಒತ್ತಡ ಹೇರುವುದು ಮತ್ತು ಕಸದ ಹೆಸರಿನಲ್ಲಿ ಜನರ ತೆರಿಗೆ ಹಣ ಲೂಟಿಯಾಗುತ್ತಿರುವ ಭ್ರಷ್ಟಾಚಾರದ ಬಗ್ಗೆ ಕಾರ್ಯಕ್ರಮ ರೂಪಿಸಬೇಕು. ತ್ಯಾಜ್ಯ ನಿರ್ವಹಣೆಗೆ ಕೇರಳದಲ್ಲಿ ವೆಂಗೆರಿ ಪ್ರದೇಶದಲ್ಲಿ "ಕಸದಿಂದ ರಸ" ಅನ್ನುವ ಘೋಷಣೆಯೊಂದಿಗೆ ಸಾವಯವ ತೋಟ ನಿರ್ಮಿಸಿದ ರೀತಿಯಲ್ಲಿ ತ್ಯಾಜ್ಯ ವಿಲೇವಾರಿಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಮನೆಯಂಗಳದಲ್ಲಿ ಸಾವಯವ ತೋಟಕ್ಕೆ ಪ್ರಚೋದನೆ ನೀಡಿ ಕೊಳೆಯುವ ವಸ್ತು ಮತ್ತು ಗೊಬ್ಬರ ಬಳಸಲು ಕಾರ್ಯಕ್ರಮ ರೂಪಿಸಬೇಕು.

ಕುಡಿಯಾಕ ನೀರಿಲ್ಲ

ನಗರದಲ್ಲಿ ಕುಡಿಯುವ ನೀರನ್ನು ಸಮರ್ಪಕವಾಗಿ ಒದಗಿಸಲಾಗದ ಪರಿಸ್ಥಿತಿ ಇದೆ. ಕುಡಿಯುವ ನೀರನ್ನು ಗಂಗಾ ಕಲ್ಯಾಣ ಯೋಜನೆ ಹೆಸರಿನಲ್ಲಿ ಖಾಸಗೀಕರಣ ಮಾಡುತ್ತಿದ್ದು ನೀರಿಗೆ ಮೀಟರ್ ಅಳವಡಿಸುವ ಕೆಲಸವನ್ನು ಒಂದು ಕಡೆ ಮಾಡುತ್ತಾ, ಸಾರ್ವಜನಿಕ ನಲ್ಲಿಗಳನ್ನು ಕಿತ್ತು ಹಾಕಿ ಹಣ ಕೊಟ್ಟು ನೀರು ಖರೀದಿ ಮಾಡುವ ಪರಿಸ್ಥಿತಿಯನ್ನು ಜಲಮಂಡಳಿ ನಿರ್ಮಾಣ ಮಾಡಿದೆ. ನೀರಿನ ಬೆಲೆ ಏರಿಕೆಗಳ ವಿರುದ್ದ ಹೋರಾಟಗಳು ನಡೆಯುತ್ತಿವೆ. ಅದರೆ ಇದು ಸಾಲದಾಗಿದೆ. ವಿಶ್ವ ಸಂಸ್ಥೆಯ ಮಾನದಂಡದ ಪ್ರಕಾರ ಪ್ರತಿದಿನ ಒಬ್ಬ ವ್ಯಕ್ತಿಗೆ 135 ಲೀಟರ್ ನೀರಿನ ಅಗತ್ಯವಿದೆ. 5 ಜನರು ಇರುವ ಕುಟುಂಬಕ್ಕೆ 675 ಲೀ ನೀರಿನ ಅವಶ್ಯಕತೆ ಇದೆ. ಆದರೆ ಈಗ ಕೇವಲ 300 ಲೀ ಪೂರೈಕೆಯಾಗುತ್ತಿದೆ. ಕೆಲವಡೆ 100 ಲೀ ಸಹ ಸಿಗುವುದಿಲ್ಲ. ಇನ್ನು ಕೆಲವು ಕಡೆಗಳಲ್ಲಿ ಒಂದು ಹನಿ ನೀರಿಲ್ಲದ ಪರಿಸ್ಥಿತಿಯನ್ನು ಕಾಣಬಹುದು. ನೀರು ಪೂರೈಕೆಯನ್ನು ಇಂದು ಸೇವೆಯಾಗಿ ಪರಿಗಣಿಸದೆ, ಕೇಂದ್ರ ಹಾಗು ರಾಜ್ಯ ಸರ್ಕಾರಗಳ ನವ–ಉದಾರವಾದಿ ನೀತಿಗಳ ಪರಿಣಾಮವಾಗಿ ಮಾರಾಟದ ಸರಕಾಗಿದೆ. ಹೀಗಾಗಿ ದುಡ್ಡು ಕೊಟ್ಟವರಿಗೆ ನೀರು ಪೂರೈಕೆ ಎನ್ನುವ ಜಲಮಂಡಳಿಯ ಈ ಅಘೋಷಿತ ನಿಲುವು, ಎಲ್ಲವನ್ನು ಖರ್ಚು ಮತ್ತು ಆದಾಯದ ಮಾನದಂಡದಿಂದಲೇ ನೋಡುವುದು ಜನ ವಿರೋಧಿ ನೀತಿ ಒಂದೆಡೆಯಾದರೆ, ದೇಶದಲಿ ಜನಸಂಖ್ಯೆ ಹೆಚ್ಚಳ ಹಾಗು ತಾಪಮಾನ ಏರಿಕೆಯಿಂದ ನೀರಿನ ಆವಿ ಪ್ರಮಾಣ ಹೆಚ್ಚುತ್ತಿದೆ. ನೀರಿನ ಲಭ್ಯತೆ ಕಡಿಮೆ ಆಗುವುದರಿಂದ 2050 ರ ವೇಳೆಗೆ ಬೆಳೆ ಇಳುವರಿ ಶೇ 5 ರಷ್ಟು ಕುಂಠಿತಗೊಳಲಿದೆ. ಮಳೆಯ ಪ್ರಮಾಣ ಶೇ 31 ರಷ್ಟು ಕಡಿಮೆ ಆಗಲಿದೆ. ಸಮುದ್ರದ ಮಟ್ಟ 100 ಸೆ.ಮೀ.ನಷ್ಟು ಏರಿಕೆಯಾಗಲಿದೆ. ಹಾಗಾಗಿ 2050ರ ಹೊತ್ತಿಗೆ ಈಗಿರುವ ನೀರಿನ ಪ್ರಮಾಣ ಶೇ 37 ರಷ್ಟು ಕಡಿಮೆ ಆಗಲಿದೆ ಎಂದು ಇಸ್ರೊ ಸಂಸ್ಥೆ ಅಭಿಪ್ರಾಯಪಟ್ಟಿದೆ. ಸಜಲ ಹೆಸರಿನಲ್ಲಿ ಜನರ ಸುಲಿಗೆ ಹಾಗು ನೀರಿನದರ ಏರಿಕೆ ವಿರುದ್ದದ ಹೋರಾಟವನ್ನು ನಡೆಸಲಾಗಿದೆ. ನೀರಿನ ಖಾಸಗೀಕರಣವನ್ನು ತಡೆಗಟ್ಟಿ ಎಲ್ಲ ಜನತೆಗೆ ಶುದ್ದ ನೀರನ್ನು ಖಾತ್ರಿಗೊಳಿಸಬೇಕೆಂದು ಹೋರಾಟಗಳು ನಡೆಯಬೇಕು.

ಆರೋಗ್ಯ ಅವ್ಯವಸ್ಥೆ

ಸರ್ಕಾರಿ ಮತ್ತು ಬಿ.ಬಿ.ಎಮ್.ಪಿ. ಆಸ್ಪತ್ರೆಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಆವ್ಯವಸ್ಥೆ ಜನರನ್ನು ಖಾಸಗಿ ಆಸ್ಪತ್ರೆಗಳಲ್ಲಿ ದುಬಾರಿ ಶುಲ್ಕ ತೆತ್ತು ಆರೋಗ್ಯ ಸೇವೆ ಪಡೆಯುವಂತೆ ಮಾಡಿದೆ. ಖಾಸಗಿ ಆರೋಗ್ಯ ವಿಮಾ ಕಂಪನಿಗಳ ಪಾಲಿಸಿಗೆ ಉತ್ತಮ ಮಾರುಕಟ್ಟೆ ನಿರ್ಮಿಸಿಕೊಟ್ಟಂತಾಗಿದೆ.

ಡೆಂಗ್ಯೂ, ಚಿಕನ್‌ಗುನ್ಯಾ, ಮುಂತಾದ ಸಾಂಕ್ರಾಮಿಕ ರೋಗಗಳು ಈ ನಡುವೆ ತೀವ್ರವಾಗಿ ಹೆಚ್ಚುತ್ತಿವೆ. ಇದಲ್ಲದೆ ಟಿ.ಬಿ, ಕ್ಯಾನ್ಸರ್ ನಂತಹ ಕಾಯಿಲೆಗಳು ಸಹ ಸಾಮಾನ್ಯ ಎಂಬಂತೆ ಜನರನ್ನು ಭಾದಿಸುತ್ತಿದ್ದು, ಜನರು ಆರೋಗ್ಯಕ್ಕಾಗಿ ಲಕ್ಷಾಂತರ ರೂ ಖರ್ಚು ಮಾಡುವ ಪರಿಸ್ಥಿತಿಗಳಿವೆ. ಕನಿಷ್ಠ ಸೊಳ್ಳೆ ನಿಯಂತ್ರಣಕ್ಕೆ ಬಿ.ಬಿ.ಎಂ.ಪಿ ಗೆ ಸಾದ್ಯವಾಗಿಲ್ಲ. ರಾಷ್ಟ್ರೀಯ ಸ್ವಾಸ್ಥ್ಯ ಬೀಮಾ ಯೋಜನೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಜಾರಿಯಾಗಿದೆ. ಜನರು/ಕುಟುಂಬಗಳು ಅದರಲ್ಲಿ ನೊಂದಣೆಯಾಗಿವೆ. ಇದರ ಜವಾಬ್ದಾರಿಯನ್ನು ರಾಜ್ಯ ಕಾರ್ಮಿಕ ಇಲಾಖೆಗೆ ನೀಡಲಾಗಿದೆ. ಅಸಂಘಟಿತ ಕಾರ್ಮಿಕರಿಗೆ ಇದು ಅನ್ವಯವಾಗುತ್ತದೆ. ಅದರೆ ಸರ್ಕಾರವು ಅಸಂಘಟಿತ ಕಾರ್ಮಿಕರ ಭದ್ರತಾ ಮಂಡಳಿಗೆ ಫಲಾನುಭವಿಗಳನ್ನು ನೊಂದಾಯಿಸದಿರುವ ಕಾರಣ ಹಾಗು ಪ್ರತಿ ದಿನ ಸ್ಥಳೀಯವಾಗಿ ಉಪಯೋಗಿಸುವ ಆಸ್ಪತ್ರೆಗಳಿಗೆ ಸೌಲಭ್ಯವಿಲ್ಲದೆ ಹೆರಿಗೆ ಆಸ್ಪತ್ರೆಗಳಿಗೆ ಜೋಡಣೆ ಮಾಡಿರುವುದರಿಂದ ಇದರ ಪ್ರಯೋಜನ ಜಿಲ್ಲೆಯ ಲಕ್ಷಾಂತರ ಜನತೆಗೆ ಇಲ್ಲದಂತಾಗಿದೆ. ಈ ಸೌಲಭ್ಯವನ್ನು ಮನೆಕೆಲಸಗಾರರು ಹಾಗು ಬೀದಿ ವ್ಯಾಪಾರಿಗಳಿಗೆ ಸಿಗುವ ನಿಟ್ಟಿನಲ್ಲಿ ಹೋರಾಟ ಅಗತ್ಯವಿದೆ.

ನಾಯಿಕೊಡೆಗಳಂತೆ ತಲೆ ಎತ್ತಿರುವ ಖಾಸಗಿ ಆಸ್ಪತ್ರೆಗಳು ಬಡಜನರನ್ನು ಸುಲಿಗೆ ಮಾಡುವುದನ್ನು ಮನಗಂಡ ಸರ್ಕಾರ ಖಾಸಗಿ ಆಸ್ಪತ್ರೆಗಳ ನಿಯಂತ್ರಣ ಮಾಡುವ ಮಸೂದೆಯನ್ನು ತರಲು ಹೊರಟ್ಟಿರುವುದನ್ನು ವಿರೋದಿಸಿ ಖಾಸಗಿ ಆಸ್ಪತ್ರೆಯ ವೈದ್ಯರು 10 ದಿನಗಳಿಂದ ಮಸೂದೆ ಕೈಬಿಡಬೇಕೆಂದು ಒತ್ತಾಯಿಸಿ ಆಸ್ಪತ್ರೆಗಳ ಬಂದ್ ಮಾಡಿ ನಡೆಸಿದ ಹೋರಾಟದ ಭಾಗವಾಗಿ 46 ಮಕ್ಕಳು ಸಾವನಪ್ಪಿರುತ್ತಾರೆ. ಸರ್ಕಾರ ತರಲು ಹೊರಟಿರುವ ಖಾಸಗಿ ಆಸ್ಪತ್ರೆಗಳ ನಿಯಂತ್ರಣದ ಮಸೂದೆಯನ್ನು ಕೆಲವು ತಿದ್ದುಪಡಿಗಳ ಮುಂಖಾತರ ಜಾರಿಗೆ ತರಬೇಕು. ವೈದ್ಯರನ್ನು ಜೈಲಿಗೆ ಕಳಿಸುವ ಅಂಶವನ್ನು ಕೈಬಿಡಬೇಕು ನಿಯಂತ್ರಣ ಮಾಡಲು ಕ್ರಮಕೈಗೊಳಬೇಕು. ಸರ್ಕಾರಿ ಆಸ್ಪತ್ರೆಗಳಿಗೆ ಸಾವಿರಾರು ಕೋಟಿ ಹಣವನ್ನು ನೀಡುವ ಮುಲಕ ಸರ್ಕಾರಿ ಆಸ್ಪತ್ರೆಯನ್ನು ಬಲಪಡಿಸಬೆಕು. ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕು. ●

ಬೆಂಗಳೂರಿನ ಯುವಜನ ಮತ್ತು ಉದ್ಯೋಗ........ ಪುಟ 9 ರಿಂದ

ಇದರಿಂದಾಗಿ ಸಹಜವಾಗಿ ಯುವಜನರಲ್ಲಿ ರಾಜಕೀಯದ ಬಗ್ಗೆ ಸಿನಿಕತನ, ಅಸಡ್ಡೆ, ತಾತ್ಸಾರ ಪ್ರವೃತ್ತಿ ಮೊದಲಿನಿಂದಲೂ ಇದೆ. ಹೀಗಿದ್ದರೂ ಬಹುಪಾಲು ಯುವಜನತೆ ರಾಜಕೀಯದಲ್ಲಿ ಸಕ್ರಿಯ ಪಾತ್ರ ವಹಿಸುತ್ತಾ ಬರುತ್ತಿದ್ದಾರೆ. ಈಗಲೂ ಕೂಡ ಯಾವುದೇ ಚುನಾವಣೆಯಲ್ಲಿ ಯುವಜನರು ನಿರ್ಣಾಯಕರಾಗಿರುತ್ತಾರೆ. ಆದ್ದರಿಂದಲೇ ಎಲ್ಲಾ ರಾಜಕೀಯ ಪಕ್ಷಗಳು ಯುವಜನರನ್ನೇ ಪರಿಣಾಮಕಾರಿಯಾಗಿ ಉಪಯೋಗ ಮಾಡುತ್ತಿವೆ.

ಕಾರ್ಮಿಕರ ಶೋಷಣೆ

ಆರ್ಥಿಕ ಬಿಕ್ಕಟ್ಟಿನ ಕಾರಣದಿಂದ ಕಾರ್ಮಿಕರು ಕೆಲಸ ಕಳೆದುಕೊಳ್ಳುವ ಸ್ಥಿತಿ ಈಗಲೂ ಮುಂದುವರಿಯುತ್ತಿದೆ. ಅತಿಕಡಿಮೆ ವೇತನದಲ್ಲಿ ದುಡಿಯುವ ಗುತ್ತಿಗೆ, ತರಬೇತಿ ಕಾರ್ಮಿಕರ ಸಂಖ್ಯೆ ವಿಪರೀತವಾಗಿ ಹೆಚ್ಚುತ್ತಲಿದೆ. ಹಲವು ಘನ ಕೈಗಾರಿಕೆಗಳ ಕಾರ್ಮಿಕರು ಈ ಅವದಿಯಲ್ಲಿ ಮುಷ್ಕರಕ್ಕೆ ಇಳಿದಿದ್ದರು. ಕಾರ್ಮಿಕ ಸಂಘಕ್ಕೆ ಮಾನ್ಯತೆ ಕೊಡಲು ನಿರಾಕರಿಸಿ, ವಿಪರೀತ ಕಿರುಕುಳ ಕೊಡುವುದನ್ನು ಮಾಲೀಕರು ಮುಂದುವರಿಸುತ್ತಿದ್ದಾರೆ. ಬೆಂಗಳೂರಿನ ಮಾಲೀಕರು ಕನಿಷ್ಟ ವೇತನ ಹೆಚ್ಚಳ ತಡೆಯುವುದರಲ್ಲಿ, ಬೋನಸ್ ಹೆಚ್ಚಳದ ವಿರುದ್ಧ ಮೊಕದ್ದಮೆ ಹೂಡುವುದರಲ್ಲಿ ಸಕ್ರಿಯ ಪಾತ್ರ ವಹಿಸುತ್ತಿದ್ದಾರೆ. ಸರ್ಕಾದ ಮೇಲೆ ಒತ್ತಡ ತಂದು ಕಾರ್ಮಿಕ ಕಾನೂನುಗಳಲ್ಲಿ ತಿದ್ದುಪಡಿ ತರುವ ಪ್ರಯತ್ನವನ್ನು ಮಾಸುತ್ತಿದ್ದಾರೆ.

ಇತ್ತೀಚೆಗೆ ನಡೆದ ಗಾರ್ಮೆಂಟ್ಸ್ ಕಾರ್ಮಿಕರ ಹೋರಾಟ ಜಗತ್ತಿನ ಗಮನ ಸೆಳೆದಿದೆ. ಗಾರ್ಮೆಂಟ್ಸ್ ಕಾರ್ಮಿಕರ ಮೇಲಿನ ವಿಪರೀತ ಶೋಷಣೆ ಹಾಗು ಕೆಲಸದ ಭದ್ರತೆ ಇಲ್ಲದ ಅಮಾನವೀಯ ಸೇವಾ ನಿಯಮಗಳು, ಬಲಿಷ್ಟ ಸಂಘಟನೆಯ ಕೊರತೆ ಮುಂತಾದವು ಈ ಹೋರಾಟದಲ್ಲಿ ಹೊರಬಂದ ಅಂಶಗಳಾಗಿದೆ. ಮಾಲೀಕರ ತೀವ್ರ ಶೋಷಣೆಗೆ ಒಳಗಾಗಿರುವ ಲಕ್ಷಾಂತರ ಅಸಂಘಟಿತ ಕಾರ್ಮಿಕರ ಒಂದು ವಿಭಾಗ ಆಕ್ರೋಶ ಇದಾಗಿತ್ತು.

ಮತ್ತೊಂದೆಡೆ ಆರ್ಥಿಕ ಹೋರಾಟಗಳಿಗೆ ಮಾತ್ರ ಚಳುವಳಿಯನ್ನು ಸೀಮಿತಗೊಳಿಸಿಕೊಳ್ಳುವ ಆರ್ಥಿಕವಾದವು ಸಂಘಟಿತ ಕಾರ್ಮಿಕರಲ್ಲಿ ಹೆಚ್ಚಾಗುತ್ತಿದೆ. ಚಳುವಳಿಯ ಶಕ್ತಿಯನ್ನು ತಮ್ಮ ಸ್ವಂತ ಲಾಭಕ್ಕಾಗಿ ಬಳಸಿಕೊಳ್ಳುವುದುರ ಕಡೆಗೆ ಕಾರ್ಮಿಕರ ಪ್ರಯತ್ನ ವಿದೆ. ಕಾರ್ಮಿಕ ವರ್ಗದ ಹಿತಕ್ಕೆ ಮಾರಕವಾಗುವ ಸರ್ಕಾರದ ನಿತಿಗಳ ವಿರುದ್ಧ ನಡೆಯುವ ಚಳುವಳಿಗಳಲ್ಲಿ ಕಾರ್ಮಿಕರನ್ನು ಕರೆತರುವುದು, ಹಾಗು ಭಾಗವಹಿಸುವಂತೆ ಮಾಡುವುದು ಒಂದು ದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ. ಬಂಡವಾಳಶಾಹಿ ವರ್ಗದ ಅವಗುಣಗಳು ಸಾಮಾನ್ಯ ಕಾರ್ಮಿಕರ ಮೇಲೆ ಪ್ರಭಾವ ಬೀರುತ್ತಿದೆ. ವರ್ಗ ಐಕ್ಯತೆಯನ್ನು ಕಟ್ಟುವ ಕೆಲಸಕ್ಕೆ ದೊಡ್ಡ ತೊಡಕ್ಕಾಗಿ ಈ ಬೆಳವಣಿಗೆಗಳು ಪರಿಣಮಿಸುತ್ತಿವೆ.

ಬೆಂಗಳೂರು ಕಾರ್ಮಿಕರ ಪರಿಸ್ಥಿತಿ

ಸರ್ಕಾರದ ಆರ್ಥಿಕ ಸಮೀಕ್ಷೆಯ ಪ್ರಕಾರ ಬೆಂಗಳೂರು ನಗರ ಜಿಲ್ಲೆಯ ತಲಾ ಮಾಸಿಕ ಆದಾಯ ರೂ. 2,71,387 ಹಾಗು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಲಾ ಮಾಸಿಕ ಆದಾಯ ರೂ. 1,27,264 ಆಗಿರುತ್ತದೆ. ಅತಿ ಶ್ರೀಮಂತರು, ಮಧ್ಯಮದ ವರ್ಗದ ಆದಾಯ ಹೆಚ್ಚಾಗುತ್ತಿರುವ ಅದೇ ವೇಳೆ ಬಹು ಸಂಖ್ಯೆಯಲ್ಲಿನ ಕಾರ್ಮಿಕರ ವೇತನ ಕುಸಿಯುತ್ತಿದೆ. ಕರ್ನಾಟಕದ ಒಟ್ಟು ಕಾರ್ಖಾನೆಗಳಲ್ಲಿ 55% ಕಾಖಾನೆಗಳು ಬೆಂಗಳೂರು ನಗರ ಹಾಗು ಗ್ರಾಮಾಂತರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಕಾರ್ಖಾನೆಗಳ ಸಂಖ್ಯೆ ಹೆಚ್ಚುತ್ತಿದ್ದರೂ ಕಾರ್ಮಿಕರ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತಿದೆ. ಈ ಕೆಳಗೆ ಕರ್ನಾಟಕ ರಾಜ್ಯದಲ್ಲಿನ ಒಟ್ಟು ಕಾರ್ಖಾನೆಗಳ ವಿವರವನ್ನು ನೀಡಲಾಗಿದೆ.

ವರ್ಷ	ಕಾರ್ಖಾನೆಗಳು	ಕಾರ್ಮಿಕರ ಸಂಖ್ಯೆ
2006-07	11,175	10,65,453
2007-08	11,361	11,91,181
2008-09	11,983	10,79,681
2010-11	13,012	13,22,873

ಬೆಂಗಳೂರು ಜಿಲ್ಲೆಯಲ್ಲಿ ಕಾರ್ಖಾನೆಗಳ ಇಲಾಖೆ ನೀಡಿರುವ ವಿವರಗಳ ಪ್ರಕಾರ 31.03.2011ರ ವೇಳೆಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ 6594 ಕಾರ್ಖಾನೆಗಳಲ್ಲಿ 7,32,982 ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದಾರೆ. ಗ್ರಾಮಾಂತರ ಜಿಲ್ಲೆಯಲ್ಲಿ 460 ಕಾರ್ಖಾನೆಗಳಲ್ಲಿ 67,480 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. 2009ರಲ್ಲಿ ಬೆಂಗಳೂರು ನಗರ ಜಿಲ್ಲೆಯಲ್ಲಿ 7158 ಕಾರ್ಖಾನೆಗಳಲ್ಲಿ 7,75,492 ಕಾರ್ಮಿಕರು ಕೆಲಸ ಮಾಡುತ್ತಿದ್ದರು ಹಾಗೂ ಗ್ರಾಮಾಂತರ ಜಿಲ್ಲೆಯಲ್ಲಿ 491 ಕಾರ್ಖಾನೆಗಳಲ್ಲಿ 69,129 ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಈ ಸಂಖ್ಯೆ 2016ರಲ್ಲಿ ಇನ್ನು ಏರುಪೇರು ಆಗಿರಬಹುದು. 2011–12ರಲ್ಲಿ ಹೊಸ ಉದ್ಯೋಗ ಸೃಷ್ಟಿಯಾಗಿಲ್ಲ ಬದಲಿಗೆ ಕಡಿತವಾಗಿದೆ ಎಂಬುದನ್ನು ಗಮನಿಸಬಹುದಾಗಿದೆ.

ನಗರ ಕೇಂದ್ರದಲ್ಲಿದ ಕೆಲವು ದೊಡ್ಡ ಕಾರ್ಖಾನೆಗಳು ದೇವನಹಳ್ಳಿ, ದೊಡ್ಡಬಳ್ಳಾಪುರ, ದಾಬಸ್ ಪೇಟೆ ಹಾಗು ಬಿಡದಿ ಕೈಗಾರಿಕಾ ಪ್ರದೇಶಗಳಿಗೆ ಸ್ಥಳಾಂತರ ಹೊಂದಿದೆ. ಈ ರೀತಿಯಲ್ಲಿ ಸ್ಥಳಾಂತರ ಹೊಂದಿರುವ ಕಾರ್ಖಾನೆಗಳಿಗೆ ಭೂಮಿ ಬೆಲೆಯ ಹೆಚ್ಚಳದಿಂದ ಭಾರಿ ದೊಡ್ಡ ಲಾಭವಾಗಿದೆ. ಹೊಸ ಪ್ರದೇಶಗಳಲ್ಲಿ ಪ್ರಾರಂಭವಾದ ಅದೇ ಕಾರ್ಖಾನೆಗಳಿಗೆ ತೆರಿಗೆ ರಿಯಾಯತಿ ಒಳಗೊಂಡು ಹಲವು ಸೌಲಭ್ಯಗಳನ್ನು ಜನರ ಹಣವನ್ನು ಉಪಯೋಗಿಸಿ ಸರ್ಕಾರ ಮಾಡಿಕೊಟ್ಟಿದೆ.

ಬಹುರಾಷ್ಟ್ರೀಯ ದೊಡ್ಡ ಕಂಪನಿಗಳಿಗೆ ಬಿಡಿಬಾಗಗಳನ್ನು ಉತ್ಪಾದನೆ ಮಾಡಿಕೊಡುವ ದೊಡ್ಡ ಸಂಖ್ಯೆಯಲ್ಲಿನ ಕಾರ್ಖಾನೆಗಳು ಬೆಂಗಳೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿವೆ. ಈ ದೊಡ್ಡ ಕಾರ್ಖಾನೆಗಳ ಕಾರ್ಪೊರೇಟ್ ಮಾಲಿಕರು ಪ್ರತಿ ವರ್ಷವು ಬಿಡಿಬಾಗಗಳ ಬೆಲೆಯನ್ನು ಕಡಿಮೆ ಮಾಡಿ ಕೊಂಡುಕೊಳ್ಳುವ ಕಾರಣ ಹಲವು ಕಾರ್ಖಾನೆಗಳಲ್ಲಿ ವೇತನ ಹೆಚ್ಚಳದ ಬೇಡಿಕೆಗಳು ಅಗತ್ಯ ಹಾಗು ಕಾರ್ಮಿಕರ ನಿರೀಕ್ಷಿತ ಮಟ್ಟಕ್ಕೆ ಆಗುತ್ತಿಲ್ಲ. ಮಾತ್ರವಲ್ಲ ಈ ಬಹುರಾಷ್ಟ್ರೀಯ ಕಂಪನಿಗಳು ಯಾವುದೇ ಹೊಣೆ ಹೊತ್ತುಕೊಳ್ಳದೆ ಸರ್ವಸ್ವತಂತ್ರವಾಗಿ ಬೆಂಗಳೂರಿನ ಲಕ್ಷಾಂತರ ಕಾರ್ಮಿಕರನ್ನು ಅಮಾನವೀಯ ಶೋಷಣೆಗೆ ಒಳ ಪಡಿಸುತ್ತಿದ್ದಾರೆ.

ಬೆಂಗಳೂರಿನ ಪ್ರತಿ ಕಾರ್ಮಿಕನ ಉತ್ಪಾದಕತೆ ಸರಾಸರಿಯಾಗಿ, ಉತ್ಪಾದನಾ ವಲಯದಲ್ಲಿ ರೂ. 2,35,843 ರಾಗಿದ್ದರೆ, ಅದು ಸೇವಾ ವಲಯದಲ್ಲಿ ರೂ. 2,88,176 ಆಗಿರುತ್ತದೆ. ಕೃಷಿ ವಲಯದಲ್ಲಿ ಇದು ಕೇವಲ ರೂ. 54,028 ಆಗಿದೆ. ಕೃಷಿ ವಲಯದಲ್ಲಿ ಆಗುವ ಮೌಲ್ಯ ಉತ್ಪಾದನೆಯ 4 ಪಟ್ಟು ಕಾರ್ಖಾನೆಯಲ್ಲಿ, 5ಪಟ್ಟು ಸೇವಾ ವಲಯದಲ್ಲಿ ಆಗುತ್ತಿದೆ. ಗ್ರಾಮೀಣ ಪ್ರದೇಶಗಳಿಂದ ದುಡಿಮೆಗಾರರು ವಲಸೆ ಬರಲಿಕ್ಕೆ ಇದೊಂದು ಪ್ರಮುಖ ಕಾರಣವಾಗುತ್ತಿದೆ. ಬಂಡವಾಳ ಹಾಗು ದುಡಿಮೆ ಮಧ್ಯೆ ವೈರುದ್ಯ ತೀವ್ರವಾಗುತ್ತಿದೆ.

ಈ ಹಿನ್ನೆಲೆಯಲ್ಲಿ ನಮ್ಮ ಹೋರಾಟ ಹಾಗು ಚಟುವಟಿಕೆಗಳು ವ್ಯಾಪಕವಾಗ ಬೇಕಿದೆ. ಜಿಲ್ಲೆಯಲ್ಲಿ ದುಡಿಯುವ ಜನರ ಚಳುವಳಿ ಬಲಪಡಿಸಲು, ವ್ಯಾಪಕ ಐಕ್ಯತೆಯನ್ನು ಕಟ್ಟಿ ಬೆಳಿಸುವ ಜವಾಬ್ದಾರಿ ಕಾರ್ಮಿಕ ವರ್ಗದಮೇಲಿದೆ. ಕಾರ್ಮಿಕರನ್ನು ವರ್ಗವಾಗಿ ಸಂಘಟಿತ ಚಳುವಳಿಗೆ ಸಿದ್ಧಗೊಳಿಸಲು ನಾವು ಕೆಲಸ ಮಾಡಬೇಕು. ●





ದಿಲ್ಲಿಯಲ್ಲಿ ರೈತರ ನವೀನ ಕಾರ್ಯಾಚರಣೆ- ಕಿಸಾನ್ ಸಂಸತ್ತು

ಪುಟ 8 ರಿಂದ



ಸಾಲಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ, ಮಗಳು, ಸೋದರಿ ಅಥವ ತಾಯಂದಿರು ಇದ್ದರು. ಕೆಲವರು ತಮ್ಮ ದುಸ್ಥಿತಿಯನ್ನು ತೋಡಿಕೊಂಡರು, ಆದರೆ ಅದೇ ವೇಳೆಗೆ ಆತ್ಮಹತ್ಯೆಯತ್ತ ತಳ್ಳಿದ ಸರಕಾರದ ವಿನಾಶಕಾರಿ ಧೋರಣೆಗಳನ್ನು ಧೈರ್ಯದಿಂದ ಎದುರಿಸುವ ಛಲವನ್ನೂ ಘೋಷಿಸಿದರು.



ಕಳೆದ ವಾರ ದಿಲ್ಲಿಯ ವಾಹನ ಸವಾರರ ಕಣ್ಸೆಳೆದ ಮೂವರು ಆತ್ಮಹತ್ಯೆ ಮಾಡಿಕೊಂಡಿರುವವರ ಪ್ರತೀಕಗಳೊಂದಿಗೆ ಒಂದು ಬ್ಯಾನರ್–
ಇವರು ಮೂವರೇ ಅಲ್ಲ, ಮೂರು ಲಕ್ಷ ರೈತರು. ಸಾಕು, ಇನ್ನು ಬೇಡ.



ಮಧ್ಯಪ್ರದೇಶದ ಮಂದಸೌರ್ ಮತ್ತು ಇತರೆಡೆಗಳಲ್ಲಿ ಪೋಲೀಸ್ ಗುಂಡುಗಳಿಗೆ ಬಲಿಯಾದ ಹುತಾತ್ಮರಿಗೆ, ಆತ್ಮಹತ್ಯೆ ಮಾಡಿಕೊಂಡ ರೈತರಿಗೆ ಮತ್ತು ಮಹಾರಾಷ್ಟ್ರದ ಯಾವತ್ಮಲ್‌ನಲ್ಲಿ ಕೀಟನಾಶಕ ವಿಷದಿಂದ ಪ್ರಾಣ ಕಳಕೊಂಡ ರೈತರಿಗೆ ಶ್ರದ್ಧಾಂಜಲಿ ಅರ್ಪಿಸುವುದರೊಂದಿಗೆ ಆರಂಭಗೊಂಡಿತು.

ಮಹಿಳಾ ಕಿಸಾನ್ ಸಂಸದ್

ಈ ಕಾರ್ಯಕ್ರಮದ ಒಂದು ವಿಶೇಷ ಅಂಶ. ಇದರಲ್ಲಿ 543 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದರು. ಮೇಧಾ ಪಾಟ್ಕರ್ ಅವರನ್ನುದ್ದೇಶಿಸಿ ಮಾತಾಡಿದರು. ಕವಿತಾ ಕುರುಗಂಟಿ ಇದರ ಉದ್ದೇಶಗಳನ್ನು ಮಂಡಿಸಿದರು. ಅದು ದೇಶದಲ್ಲಿ ರೈತರ, ವಿಶೇಷವಾಗಿ ಮಹಿಳಾ 'ರೈತರ ಗಂಭೀರ ಪರಿಸ್ಥಿತಿಯನ್ನು ಚರ್ಚಿಸಿತು. ಪ್ರತಿನಿಧಿಗಳಲ್ಲಿ ಸಾಲಹೊರೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಪತ್ನಿ, ಮಗಳು , ಸೋದರಿ ಅಥವ ತಾಯಂದಿರು ಇದ್ದರು. ಕೆಲವರು ತಮ್ಮ ದುಸ್ಥಿತಿಯನ್ನು ತೋಡಿಕೊಂಡರು, ಆದರೆ ಅದೇ ವೇಳೆಗೆ ಆತ್ಮಹತ್ಯೆಯತ್ತ ತಳ್ಳಿದ ಸರಕಾರದ ವಿನಾಶಕಾರಿ ಧೋರಣೆಗಳನ್ನು ಧೈರ್ಯದಿಂದ ಎದುರಿಸುವ ಛಲವನ್ನೂ ಘೋಷಿಸಿದರು. ದೇಶದೆಲ್ಲೆಡೆಗಳಿಂದ ಬಂದ ಮಹಿಳಾ ಕಾರ್ಯಕರ್ತರೂ ಮಾತಾಡಿದರು. ಅವರಲ್ಲಿ ಸುಧಾ ಸುಂದರರಾಮನ್, ಆನಿ ರಾಜ ಸೇರಿದ್ದರು. ಮಹಿಳಾ ಕಿಸಾನ್ ಸಂಸದ್ ಕಿಸಾನ್ ಸಂಸದ್ ಎದುರು ಎರಡು ಮಹತ್ವದ ಮಸೂದೆಗಳನ್ನು ಮಂಡಿಸಲು ಸಮ್ಮತಿ ನೀಡಿತು.

ಎರಡು ಮಸೂದೆಗಳು

ಹನ್ನನ್ ಮೊಲ್ಲ, ಎಐಕೆಎಸ್‌ನ ಪ್ರಧಾನ ಕಾರ್ಯದರ್ಶಿ ಮತ್ತು ಮಾಜಿ ಸಂಸತ್ ಸದಸ್ಯರು, "ಸಾಲದಿಂದ ರೈತರ ಮುಕ್ತಿ ಮಸೂದೆ, 2017"ನ್ನು ಮಂಡಿಸಿದರು. ಮತ್ತು ರಾಜು ಶೆಟ್ಟಿ, ಸಂಸತ್ ಸದಸ್ಯರು, 'ಕೃಷಿ ಉತ್ಪನ್ನಗಳಿಗೆ ಖಾತ್ರಿ ಫಲದಾಯಕ ಬೆಲೆಗಳ ರೈತರ ಹಕ್ಕು ಮಸೂದೆ, 2017'ನ್ನು ಮಂಡಿಸಿದರು.

ಈ ಎರಡು ಮಸೂದೆಗಳನ್ನು ಪ್ರತಿಯೊಂದು ರಾಜ್ಯ ಮಟ್ಟದಲ್ಲಿ ಚರ್ಚಿಸಲಾಗುವುದು. ಒಂದು ಕರಡು ರಚನಾ ಸಮಿತಿ ಇದಕ್ಕಾಗಿ ರಾಜ್ಯಗಳಿಗೆ ಭೇಟಿ ನೀಡುತ್ತದೆ. ಈ ಚರ್ಚೆಗಳ ಮೂಲಕ ಅಗತ್ಯ ತಿದ್ದುಪಡಿಗಳನ್ನು ಒಳಗೊಂಡ ಮಸೂದೆಗಳನ್ನು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಮಂಡಿಸಲಾಗುವುದು. ದೇಶದೆಲ್ಲೆಡೆಗಳಿಂದ ಬಂದ ತಿದ್ದುಪಡಿಗಳ ಆಧಾರದಲ್ಲಿ ಹನ್ನನ್ ಮೊಲ್ಲ ಮತ್ತು ರಾಜು ಶೆಟ್ಟಿ ನೇತೃತ್ವದ ಎರಡು ಸ್ಥಾಯಿ ಸಮಿತಿಗಳು ಅಂತಿಮಗೊಳಿಸುತ್ತವೆ.

ಕಿಸಾನ್ ಸಂಸದ್ ಎಐಕೆಎಸ್‌ನ ಉಪಾಧ್ಯಕ್ಷರಾಗಿರುವ ರಾಜಸ್ಥಾನದ ಮಾಜಿ ಶಾಸಕ ಅಮ್ರ ರಾಮ್ ಅವರನ್ನು ತಮ್ಮ ರಾಜ್ಯದಲ್ಲಿ ಕಿಸಾನ್ ಸಭಾ ಹೋರಾಟದಲ್ಲಿ ಪಡೆದ ಚಾರಿತ್ರಿಕ ವಿಜಯಕ್ಕಾಗಿ ಮತ್ತು ಹಾಲಿ ಸಂಸತ್ ಸದಸ್ಯ ರಾಜು ಶೆಟ್ಟಿ ಅವರನ್ನು ಮೋದಿ ನೇತೃತ್ವದ ಬಿಜೆಪಿ ಸರಕಾರ ರೈತರಿಗೆ ಮಾಡಿರುವ ವಿಶ್ವಾಸಘಾತದ ವಿರುದ್ಧ ಸೆಟೆದೆದ್ದು ನಿಂತು ಅದಕ್ಕಾಗಿ ಎನ್‌ಡಿಎ ತ್ಯಜಿಸಿದ್ದಕ್ಕಾಗಿ ಸನ್ಮಾನಿಸಲಾಯಿತು.

ಹನ್ನನ್ ಮೊಲ್ಲ ಸಾಲಹೊರೆ ಮುಕ್ತಿಯ ಮಸೂದೆಯನ್ನು ಮಂಡಿಸುತ್ತ ಬಿಜೆಪಿ ಸರಕಾರ ಮತ್ತು ವ್ಯಾಪಾರಸ್ಥರು ರೈತರಿಗೆ ಸತತವಾಗಿ ಕಡಿಮೆ ಬೆಲೆಗಳನ್ನು ಕೊಟ್ಟು ಲೂಟಿ ಮಾಡಿ ಅವರನ್ನು ಸಾಲಕೂಪದತ್ತ ತಳ್ಳಿದ್ದಾರೆ ಎಂದರು. ಇದರಿಂದ ದೇಶದಲ್ಲಿ 4 ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಳ್ಳುವಂತಾಗಿದೆ. ಆದರೆ ರೈತರೀಗ ತಮ್ಮ ಶೋಷಣೆಯ ವಿರುದ್ಧ ಹೋರಾಡಲು ಒಂದಾಗಿದ್ದಾರೆ, ಇನ್ನು ಮುಂದೆ ಸರಕಾರ ಮತ್ತು ವ್ಯಾಪಾರಸ್ಥರು ತಮ್ಮನ್ನು ಲೂಟಿ ಮಾಡಲು ಬಿಡುವುದಿಲ್ಲ ಎಂದರು. **ದೇಶಾದ್ಯಂತ ರೈತರ ಸಂಘಟನೆಗಳು ಸಾಲಮನ್ನಾದ ಬೇಡಿಕೆಯಿಟ್ಟಿದ್ದಾರೆ. ಆದರೆ ಈಗಿನ ವಿಶಿಷ್ಟತೆಯೆಂದರೆ ಅವರು ಸಂಸತ್ತಿನಲ್ಲಿ ಚರ್ಚಿಸಲು ಮತ್ತು ಅನುಮೋದಿಸಲು ಮಸೂದೆಗಳನ್ನು ಪ್ರಸ್ತುತಪಡಿಸಿದ್ದಾರೆ. ಸಂಸತ್ತು ಇವೆರಡನ್ನೂ ಪಾಸು ಮಾಡಲೇಬೇಕು.** ಈ ಬೇಡಿಕೆಗಳ ಮೇಲೆ ರೈತರ ದೇಶವ್ಯಾಪಿ ಐಕ್ಯ ಹೋರಾಟ ಅವಿಶ್ರಾಂತವಾಗಿ ಮುಂದುವರಿಯುತ್ತದೆ ಎಂದವರು ಪುನರುಚ್ಚರಿಸಿದರು.

ಎಐಕೆಎಸ್ ಅಧ್ಯಕ್ಷ ಡಾ. ಅಶೋಕ ಧವಳೆ ಮಾತಾಡುತ್ತ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರ ಸ್ವತಂತ್ರ ಭಾರತದಲ್ಲೇ ಅತ್ಯಂತ ರೈತ–ವಿರೋಧಿ ಸರಕಾರ ಎಂದು ವರ್ಣಿಸಿದರು. ಹಿಡಿಯಷ್ಟು ಕಾರ್ಪೊರೇಟ್‌ಗಳಿಗೆ ಲಕ್ಷ ಕೋಟ್ಯಂತರ ರೂ.ಗಳ ಸಾಲಮಾಫಿ ಕೊಡುವ ಸರಕಾರ ಸಂಕಟದಲ್ಲಿರುವ ಕೋಟ್ಯಂತರ ರೈತರಿಗೆ ಅದನ್ನು ನಿರಾಕರಿಸುತ್ತಿದೆ ಎಂದು ಖಂಡಿಸಿದರು. ಡಾ.ಎಂಎಸ್ ಸ್ವಾಮಿನಾಥನ್ ನೇತೃತ್ವದ ರಾಷ್ಟ್ರೀಯ ರೈತರ ಆಯೋಗದ ಕನಿಷ್ಟ ಬೆಂಬಲ ಬೆಲೆ ಉತ್ಪಾದನಾ ಖರ್ಚಿನ ಒಂದೂವರೆ ಪಟ್ಟು ಇರಬೇಕು ಎಂಬ ಶಿಫಾರಸನ್ನು ಬಿಜೆಪಿ ಸರಕಾರವಾಗಲೀ, ಕಾಂಗ್ರೆಸ್ ಸರಕಾರವಾಗಲೀ ಜಾರಿ ಮಾಡಲಿಲ್ಲ ಎಂದು ಅವರು ಹೇಳಿದರು.

ಬಿಜೆಪಿ ಸರಕಾರವಂತೂ ಈ ಬಗ್ಗೆ ಚುನಾವಣಾ ಸಮಯದಲ್ಲಿ ಭರವಸೆಯನ್ನೂ ನೀಡಿತ್ತು, ಆದರೆ ವಿಶ್ವಾಸಘಾತ ಮಾಡಿತು. ರೈತರ ಹೋರಾಟದಲ್ಲಿನ ಐಕ್ಯತೆ ಸರಕಾರದ ಜನ–ವಿರೋಧಿ ದಮನಕಾರಿ ತಂತ್ರಗಳನ್ನೂ ವಿಫಲಗೊಳಿಸುತ್ತಾರೆ, ಜನಗಳನ್ನು ಕೋಮುಆಧಾರದಲ್ಲಿ ವಿಭಜಿಸುವ ದುಷ್ಟ ಪಿತೂರಿಯನ್ನೂ ವಿಫಲಗೊಳಿಸುತ್ತಾರೆ ಎಂದು ಧವಳೆ ಹೇಳಿದರು.

ರಾಜಸ್ಥಾನ ಎಐಕೆಎಸ್‌ನ ಅಮ್ರ ರಾಮ್ ಮತ್ತು ಮಹಾರಾಷ್ಟ್ರದ ಡಾ.ಅಜಿತ್ ನವಳೆ ತಮ್ಮ ರಾಜ್ಯಗಳಲ್ಲಿ ರೈತ ಹೋರಾಟಗಳು ಸಾಧಿಸಿದ ವಿಜಯಗಳತ್ತ ಗಮನ ಸೆಳೆಯುತ್ತ ಈ ಹೋರಾಟವೂ ಯಶಸ್ವಿಯಾಗುತ್ತದೆ ಎಂದು ಹೇಳಿದರು.

ವಿ ಎಂ ಸಿಂಗ್, ಯೋಗೇಂದ್ರ ಯಾದವ್, ಅತುಲ್ ಅಂಜನ್, ಮೇಧಾ ಪಾಟ್ಕರ್, ಡಾ.ಸುನೀಲಂ, ಪ್ರತಿಭಾ ಶಿಂದೆ, ರಜಾರಾಂ ಸಿಂಗ್, ಕೋಡಿಹಳ್ಳಿ ಚಂದ್ರಶೇಖರ್ ಆಶಿಷ್ ಮಿತ್ತಲ್, ಮತ್ತಿತರ ಕಿಸಾನ್ ಮುಖಂಡರು ಸಂಸದನ್ನುದ್ದೇಶಿಸಿ ಮಾತಾಡಿದರು. ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಮುಖಂಡರೂ ಹಾಜರಿದ್ದು ಸೌಹಾರ್ದ ವ್ಯಕ್ತಪಡಿಸಿದರು.

ಆದರೆ ಸಂವೇದನಾಹೀನ ಬಿಜೆಪಿ ಸರಕಾರ,



ಪ್ರಧಾನ ಮಂತ್ರಿಗಳು ಮತ್ತು ಕೃಷಿ ಮಂತ್ರಿಗಳು ಎಐಕೆಎಸ್‌ಸಿಸಿ ನಿಯೋಗವನ್ನು ಭೇಟಿ ಮಾಡಲು ನಿರಾಕರಿಸಿದರು..

ಕಿಸಾನ್ ಸಂಸದ್ ನವಂಬರ್ 26, 2017ರಿಂದ ಜನವರಿ 26, 2018ರ ವರೆಗೆ ಎರಡು ತಿಂಗಳುಗಳ ಕಾಲ ಈ ಎರಡು ಮಸೂದೆಗಳ ಮೇಲೆ ಪ್ರಚಾರಾಂದೋಲನ ನಡೆಸಲು ನಿರ್ಧರಿಸಿತು. ನವಂಬರ್ ಅಂತ್ಯದಲ್ಲಿ ಗುಜರಾತಿನಲ್ಲಿ ಈ ಎರಡು ಮಸೂದೆಗಳ ಮೇಲೆ ಮೊದಲ ಸಾರ್ವಜನಿಕ ವಿಚಾರಣೆ(ಜನ್ ಸುನ್ವಾಯಿ) ನಡೆಯುತ್ತದೆ.

ಈ ಪ್ರಚಾರಾಂದೋಲನದ ನಂತರ ಇನ್ನಷ್ಟು ಸಂಯೋಜಿತ ರೀತಿಯಲ್ಲಿ ಸಂಘಟನೆಗಳನ್ನು ಒಳತಂದು ರಾಜ್ಯಮಟ್ಟದ ಸಮಾವೇಶಗಳನ್ನು ನಡೆಸಿ ತೀವ್ರ ತರವಾದ ರಾಷ್ಟ್ರವ್ಯಾಪಿ ಕಾರ್ಯಾಚರಣೆ ನಡೆಯಲಿದೆ. ಎಲ್ಲ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ಲಭ್ಯವಾಗುವಂತೆ ಮತ್ತು ಬ್ಯಾಂಕುಗಳು ಮತ್ತು ಖಾಸಗಿ ಲೇವಾದೇವಿಗಾರರು ರೈತರಿಗೆ ಕಿರುಕುಳ ಕೊಡದಂತೆ ತಡೆಯಲು ಸ್ಥಳೀಯ ಮಟ್ಟಗಳಲ್ಲಿ ಒಟ್ಟಾಗಿ ಪ್ರತಿರೋಧವನ್ನು ಸಂಘಟಿಸಲಾಗುವುದು,

ಅತ್ಯಂತ ಉತ್ಸಾಹಪೂರಿತ ವಾತಾವರಣದಲ್ಲಿ ರಾಷ್ಟ್ರಗೀತೆ ಹಾಡುವುದರೊಂದಿಗೆ ಕಿಸಾನ್ ಮುಕ್ತಿ ಸಂಸದ್ ಮುಕ್ತಾಯವಾಯಿತು. ಸಂವೇದನಾಶೂನ್ಯ ಬಿಜೆಪಿ ಸರಕಾರದ ವಿರುದ್ಧ ಹೋರಾಟವನ್ನು ಜಯ ಗಳಿಸುವ ವರೆಗೂ ಮುಂದುವರೆಸುವ ದೃಢ ನಿರ್ಧಾರದೊಂದಿಗೆ ರೈತರು ತಮ್ಮ ಊರುಗಳಿಗೆ ಹಿಂದಿರುಗಿದರು. ●



ಗುಜರಾತ್ ಚುನಾವಣಾ ಪರ್ವವೂ, ಮಾತು-ಮೌನಗಳ ಭರಾಟೆಯೂ



ಕಳೆದ ಕೆಲವು ದಿನಗಳಲ್ಲಿ ತ್ವರಿತವಾದ ಬದಲಾವಣೆಗಳಾಗುತ್ತಿವೆ. ಹಿಮಾಚಲ ಪ್ರದೇಶ ಮತ್ತು ಗುಜರಾತ್ ಚುನಾವಣೆಗಳ ಮತಗಣನೆಯ ದಿನಾಂಕವನ್ನು ಚುನಾವಣಾ ಆಯುಕ್ತರು ಪ್ರಕಟಿಸಿದರು. ಆದರೆ ಗುಜರಾತ್ ಚುನಾವಣಾ ದಿನಾಂಕಗಳನ್ನು ಪ್ರಕಟಿಸಲಿಲ್ಲ ಎಂಬುದು ದೊಡ್ಡ ಸುದ್ದಿಯಾಯ್ತು. ಅದರ ಬೆನ್ನಹಿಂದೆಯೇ ಪ್ರಧಾನ ಮಂತ್ರಿಗಳು ಗುಜರಾತಿಗೆ ಹೋಗಿ ಜಿಎಸ್‌ಟಿ ನಿಯಮಗಳನ್ನು ಸಡಿಲಿಸಿ ಸಣ್ಣ ವ್ಯಾಪಾರಿಗಳಿಗೆ ಮುಮುಗಡ ದೀಪಾವಳಿ ಬಕ್ಷೀಸು ಕೊಟ್ಟಿರುವುದಾಗಿ ಸಾರಿದರು.

ಇಂತಹ ಹಲವು ಬಕ್ಷೀಸುಗಳ ನಂತರ ಕೊನೆಗೂ ಚುನಾವಣಾ ದಿನಾಂಕಗಳನ್ನು ಪ್ರಕಟಿಸಲಾಯಿತು. ಸ್ವಲ್ಪವೇ ದಿನಗಳಲ್ಲಿ ಜಿಎಸ್‌ಟಿ ಮಂಡಳಿ ಸಭೆ ನಡೆದು 200ಕ್ಕೂ ಹೆಚ್ಚು ಸರಕುಗಳ ಮೇಲೆ ಜಿಎಸ್‌ಟ್ ದರಗಳನ್ನು ಇಳಿಸುವ ಪ್ರಕಟಣೆ ಬಂತು. ನೋಡಿ, ನಮ್ಮ ಅಚ್ಚೇದಿನ್ ಸರಕಾರದವರು ಈಗ ಅಚ್ಚೇದಿನ್‌ಗಳ ಬಗ್ಗೆ ಮಾತಾಡದಿದ್ದರೂ ಸರಕಾರ ಜನಸಾಮಾನ್ಯರ ಸಮಸ್ಯೆಗಳಿಗೆ ಹೇಗೆ ಸ್ಪಂದಿಸುತ್ತದೆ ಎನ್ನಲಾಯಿತು.

ಆದರೆ ನಿಜವಾಗಿಯೂ ಇದರಿಂದ ಜನಸಾಮಾನ್ಯರಿಗೆ ಪ್ರಯೋಜನವಾಗಿದೆಯೇ? ಇಲ್ಲ ಎನ್ನುತ್ತಾರೆ ಪ್ರಶಾಂತ್ ಪೆರುಮಾಳ್(ದಿ ಹಿಂದು, ನವಂಬರ್ 19) ಬಹಳಷ್ಟು ವ್ಯಾಪಾರಿಗಳು ದರ ಇಳಿಕೆಯ ಪ್ರಯೋಜನವನ್ನು ಬಳಕೆದಾರರಿಗೆ ವರ್ಗಾಯಿಸಿಲ್ಲ. ಬದಲಿಗೆ 'ಅಡ್ಜಸ್ಟ್' ಮಾಡಿಕೊಂಡಿದ್ದಾರೆ. ಉದಾಹರಣೆಗೆ ಆಹಾರ ದರಗಳನ್ನು 18% ದಿಂದ 5% ಕ್ಕೆ ಇಳಿಸಲಾಯಿತು. ಆದರೆ ಮೆಕ್ಡೊನಾಲ್ಡ್, ಸ್ಟಾರ್‌ಬಕ್ಸ್ ಮುಂತಾದ ದೊಡ್ಡಕಂಪನಿಗಳು ದರ ಇಳಿಸಲಿಲ್ಲ, ದರಗಳೊಳಗೇ ಮೂಲದರವನ್ನು ಹೆಚ್ಚಿಸಿ ಕಡಿಮೆಯಾದ ತೆರಿಗೆಗೆ ಹೊಂದಿಸಿಕೊಂಡವು.

ತೆರಿಗೆ ಇಳಿಸುವುದು ಬಳಕೆದಾರರಿಗೆ ಪ್ರಯೋಜನವಾಗಲಿ ಎನ್ನುವುದಕ್ಕಿಂತ ಹೂಡಿಕೆದಾರರಿಗೆ ಉತ್ತೇಜನೆ ಸಿಗುತ್ತದೆ ಎಂಬುದಕ್ಕಾಗಿ ಎಂಬ ತರ್ಕದ ಪ್ರಕಾರ ಇದರಲ್ಲಿ ಆಶ್ಚರ್ಯವೇನಿಲ್ಲ ಎನ್ನುತ್ತಾರೆ ಕೆಲವು ಅರ್ಥಿಕ ತಜ್ಞರು. ನಮ್ಮ ಅಚ್ಚೇದಿನ್ ಸರಕಾರ 'ವ್ಯಾಪಾರ ಸುಗಮತೆ'ಯಲ್ಲಿ ಈ ವರ್ಷ 'ನೆಗೆತ' ಸಾಧಿಸಿರುವುದು ಇದೇ ತರ್ಕದ ನೆರವಿನಿಂದ ತಾನೇ?

ಆದರೂ ಈ ನಡುವೆ ತೆರಿಗೆ ಇಳಿಕೆಯ ಪ್ರಯೋಜನ ಬಳಕೆದಾರರಿಗೆ ಸಿಗುವಂತೆ ಮಾಡಲು 'ರಾಷ್ಟ್ರೀಯ ಲಾಭಕೋರತನ-ವಿರೋಧಿ ಪ್ರಾಧಿಕಾರ(ಎನ್‌ಎಎ) ಪ್ರಕಟಿಸಲಾಗಿದೆ. ಆದರೆ ಇದು ಉದ್ಯಮಿಗಳ ಉತ್ಸಾಹವನ್ನು ಕೊಲ್ಲುವ ಪರಿಣಾಮವನ್ನೂ ಬೀರಬಹುದು ಎಂದು ಅದೇ ಅರ್ಥಿಕ ತಜ್ಞರು ಎಚ್ಚರಿಸುತ್ತಿದ್ದಾರೆ. 'ವ್ಯಾಪಾರ ಸುಗಮತೆ'ಯಲ್ಲಿ ಇನ್ನಷ್ಟು 'ನೆಗೆತ'ಕ್ಕೆ ಈ ತರ್ಕಕ್ಕೂ ಕಿವಿಗೊಡಬೇಕಲ್ಲವೇ? ಅದೇನಂತೆ, ಸರಕಾರ ಬಳಕೆದಾರರ ಬಗ್ಗೆ ಯೋಚಿಸುತ್ತದೆ ಎಂಬ 'ಸಂದೇಶ', ಅದರಲ್ಲೂ ಗುಜರಾತಿನಲ್ಲಿರುವವರಿಗೆ ರವಾನೆಯಾಗಿದೆ ತಾನೇ?

ಈ ನಡುವೆ ಪ್ರಧಾನಿಗಳ ಜನಪ್ರಿಯತೆ ಹೆಚ್ಚಿದೆ ಎಂದು ಅಮೆರಿಕಾದ ಪೆವ್ ರಿಸರ್ಚ್ ಸೆಂಟರ್ ಪ್ರಕಟಿಸಿತು. ಅದರ ಬಗ್ಗೆ ಸರಕಾರದ ಮಂದಿಯ ಪ್ರಶಂಸೆಗಳು ಶುರುವಾದವು. ಇದು ಸಣ್ಣ ವ್ಯಾಪಾರಿಗಳ ಮೇಲೆ ಜಿಎಸ್‌ಟಿ ಆಘಾತಕ್ಕಿಂತ ಮೊದಲು ಎಂದು ಆ ರಿಸರ್ಚ್ ಸೆಂಟರೇನೋ ಸ್ಪಷ್ಟೀಕರಣ ಕೊಟ್ಟಿದೆ. ಆದರೆ ಜನಪ್ರಿಯತೆಯ ಸಂದೇಶ ರವಾನೆಯಾಗಿದೆ ತಾನೇ,ಇನ್ನೇನು? ನಂತರ ಮೂಡೀಸ್ ರೇಟಿಂಗ್ ಬಂದಿದೆ. ಈಗ ಪ್ರಧಾನಿಗಳೂ ಪ್ರಶಂಸಾ ಪ್ರವಾಹದಲ್ಲಿ ಮನದುಂಬಿ ಭಾಗವಹಿಸಿದರು. ಇವೆರಡೂ ವಿದೇಶಿ ಸರ್ಟಿಫಿಕೇಟುಗಳು ಎಂಬುದು 'ದೇಶಭಕ್ತಿ'ಗೆ ಅಡ್ಡಿಯಾಗಬೇಕಿಲ್ಲವಲ್ಲ!



ಚುನಾವಣೆಗೆ ಹೋಗುತ್ತಿರುವ ಗುಜರಾತಿಗೆ ಒಂದು ಜಾಗತಿಕ ಮಾದರಿ ಸಂಹಿತೆ ಬೇಕಾಗಿದೆ?!

ವ್ಯಂಗ್ಯಚಿತ್ರ: ಉನ್ನಿ, ಇಂಡಿಯನ್ ಎಕ್ಸ್‌ಪ್ರೆಸ್

ಇದರ ಬೆನ್ನ ಹಿಂದೆ ಈಗ ಪದ್ಮಾವತಿ'ಯ ಗದ್ದಲ ಎದ್ದಿದೆ. ಬಿಜೆಪಿ ಮುಖಂಡರು ತಲೆಕಡಿಯುವ ಮಾತಾಡುತ್ತಿದ್ದಾರೆ. ಆದರೆ ಪ್ರಧಾನಿಗಳು ಮೂಡಿಯ ರೇಟಿಂಗ್ ಸಂತಸ ಹಂಚಿಕೊಂಡ ನಂತರ ಮತ್ತೆ ಮೌನಕ್ಕೆ ಸಂದಿದ್ದಾರೆ. ಆದರೆ ರಾಜಸ್ಥಾನ, ಮಧ್ಯಪ್ರದೇಶ, ಉತ್ತರಪ್ರದೇಶದ ಮುಖ್ಯಮಂತ್ರಿಗಳಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿ ಗುಜರಾತ್ ಮುಖ್ಯಮಂತ್ರಿಗಳು ಅದರ ಬಿಡುಗಡೆಗೆ ನಿಷೇಧ ಪ್ರಕಟಿಸಿ ಕೃತಾರ್ಥರಾಗಿದ್ದಾರೆ.

ಆದರೆ ಇವು ಯಾವವೂ 'ವೋಟ್ ಬ್ಯಾಂಕ್' ರಾಜಕಾರಣ ಅಲ್ಲ ಎಂದು ಅಚ್ಛೇದಿನ್ ಭಕ್ತರು ಪಟ್ಟು ಹಿಡಿದು ಹೇಳುತ್ತಿದ್ದಾರೆ.

ಸಂಸತ್ತಿನ ಚಳಿಗಾಲ ಅಧಿವೇಶನ ಇನ್ನೂ ಇಲ್ಲ -ಆದರೆ ಇನ್ನೊಂದು ಸುಗ್ರೀವಾಜ್ಞೆ ಬರುತ್ತಿದೆ

ಈ ವೇಳೆಗೆ ಸಂಸತ್ತಿನ ಚಳಿಗಾಲದ ಅಧಿವೇಶನ ಆರಂಭವಾಗಬೇಕಿತ್ತು. ಅದರ ಬಗ್ಗೆ ಯಾವ ಪ್ರಸ್ತಾಪವೂ ಇಲ್ಲ. ಆದರೆ ಸುಗ್ರೀವಾಜ್ಞೆಗೇನೂ ಅಡ್ಡಿಯಿಲ್ಲ. ಸುಗ್ರೀವಾಜ್ಞೆಗಳ ರಾಜ್ಯಭಾರದಲ್ಲಿ ಇನ್ನೊಂದು ಸುಗ್ರೀವಾಜ್ಞೆ ಬರುತ್ತಿದೆ. ದಿವಾಳಿ ಮತ್ತು ಪಾಪರ್ ಕಾಯ್ದೆಗೆ ತಿದ್ದುಪಡಿ ಮಾಡಲು ಸುಗ್ರೀವಾಜ್ಞೆ ಹೊರಡಿಸಲಾಗುವುದು ಎಂದು ವರದಿಯಾಗಿದೆ.

ನವಂಬರ್ ವೇಳೆಗೆ ಸಂಸತ್ತಿನ ಚಳಿಗಾಲದ ಅಧಿವೇಶನ ನಡೆಸುವುದು ಕಳೆದ ಐದು ದಶಕಗಳಿಂದ ನಡೆದು ಬಂದಿರುವ ವಾಡಿಕೆ. ಆದರೆ ಈ ಸರಕಾರ ಆ ಅಧಿವೇಶನವನ್ನು ಬದಿಗೊತ್ತಿರುವಂತೆ ಕಾಣುತ್ತದೆ. ಅಧಿವೇಶನದಲ್ಲಿ ನೋಟುರದ್ಧತಿ ಮತ್ತು ಜಿಎಸ್‌ಟಿ ಅವಾಂತರಗಳ ಚರ್ಚೆಗಳು ಗುಜರಾತ್ ಚುನಾವಣೆ ಮೇಲೆ ಪ್ರಭಾವ ಬೀರಬಹುದೆಂಬ ಭಯದಿಂದ ಈ ಪ್ರಜಾಪ್ರಭುತ್ವ-ವಿರೋಧಿ ನಡೆ ಎಂದು ಪ್ರತಿಪಕ್ಷಗಳು ಟೀಕಿಸುತ್ತಿವೆ.

ಅದರ ಪರಿವೆಯಿಲ್ಲದೆ **ಈಗ ಮತ್ತೆ ಸುಗ್ರೀವಾಜ್ಞೆಯ ರಾಜ್ಯಭಾರಕ್ಕೆ ಇಳಿದಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೋ ಬಲವಾಗಿ ಖಂಡಿಸಿದೆ. ಸಂಸತ್ತು ಈ ತಿದ್ದುಡಿಯನ್ನು ಆಮೂಲಾಗ್ರವಾಗಿ ಚರ್ಚಿಸಿದ ಮೇಲೆಯೇ ಇದನ್ನು ತರಬೇಕು ಎಂದು ಆಗ್ರಹಿಸಿದೆ.**

ಮತ್ತೆ ಅಚ್ಛೇದಿನ್ ಪಕ್ಷದ ಅಧ್ಯಕ್ಷರ ಬೆನ್ನೇರಿದೆ ಸೊಹ್ರಬುದ್ಧೀನ್ ಎನ್‌ಕೌಂಟರ್ ಬೇತಾಳ

ಸೋಹ್ರಬುದ್ದಿನ್ ಶೇಖ್ ಎಂಬಾತನ ಎನ್‌ಕೌಂಟರ್ ವಿಚಾರಣೆ ಮಾಡುತ್ತಿದ್ದ ಸಿಬಿಐ ನ್ಯಾಯಾಲಯದ ನ್ಯಾಯಮೂರ್ತಿ ಹೆಚ್.ಪಿ ಲೋಯಾ ನವಂಬರ್ 30-ಡಿಸೆಂಬರ್ 1, 2014 ರಲ್ಲಿ ಹೃದಯಾಘಾತದಿಮದ ನಿಧನರಾದರು ಎಮದು ವರದಿಯಾಗಿತ್ತು. ಆದರೆ ಅದು ಸಹಜ ಸಾವು ಅಲ್ಲ ಎಂಬ ಸಂದೇಹ 'ಕಾರವಾನ್' ಪತ್ರಿಕೆಯಲ್ಲಿ ಪ್ರಕಟವಾದ ಎರಡು ವರದಿಗಳಿಮದ ಎದ್ದಿದೆ.

2005ರಲ್ಲಿ ಈಗಿನ ಪ್ರಧಾನ ಮಂತ್ರಿಗಳು ಗುಜರಾತಿನ ಮುಖ್ಯಮಂತ್ರಿಗಳಾಗಿದ್ದಾಗ ಮತ್ತು ಈಗಿನ ಆಳುವ ಪಕ್ಷದ ಅಧ್ಯಕ್ಷರು ಅಲ್ಲಿನ ಗೃಹ ಇಲಾಖೆಯನ್ನು ನಿರ್ವಹಿಸುತ್ತಿದ್ದಾಗ ನಡೆದ ಸೋಹ್ರಬುದಿನ್ ಹುಸಿ ಎನ್‌ಕೌಂಟರ್‌ನ ಕೇಸ್ ನ ನ್ಯಾಯಪೂರ್ಣ ವಿಚಾರಣೆ ಆಗಲಿಕ್ಕಿಲ್ಲ ಎಂದು ಅದರ ವಿಚಾರಣೆಯನ್ನು ಗುಜರಾತಿನಿಂದ ಮಹಾರಾಷ್ಟ್ರಕ್ಕೆ ವರ್ಗಾಯಿಸಲಾಗಿತ್ತು. ಇದರ ವಿಚಾರಣೆ ಮಾಡುತ್ತಿದ್ದ ನ್ಯಾಯಾಧೀಶರನ್ನು ಮಧ್ಯದಲ್ಲಿ ಬದಲಿಸಬಾರದು ಎಂಬ ಆದೇಶವಿದ್ದರೂ (ಈ ನಡುವೆ ಗುಜರಾತಿನ ಮುಖ್ಯಮಂತ್ರಿಗಳು ಕೇಂದ್ರದಲ್ಲಿ ಪ್ರಧಾನ ಮಂತ್ರಿಗಳಾದ ಬೆನ್ನಲ್ಲೇ) ಅವರನ್ನು ವರ್ಗ ಮಾಡಲಾಯಿತು, ಅಮಿತ್‌ಷಾ ನಿಗದಿತ ದಿನಾಂಕದಲ್ಲಿ ವಿಚಾರಣೆಗೆ ಹಾಜರಾಗಲೇ ಬೇಕು ಎಂದದ್ದಕ್ಕೆ ಅವರ ವರ್ಗಾವಣೆಯಾಗಿತ್ತು ಎನ್ನಲಾಗಿದೆ, ಅವರ ಜಾಗದಲ್ಲಿ ಬಂದ ನ್ಯಾಯಮೂರ್ತಿ ಲೋಯ ಕೂಡ ಇದೇ ಟಿಪ್ಪಣಿ ಮಾಡಬೇಕಾಯ್ತು. ಈ ನಡುವೆ ಅವರ ಸಾವು ಸಂಭವಿಸಿ ನಂತರ ಬಂದ ನ್ಯಾಯಾಧೀಶರು ಈ ಕೇಸಿನಲ್ಲಿ ಅಮಿತ್‌ಷಾ ಅವರಿಗೆ 'ಕ್ಲೀನ್ ಚಿಟ್' ಕೊಟ್ಟರು ಎಂಬುದನ್ನು ಇಲ್ಲಿ ನೆನಪಿಸಿ 'ಕೊಳ್ಳಬಹುದು. ಈಗ ಅವರ ಸಾವು ಸಹಜವಾಗಿರಲಿಲ್ಲ, ಮರಣೋತ್ತರ ಪರೀಕ್ಷೆಯಲ್ಲಿ ಮೋಸವಾಗಿದೆ ಎಂಬ ಸಂದೇಹದೊಡನೆಯೇ ಅವರಿಗೆ 'ಸರಿಯಾದ'(ಅಂದರೆ ಕ್ಲೀನ್‌ಚಿಟ್‌ನ?) ತೀರ್ಪು ಕೊಡಲು, ಅದೂ ಮುಂಬೈ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಮೂಲಕವೇ 100 ಕೋಟಿ ರೂ.ಗಳ ಲಂಚ ಕೊಡುವ ಮಾತು ಬಂದಿತ್ತು ಎಂದೂ ಹೇಳಲಾಗುತ್ತಿದೆ.

"ಇವೆಲ್ಲ ಕೊಲೆ, ಲಂಚ, ಕಾನೂನಿನ ಬುಡಮೇಲು, ಮತ್ತು ನಮ್ಮ ಸಂಸದೀಯ ಪ್ರಜಾಪ್ರಭುತ್ವ ಸಂಸ್ಥೆಗಳ ದುರುಪಯೋಗ ಅತ್ಯುನ್ನತ ಸ್ಥಾನಗಳಲ್ಲಿ ನಡೆಯುತ್ತಿದೆಯೇ ಎಂಬ ಕಳವಳಕಾರಿ ಪ್ರಶ್ನೆಗಳನ್ನು ಎತ್ತಿವೆ. ಇದನ್ನು ಗಂಭೀರವಾಗಿ ತನಿಖೆಮಾಡಬೇಕಾಗಿದೆ" ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೋ ತಕ್ಷಣವೇ ಈ ಇಡೀ ವ್ಯವಹಾರದ ಮೇಲೆ ಉನ್ನತ ಮಟ್ಟದ ನ್ಯಾಯಾಂಗ ತನಿಖೆಯನ್ನು ನಡೆಸಬೇಕು ಎಂದು ಆಗ್ರಹಿಸಿದೆ.

ಅದರೆ 'ನಯಾಭಾರತ್ ನಿರ್ಮಾಣದಲ್ಲಿ ಇಂತಹ ಕಳವಳಕಾರಿ ಪ್ರಶ್ನೆಗಳಿಗೆ ಉತ್ತರ ಪಡೆಯುವ ಅಜೆಂಡಾ ಇದೆಯೇ? ಕಾದು ನೋಡಬೇಕು.

ಬಹುಶಃ ಈ ಸಂದೇಶದಿಂದಲೇ ಕೆಲವು ಪ್ರತಿಷ್ಠಿತ ಸಮಾಜಿಕ ಕಾರ್ಯಕರ್ತರು ಮತ್ತು ಅಡ್ವೊಕೇಟ್‌ಗಳು ಲೊಯ ಅವರ ಕುಟುಂಬಕ್ಕೆ ಮತ್ತು ಈ ಬಗ್ಗೆ ತನಿಖಾ ವರದಿ ತಯಾರಿಸಿರುವ ಪತ್ರಕರ್ತ ನಿರಂಜನ ಟಕ್ಲೆ ಅವರಿಗೆ ಭದ್ರತೆ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

ರಫೆಲ್ ಯುದ್ಧವಿಮಾನಗಳ ಖರೀದಿ- ತಂತ್ರಜ್ಞಾನ ವರ್ಗಾವಣೆ ಕೈಬಿಟ್ಟಿದ್ದೇಕೆ?

ಪ್ರಧಾನ ಮಂತ್ರಿಗಳ ಇನ್ನೊಂದು 'ದಿಟ್ಟ' ನಿರ್ಧಾರ ಈಗ ಹಲವು ಪ್ರಶ್ನೆಗಳನ್ನೆಬ್ಬಿಸಿದೆ, ಅದರಲ್ಲೂ, 'ಅವರ ಪ್ರೀತಿಯ 'ಮೇಕ್ ಇನ್ ಇಂಡಿ-ಯ' ಘೋಷಣೆಯ ಪ್ರಾಮಾಣಿಕತೆಯ ಪ್ರಶ್ನೆಯನ್ನು.

ಈ ಬಗ್ಗೆ ಪ್ರಶ್ನೆಗಳು ಎದ್ದಿರುವುದರಿಂದ ಕುಪಿತರಾಗಿರುವ ಈಗಿನ ರಕ್ಷಣಾ ಮಂತ್ರಿಗಳು ಇಂತಹ ಪ್ರಶ್ನೆಗಳನ್ನೆತ್ತುವುದೇ ನಮ್ಮ ಸಶಸ್ತ್ರ ಪಡೆಗಳಿಗೆ ಮಾಡುವ ಅಪಮಾನ ಎಂಬಂತೆ ಮಾತಾಡಿದ್ದಾರೆ. ಆದರೆ ಅವರ ಪತ್ರಿಕಾ ಸಮ್ಮೇಳನ ಪ್ರಶ್ನೆಗಳಿಗೆ ಉತ್ತರ ನೀಡುವ ಬದಲು ಇನ್ನಷ್ಟು ಪ್ರಶ್ನೆಗಳನ್ನೇ ಎಬ್ಬಿಸಿದೆ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯಚೂರಿ ಹೇಳಿದ್ದಾರೆ.

ಯುಪಿಎ-2 ಸರಕಾರ ಫ್ರಾನ್ಸಿನ ಡಸಾಲ್ಟ್ ಕಂಪನಿಯೊಂದಿಗೆ 126 ರಫೆಲ್ ಯುದ್ಧ ವಿಮಾನಗಳನ್ನು ಖರೀದಿಸುವ ಒಪ್ಪಂದವನ್ನು ಬೆಲೆಗಳ ಬಗ್ಗೆ ಸಾಕಷ್ಟು ಜಗ್ಗಾಟದ ನಂತರ 2012ರಲ್ಲಿ ಮಾಡಿಕೊಂಡಿತ್ತು . ಆದರೆ ಬಿಜೆಪಿ ಸರಕಾರ ಬಂದ ಮೇಲೆ ಅದನ್ನು ರದ್ದು ಮಾಡಿ 36 ಸಿದ್ಧ ವಿಮಾನಗಳನ್ನು ಖರೀದಿಸುವ ಎರಡೂ ದೇಶಗಳ ಸರಕಾರಗಳ ನಡುವಿನ ಒಪ್ಪಂದವಾಗಿ ತಮ್ಮ ಫ್ರಾನ್ಸ್ ಭೇಟಿಯ ವೇಳೆಗೆ ಬದಲಿಸಿದರು. ಆಗ ಅವರೊಂದಿಗೆ ಆಗಿನ ರಕ್ಷಣಾ ಮಂತ್ರಿಗಳಿರಲಿಲ್ಲ, ಆದರೆ ಅಂಬಾನಿ ಇದ್ದರು, ಇದೇ ಹಲವು ಪ್ರಶ್ನೆಗಳನ್ನು ಎಬ್ಬಿಸಿದೆ. ಏಕೆಂದರೆ ಯುಪಿಎ-2 ಒಪ್ಪಂದದಲ್ಲಿ ತಕ್ಷಣಕ್ಕೆ ಕೆಲವು ಸಿದ್ಧವಿಮಾನಗಳನ್ನು ಖರೀದಿಸಿದ ನಂತರ ಅವನ್ನು ಇಲ್ಲಿಯೇ ತಯಾರಿಸುವ ಅಂಶವಿತ್ತು. ಇದರಲ್ಲಿ ಸಾರ್ವಜನಿಕ ವಲಯದ ಹೆಚ್‌ಎಎಲ್ ಪಾತ್ರ ಇತ್ತು. ಈಗ ಹೆಚ್‌ಎಎಲ್ ಪಾತ್ರದ ಪ್ರಶ್ನೆಯೇಇಲ್ಲ, ಆದರೆ ಅಂಬಾನಿಯ ಈ ರಂಗದಲ್ಲಿ ಅನುಭವವಿಲ್ಲದ ಕಂಪನಿಯ ಪಾತ್ರ ಇದೆ ಎನ್ನಲಾಗಿದೆ.

ಆದರೆ ಮೋದಿಯವರ 'ದಿಟ್ಟ' ಒಪ್ಪಂದದಲ್ಲಿ ತಂತ್ರಜ್ಞಾನ ವರ್ಗಾವಣೆಯ ಪ್ರಶ್ನೆ ಇಲ್ಲ ಎಂದು ಈಗಷ್ಟೇ ರಕ್ಷಣಾ ಮಂತ್ರಿಗಳು ಒಪ್ಪಿಕೊಂಡಿದ್ದಾರೆ.

ಮೋದಿಯವರ 'ದಿಟ್ಟ' ನಿರ್ಧಾರದಿಂದಾಗಿ ಈ ವಿಮಾನ ನಮಗೆ ಅಗ್ಗದಲ್ಲಿ ಲಭ್ಯವಾಗುತ್ತಿದೆ ಎಂದು ಸರಕಾರ ಹೇಳಿಕೊಂಡಿದೆ. ಆದರೆ ಇದಕ್ಕೆ ಬೆಲೆಗಳ ಹೋಲಿಕೆಯನ್ನು ತಿಳಿಸಿಲ್ಲ. ವಾಸ್ತವವಾಗಿ ದೇಶ ಈಗ ಈಯುದ್ಧವಿಮಾನಗಳಿಗೆ ಹೆಚ್ಚಿನ ಬೆಲೆ ತೆರುತ್ತಿದೆ ಎಂದು ಹೇಳಲಾಗುತ್ತಿದೆ.

ಪ್ರಧಾನ ಮಂತ್ರಿಗಳು 'ಮೇಕ್‌ಇನ್‌ಇಂಡಿಯಾ' ಬಗ್ಗೆ ಜಂಭ ಕೊಚ್ಚಿಕೊಳ್ಳುತ್ತಾರೆ, ಆದರೆ ಫ್ರಾನ್ಸ್‌ನೊಂದಿಗೆ ಮಾಡಿಕೊಂಡ ಒಪ್ಪಂದದಲ್ಲಿ ಅದು ಇಲ್ಲ ಏಕೆ, ತಂತ್ರಜ್ಞಾನ ವರ್ಗಾವಣೆ ಅಂಶ ಏಕಿಲ್ಲ ಎಂದು ಯಚುರಿಯವರು ಪ್ರಶ್ನಿಸಿದ್ದಾರೆ.

ರಕ್ಷಣಾ ಖರೀದಿಯ ನಿಯಮಗಳ ಪ್ರಕಾರ ಇಂತಹ ಖರೀದಿಗಳಿಗೆ ಭದ್ರತೆ ಕುರಿತ ಸಂಪುಟ ಸಮಿತಿ(ಸಿಸಿಎಸ್) ಮಂಜೂರಾತಿ ಬೇಕು. ಎಪ್ರಿಲ್2015 ರಲ್ಲಿ ಪ್ಯಾರಿಸ್‌ನಲ್ಲಿ ಇಂತಹ ನಿರ್ಧಾರ ಪ್ರಕಟಿಸುವ ಮೊದಲು ಸಿಸಿಎಸ್ ಸಭೆ ನಡೆದಿತ್ತೇ ಎಂದು ಈಗಿನ ರಕ್ಷಣಾ ಮಂತ್ರಿಗಳು ಸ್ಪಷ್ಟಪಡಿಸಿಲ್ಲ. ಅವರು ಕೊಟ್ಟಿರುವ ಉತ್ತರಗಳ ಪ್ರಕಾರ ಸಿಸಿಎಸ್ ಮಂಜೂರಾತಿಯ ನಂತರವೇ ಸೆಪ್ಟಂಬರ್ 2016ರಲ್ಲಿ ಈ ಖರಿದಿ ಒಪ್ಪಂದಕ್ಕೆ ಸಹಿ ಹಾಕಲಾಯಿತು. ಅಂದರೆ ಎಪ್ರಿಲ್ 2015ರಲ್ಲಿ ಪ್ರಧಾನಿಗಳ ಪ್ರಕಟಣೆಯ ವೇಳೆಗೆ ಆಗಿರಲಿಲ್ಲ ಎಂದು ಅರ್ಥ ಮಾಡಿಕೊಳ್ಳಬೇಕೇ? ಅದರೂ ಈ 'ದಿಟ್ಟ' ಖರೀದಿಯಲ್ಲಿ ನಿಯಮಗಳ ಉಲ್ಲಂಘನೆ ಆಗಿಲ್ಲ ಎಂದು ನಂಬಬೇಕೇ? ಇತ್ಯಾದಿ ಇನ್ನೂ ಹಲವು ಪ್ರಶ್ನೆಗಳು 'ಕಾಂಗ್ರೆಸ್‌ಮುಕ್ತ' ಭಾರತದ ಮಾತಾಡುತ್ತಿರುವ 'ಸರಕಾರದ ಅಡಿಯಲ್ಲಿ ಕಾಂಗ್ರೆಸ್‌ಗೆ ಮುಳುವಾದ ಬೋಫೋರ್ಸ್, ಹೆಲಿಕಾಪ್ಟರ್ ಖರೀದಿ ವ್ಯವಹಾರಗಳ ವಾಸನೆ ಇಲ್ಲ ಎಂದು ಹೇಳಲು ಸಾಧ್ಯವೇ? ಈ ಪ್ರಶ್ನೆಗೆ ಈಗಿನ ರಕ್ಷಣಾ ಮಂತ್ರಿಗಳ ಭಾವಾವೇಶದ ಮಾತುಗಳಲ್ಲಿ ಉತ್ತರ ಸಿಕ್ಕಿಲ್ಲ.

ತರಕಾರಿ ಬೆಲೆಗಳ ನಾಗಾಲೋಟ-ಮೂಡಿ ಗುಂಗಿನಲ್ಲೇ ಜನರನ್ನು ಮರೆತಿರುವ ಅಚ್ಛೇ ದಿನ್ ಸರಕಾರ

ಈರುಳ್ಳಿ, ಟೊಮ್ಯಾಟೊ, ಬದನೆ, ಎಲೆಕೋಸು ಇತ್ಯಾದಿ ತರಕಾರಿಗಳ ಬೆಲೆಗಳು ಈ ವರ್ಷದ ಜನವರಿಯಿಂದ 50% ದಿಂದ 100% ದ ವರೆಗೆ ಏರಿವೆ ಎಂದು ಸರಕಾರವೇ ಕಲೆ ಹಾಕುವ ಲೇಬರ್ ಬ್ಯೂರೊ ವರದಿಗಳು ಹೇಳುತ್ತಿವೆ. ಕಳೆದ ಸೆಪ್ಟಂಬರ್‌ನಲ್ಲಿ ಇದಕ್ಕೆ ಹಣಕಾಸು ಮಂತ್ರಿಗಳು ಮಳೆಗಾಲದಲ್ಲಿ ತರಕಾರಿ ಬೆಲೆಗಳು ಏರುವುದು ಸಹಜ ಎಂದಿದ್ದರು. ಆದರೆ ಈಗ ಮತ್ತೆ ಎರಡು ತಿಂಗಳಾಗಿವೆ, ಕೆಲವು ತರಕಾರಿಗಳ ಬೆಲೆಯೇರಿಕೆ ಎಷ್ಟಾಗಿದೆಯೆಂದರೆ ಬೇಡಿಕೆ-ಪೂರೈಕೆಯ ಸಬೂಬು ಕೊಡಲಾಗುತ್ತಿಲ್ಲ. ಉದಾಹರಣೆಗೆ, ಟೊಮ್ಯಾಟೊ ಬೆಲೆಗಳಲ್ಲಿ 157% ಹೆಚ್ಚಳ ಆಗಿದೆ, ಹೂಕೋಸಿನ ಬೆಲೆಗಳಲ್ಲಿ 108% ಹೆಚ್ಚಳವಾಗಿದೆ. ಈರುಳ್ಳಿ ಬೆಲೆಗಳಲ್ಲಿ 94% ಹೆಚ್ಚಳವಾಗಿದೆ.

ಒಟ್ಟಾರೆಯಾಗಿ ಹಣ್ಣು ಮತ್ತು ತರಕಾರಿಗಳ ಬೆಲೆಗಳಲ್ಲಿ 37% ಹೆಚ್ಚಳವಾಗಿದೆ. ಉದ್ಯೋಗಹೀನತೆಯೊಂದಿಗೆ ಈ ಬೆಲೆಯೇರಿಕೆಯ ಏಟು ಬಹಳಷ್ಟು ಕುಟುಂಬಗಳಿಗೆ ಅಸಹನೀಯವಾಗುತ್ತಿದೆ.

ಮೂಡಿ ರೇಟಿಂಗ್ ನಂತರ ಆತ್ಮಾವಲೋಕನ ಮಾಡಿ ಎಂದು ಪ್ರತಿಪಕ್ಷಗಳಿಗೆ ಸಲಹೆ ನೀಡಿರುವ ಹಣಕಾಸು ಮಂತ್ರಿಗಳು ಇನ್ನೂ ಆ ಗುಂಗಿನಲ್ಲೇ ಇರುವಂತೆ ಕಾಣುತ್ತದೆ. ಸರಕಾರವನ್ನು ಆ ಗುಂಗಿನಿಂದ ಹೊರತಂದು ಈಬಗ್ಗೆ ಅವಲೋಕನ ಮಾಡುವಂತೆ ಸಿಐಟಿಯು ಮತ್ತು ಇತರ ಕೆಲವು ಸಂಘಟನೆಗಳು ಡಿಸೆಂಬರ್ 13 ರಂದು ಬೆಲೆಯೇರಿಕೆ ವಿರುದ್ಧ ಪ್ರತಿಭಟನೆ ನಡೆಸಲು ನಿರ್ಧರಿಸಿವೆ.

ಮೂಡೀಸ್ ರೇಟಿಂಗ್‌ನ ಬೆನ್ನುಬಿದ್ದಿರುವ ಮೋದಿ ಸರಕಾರ



2008ರ ಹಣಕಾಸು ಬಿಕ್ಕಟ್ಟಿನ ಒಬ್ಬ ದೋಷಿಯೆಂದು ತನ್ನ ದೇಶದಲ್ಲೇ 864 ಮಿಲಿಯ ಡಾಲರ್ ದಂಡ ಕಕ್ಕಿರುವ ಮೂಡೀಸ್‌ನ ಶ್ರೇಯಾಂಕ ಚೀಟಿಯನ್ನು ನಮ್ಮ ಪ್ರಧಾನಿಗಳು ಒಂದು ಗೌರವದ ಪದಕ ಎಂಬಂತೆ ಧರಿಸಿ ಮೆರೆದಾಡುತ್ತಿದ್ದಾರೆ. ಅವರು 132 ಕೋಟಿ ಭಾರತೀಯರ ಹಿತಾಸಕ್ತಿಗಳನ್ನು ಕಾಪಾಡಲು ಆಯ್ಕೆ ಆಗಿದ್ದಾರೆಯೆ ಹೊರತು ಯಾವುದೋ ವಿದೇಶಿ ವ್ಯಾಪಾರಸ್ತರು ಮತ್ತು ಹಣಕಾಸು ಕಂಪನಿಗಳದ್ದಲ್ಲ ಎಂಬುದನ್ನು ಮರೆತಂತೆ ಕಾಣುತ್ತದೆ.

ಬೋದಪತಿ ಸೃಜನಾ ಅನುವಾದ: ಭಾರತಿ ಗಾಂವ್ಕರ್

ಜಗತ್ತಿನ ಮೂರು ದೊಡ್ಡ ಕ್ರೆಡಿಟ್ ರೇಟಿಂಗ್ (ಸಾಲಾರ್ಹತೆ ದರಶ್ರೇಣಿ) ಏಜೆನ್ಸಿಗಳಲ್ಲಿ ಒಂದಾದ 'ಮೂಡೀಸ್ ಇನ್ವೆಸ್ಟರ್ಸ್ ಸರ್ವಿಸ್' ಇದು ಭಾರತದ ಸಾರ್ವಭೌಮ ಸಾಲ ರೇಟಿಂಗ್‌ಅನ್ನು ಬಿಎಎ3 ರಿಂದ ಒಂದು ಶ್ರೇಣಿ ಏರಿಕೆ ಮಾಡಿ ಬಿಎಎ 2 ರೇಟಿಂಗ್ ನೀಡಿದೆ, ಇದು ಪ್ರಸ್ತುತ ಬಿಜೆಪಿ ಸರಕಾರದ ಪ್ರತಿಷ್ಠೆಯನ್ನು ಹೆಚ್ಚಿಸಿದೆ ಎಂಬಂತೆ ಮಾಧ್ಯಮಗಳು ಬಿಂಬಿಸುತ್ತಿವೆ.

(ಕ್ರೆಡಿಟ್ ರೇಟಿಂಗ್ ಏಜೆನ್ಸಿ ಎಂದರೇನು? ಇದೊಂದು ಸಾಲ ಪಡೆಯ ಬೇಕೆಂದಿರುವವರ ಮರುಪಾವತಿ ಮಾಡುವ ಸಾಮರ್ಥ್ಯಅಥವ ಅಸಮರ್ಥತೆ ಮತ್ತು ಸಮಯ ಸಮಯಕ್ಕೆ ಬಡ್ಡಿಯನ್ನು ಪಾವತಿಸುವ ಸಾಮರ್ಥ್ಯದ ಮಟ್ಟವನ್ನು ಲೆಕ್ಕಹಾಕಿ ಶ್ರೇಣಿಯನ್ನು ಪ್ರಕಟಿಸುವ ಸಂಸ್ಥೆ)–ಅನು)

ಹಣಕಾಸು ದೃಷ್ಟಿಯಿಂದ ಭಾರತಕ್ಕೆ ಈ ಕ್ರೆಡಿಟ್ ರೇಟಿಂಗ್ ಏರಿಕೆಯ ಅರ್ಥವೇನು?

ಸೈದ್ಧಾಂತಿಕವಾಗಿ ಇದರ ಅರ್ಥ– ಇನ್ನುಮುಂದೆ ವಿದೇಶೀ ಕರೆನ್ಸಿಯಲ್ಲಿ ಭಾರತ ಸರಕಾರಕ್ಕೆ ಸುಲಭವಾಗಿ ಸಾಲ ದೊರೆಯುವುದು ಅಗ್ಗವಾಗುತ್ತದೆ. ಆದರೆ, ಭಾರತದ 96% ಸರಕಾರೀ ಸಾಲಗಳು ದೇಶದ ಒಳಗಡೆಯೇ ಇರುವ ರೂಪಾಯಿ ಸಾಲಗಳಾಗಿವೆ, ವಿದೇಶೀ ಸಾಲ ಅಗ್ಗವಾಗಿ ದೊರೆಯುತ್ತದೆ ಎಂಬ ಕಾರಣದಿಂದ, ಸರಕಾರಿ ಹಣಕಾಸಿಗೆ ಇದರಿಂದಾಗಿ ಯಾವುದೇ ಹೆಚ್ಚಿನ ವ್ಯತ್ಯಾಸ ಉಂಟಾಗುವದಿಲ್ಲ. ಇದಕ್ಕೂ ಮಿಗಿಲಾಗಿ, ರಿಝರ್ವ್ ಬ್ಯಾಂಕ್‌ನ ಬಳಿ 400 ಬಿಲಿಯನ್ ಡಾಲರ್ ನಷ್ಟು ವಿದೇಶಿ ವಿನಿಮಯ ಸಂಗ್ರಹ ಹೊಂದಿರುವಾಗ, ಸರಕಾರಕ್ಕೆ ಯಾವುದೆ ವಿದೇಶಿ ಕರೆನ್ಸಿ ಸಾಲಕ್ಕೆ ಭಾರತದ ಗಡಿಗಳ ಆಚೆ ನೋಡಬೇಕಾದ ಅಗತ್ಯವೇನೂ ಇಲ್ಲ.

ಭಾರತಕ್ಕೆ ನೀಡಿರುವ ಈ ರೇಟಿಂಗ್ ಅಪ್ರಸ್ತುತ ಎಂದು ಬಿಜೆಪಿಗೆ ಹೊಳೆದಿರುವಂತೆಯೇ ಇಲ್ಲ ಅದರ ನಾಯಕರುಗಳು ತಮ್ಮ ಪ್ರಿಯ ನೇತಾರನ ಮೇಲೆ ಹೊಗಳಿಕೆಯ ಸುರಿಮಳೆಯನ್ನೇ ಸುರಿಯಲು ಈ ರೇಟಿಂಗ್‌ಗೆ ಆತುಕೊಂಡಿದ್ದಾರೆ. "ಭಾರತದ ಪ್ರಧಾನಿಯಾಗಿ ಮೋದಿಯವರ ಉತ್ತಮ ಕೆಲಸವನ್ನು ಮೂಡೀಸ್ ರೇಟಿಂಗ್ ಧೃಡ ಪಡಿಸಿದೆ" ಎಂದು ಅಮಿತ್ ಷಾ ಘೋಷಣೆ ಮಾಡಿಬಿಟ್ಟಿದ್ದಾರೆ, "ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಸರಿಸಾಟಿಯಿಲ್ಲದ ಉತ್ತಮ ಕಾರ್ಯಕ್ಕೆ ಈ ರೇಟಿಂಗ್ ಸಾಕ್ಷಿ" ಎಂದು ಜೇಟ್ಲಿ ಹೊಗಳಿದ್ದಾರೆ.

2016 ರಲ್ಲಿ ರೋಯ್ಟರ್ಸ್ ಸುದ್ದಿ ಸಂಸ್ಥೆ ಪ್ರಕಟಿಸಿದ ಹಾಗೆ–ಬಿಜೆಪಿ ಸರ್ಕಾರ ಅಧಿಕಾರ ವಹಿಸಿಕೊಂಡ ದಿನದಿಂದ, ತಮ್ಮ ಸಾಲಾರ್ಹತೆ ರೇಟಿಂಗ್ ಹೆಚ್ಚಿಸಿಕೊಳ್ಳಲು ಮೂಡೀಸ್ ಬಳಿ ಬೇಡಿಕೊಳ್ಳುತ್ತಿತ್ತು.

ಜೇಟ್ಲಿಯವರ ಅಡಿಯಲ್ಲಿ ಹಣಕಾಸು ಮಂತ್ರಾಲಯವು, ಈ ಕ್ರೆಡಿಟ್ ರೇಟಿಂಗ್ ಏಜೆನ್ಸಿಗೆ ತನ್ನ ರೇಟಿಂಗ್ ಹೆಚ್ಚಿಸಲು ಕೋರಿ, ಪತ್ರ ಮತ್ತು ಇ–ಮೇಲ್‌ಗಳ ಮಳೆಯನ್ನೇ ಸುರಿಸಿತ್ತು. ರಾಜ್ಯಾದಾಯ ಹಣಕಾಸು ಕೊರತೆಯನ್ನು ನಿಯಂತ್ರಣ ಮತ್ತು ಹೂಡಿಕೆಗೆ ಉತ್ತೇಜನ ನೀಡುವಲ್ಲಿ ಭಾರತದ ಪ್ರಯತ್ನ ಸಾಲದೆಂಬ ಕಾರಣದಿಂದ ಮೂಡೀಸ್ ನಮ್ಮ ಸರ್ಕಾರದ ಮನವಿಯನ್ನು ತಿರಸ್ಕರಿಸಿತ್ತು.

ವರ್ಷವೊಂದು ಕಳೆದ ನಂತರ, ಭಾರತ ಸರ್ಕಾರವು ರೇಟಿಂಗ್ ಹೆಚ್ಚಿಸಲು ಸಮರ್ಥವಾದ ಯೋಗ್ಯ ಕೆಲಸ ಮಾಡಿದೆ ಎಂದು ಮೂಡೀಸ್ ಭಾವಿಸಿದಂತಿದೆ. ಭಾರತದ ಬಗ್ಗೆ ಅಷ್ಟಾಗಿ ಆಶಾಭಾವ ಮೂಡಲು ಆ ಒಂದು ವರ್ಷದಲ್ಲಿ ಅಂತಹದ್ದೇನು ನಡೆದಿರಬಹುದು?

ಒಂದು ವರ್ಷದಲ್ಲಿ ನಡೆದಿರುವ ಎರಡು ಘಟನೆಗಳೆಂದರೆ ನೋಟುರದ್ಧತಿ ಮತ್ತು ಜಿ.ಎಸ್.ಟಿ. ಈ ಅವಘಡಗಳಿಂದ ತತ್ತರಿಸಿಹೋಗಿದ್ದ ಭಾರತೀಯರು, ಸರ್ಕಾರ ಮಾಡಿದ ಅನರ್ಥಕ್ಕೆ ಕಡಿಮೆ ರೇಟಿಂಗ್ ಸಿಗಬಹುದು ಎಂದು ನಿರೀಕ್ಷಿಸಿದ್ದರೇ ಹೊರತು ಉನ್ನತವಾದದ್ದಲ್ಲ.

ಮೂಡೀಸ್ ಒಂದು ಸಾಮಾನ್ಯ ಭಾರತೀಯನಿಗಿಂತ, ವಿಭಿನ್ನ ತರ್ಕದಿಂದ ಕೆಲಸ ಮಾಡುತ್ತದೆ ಎಂದು ಕಾಣುತ್ತದೆ. ಭಾರತಕ್ಕೆ ಏಕೆ ಹೆಚ್ಚಿನ ರೇಟಿಂಗ್ ನೀಡಲಾಗಿದೆ ಎಂಬ ಕಾರಣಗಳ ಪಟ್ಟಿಯನ್ನು ಅದು ತನ್ನ ಜಾಲತಾಣದಲ್ಲಿ ಪ್ರಕಟಿಸಿದೆ.

ಆ ಕಾರಣಗಳಲ್ಲಿ ನೋಟುರದ್ಧತಿಯೂ ಒಂದು. ಇದರಿಂದಾಗಿ ಭಾರತದ ಆರ್ಥಿಕತೆಯಲ್ಲಿ ಔಪಚಾರಿಕ ವಲಯದ ಬೆಳವಣಿಗೆ ಆಗುತ್ತದೆ ಎಂದು ಮೂಡೀಸ್ ಅಭಿಪ್ರಾಯ. ಶ್ರಮ ಶಕ್ತಿಯ ಬಹುಪಾಲು ಹೊಂದಿರುವ ಅನೌಪಚಾರಿಕ ವಲಯದ ಮೇಲೆ ನೋಟುರದ್ಧತಿ ತಂದಿರುವ ವಿನಾಶದಿಂದಾಗಿ, ಔಪಚಾರಿಕ ವಲಯ ಎಂದು ಕರೆಸಿಕೊಳ್ಳುವ ಗುಂಪಿನ ಭಾಗವಾದ ವಿದೇಶೀ ಮತ್ತು ಭಾರತೀಯ ಕಾರ್ಪೊರೇಟ್ ಗುಂಪುಗಳಿಗೆ ನಿಸ್ಸಂದೇಹವಾಗಿ ಇದೊಂದು ಉಜ್ವಲ ನಿರೀಕ್ಷೆ ತಂದಿದೆ. ಇದನ್ನು ಮೂಡೀಸ್ ಚೆನ್ನಾಗಿ ಗುರುತಿಸಿದೆ.

ಮೂಡೀಸ್ ನೋಟುರದ್ಧತಿಗೆ ತನ್ನ ಮೆಚ್ಚುಗೆ ವ್ಯಕ್ತಪಡಿಸಿರುವದರ ಹೊರತಾಗಿ, ವ್ಯವಸ್ಥೆಯಲ್ಲಿ ಅನೌಪಚಾರಿಕ ವಲಯದ ಪಾಲನ್ನು ಮತ್ತು ಅದರಿಂದಾಗುವ ಪರಿಣಾಮವನ್ನು ತಗ್ಗಿಸುವದಕ್ಕಾಗಿ, ಆಮೂಲಕ ಔಪಚಾರಿಕ ವಲಯದ ಕುಳಗಳಿಗೆ ಸಹಾಯಮಾಡಲು ತಂದಿರುವ ಆಧಾರ್ ಆಧಾರಿತ ಬಯೊಮೆಟ್ರಿಕ್(ಜೈವಿಕಮಾಪಕ) ವ್ಯವಸ್ಥೆಯ ಮಹತ್ವವನ್ನೂ ಒಪ್ಪಿಕೊಂಡಿದೆ.

ಇತ್ತೀಚೆಗೆ ದೆಹಲಿಯಲ್ಲಿ, ಒಟ್ಟುಗೂಡಿ ಪ್ರತಿಭಟಿಸಿದ ಲಕ್ಷಾಂತರ ಜನ ಕಾರ್ಮಿಕರು ಸರ್ಕಾರ ಪ್ರಸ್ತಾಪಿಸಿದ ಕಾರ್ಮಿಕ ಸುಧಾರಣಾ ಕ್ರಮಗಳನ್ನು ಮೆಚ್ಚಲಿಕ್ಕಿಲ್ಲ. ಈಗಾಗಲೇ ತುಚ್ಛವಾಗಿರುವ ಅವರ ಹಕ್ಕುಗಳನ್ನು ತುಳಿಯಲು ಮತ್ತು ಅವರ ವೇತನವನ್ನು ಇನ್ನಷ್ಟು ಕಡಿತಗೊಳಿಸಲು ಈ ಸುಧಾರಣಾ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಕಾರ್ಮಿಕರು ಆಲೋಚಿಸುತ್ತಿರಬಹುದು. ಮೂಡೀಸ್‌ಗೆ ಚೆನ್ನಾಗಿ ಗೊತ್ತಿರುವ ವಿಷಯವೇ ಬೇರೆ. 40 ಕೋಟಿ ಭಾರತೀಯ ಕಾರ್ಮಿಕರಿಗೆ ಏನಾದರೇನಂತೆ, ವಿದೇಶಿ ಹೂಡಿಕೆದಾರರಿಗೆ ಭಾರತವು ಆಕರ್ಷಕವಾಗಿ ಕಾಣಲು ಇದೊಂದು ಮಹತ್ವದ ಕ್ರಮ ಎಂದು ಮೂಡೀಸ್ ಭಾವಿಸುತ್ತದೆ.

ಮೋದಿ ಸರ್ಕಾರದ ಯೋಜನೆಗಳಾದ, ಸಾರ್ವತ್ರಿಕ ಪಡಿತರ ವಿತರಣಾ ವ್ಯವಸ್ಥೆಯ ಕಡಿತ, ಅಡುಗೆ ಅನಿಲದ ಸಬ್ಸಿಡಿಯಲ್ಲಿ ಕಡಿತ, ಇತರೆ ಸಾರ್ವಜನಿಕ ಕಲ್ಯಾಣ ಯೋಜನೆಗಳಾದ ನೇರ ಹಣ ವರ್ಗಾವಣೆ ಮುಂತಾದವುಗಳೂ ಮೂಡೀಸ್‌ನಿಂದ ಸಾಕಷ್ಟು ಪ್ರಶಂಸೆಗಳನ್ನು ಗಳಿಸಿದೆ. ಈ ರೇಟಿಂಗ್ ಏಜೆನ್ಸಿ ಪ್ರಕಾರ, ಈ ನಡೆಗಳು ಕೊರತೆ ಹಣಕಾಸನ್ನು ಕಡಿಮೆ ಮಾಡಲು ಈ ಸರಕಾರ ಬದ್ಧವಾಗಿದೆ ಎಂಬುದನ್ನು ಸೂಚಿಸುತ್ತದೆ.

ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳ ನಿದ್ದೆಗೆಡಿಸುವ ಮುಖ್ಯ ಅಂಶ ಎಂದರೆ – ಸರಕಾರ ನಡೆಸುವ ಕೊರತೆ ಹಣಕಾಸು. ಸರ್ಕಾರದ ಮಧ್ಯಪ್ರವೇಶದ ಕೊರತೆಯಿಂದಾಗಿ ದೇಶದ ಬಹುಪಾಲು ಜನತೆ ಬಡತನದಿಂದ ತತ್ತರಿಸಿದರೆ ಅಥವಾ ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದರೆ ಅವರಿಗೇನೂ ಚಿಂತೆಯಿಲ್ಲ. ಸರಕಾರಗಳು ಎಲ್ಲಿಯವರೆಗೆ ತಮ್ಮ ಜನತೆಯ ಸಲುವಾಗಿ ಕಲ್ಯಾಣ ಯೋಜನೆಗಳಿಗೆ ಹಣ ತೊಡಗಿಸುವದಿಲ್ಲವೋ ಅಲ್ಲಿಯವರೆಗೆ ಮೂಡೀಸ್‌ನಂತಹ ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳು ಸಂತೃಪ್ತರಾಗಿರುತ್ತಾರೆ, ಮೋದಿ ಸರ್ಕಾರಕ್ಕೆ ಹೆಚ್ಚಿನ ಅಂಕ ನೀಡುತ್ತಾರೆ.

ಮೂಡೀಸ್ ರೇಟಿಂಗ್ ಯಾರಿಗೆ ಬೇಕಾಗಿದೆ?

ಯಾವುದೇ ಆತ್ಮಗೌರವ ಇರುವ ಭಾರತೀಯನಾದರೂ ಈ ಪ್ರಶ್ನೆಯನ್ನು ಕೇಳಬಹುದು. ಸ್ವತಂತ್ರ ಭಾರತದ ಸರ್ಕಾರ, ಒಂದು ವಿದೇಶಿ ಹಣಕಾಸು ಏಜೆನ್ಸಿ ನಮ್ಮ ಬಗ್ಗೆ ಏನಂದುಕೊಂಡೀತು ಎಂದು ಏಕೆ ಚಿಂತಿಸಬೇಕು? ನಾವು ಈಸ್ಟ್ ಇಂಡಿಯಾ ಕಂಪನಿಯಿಂದ ವಸಹಾತುಶಾಹೀ ಆಳ್ವಿಕೆಯಿಂದ ಸ್ವಾತಂತ್ರ್ಯಕ್ಕೆ ಹೋರಾಡಿದ್ದು ವಿದೇಶಿ ರೇಟಿಂಗ್ ಏಜೆನ್ಸಿಗಳು, ಅದರಲ್ಲೂ ತಮ್ಮ ದೇಶದಲ್ಲೇ ದೂಷಣೆಗೆ ಒಳಗಾಗಿರುವ ಏಜೆನ್ಸಿಗಳು ನಮ್ಮ ಬಗ್ಗೆ ಏನಂದುಕೊಳ್ಳಬಹುದೋ ಎಂದು ಹೆದರಿಕೊಂಡಿರುವುದಕ್ಕಾಗಿಯೇನು?

ಸ್ವತಂತ್ರ ಭಾರತದ ಸರ್ಕಾರ, ಒಂದು ವಿದೇಶಿ ಹಣಕಾಸು ಏಜೆನ್ಸಿ ನಮ್ಮ ಬಗ್ಗೆ ಏನಂದುಕೊಂಡೀತು ಎಂದು ಏಕೆ ಚಿಂತಿಸಬೇಕು? ನಾವು ಈಸ್ಟ್ ಇಂಡಿಯಾ ಕಂಪನಿಯಿಂದ ವಸಹಾತುಶಾಹೀ ಆಳ್ವಿಕೆಯಿಂದ ಸ್ವಾತಂತ್ರ್ಯಕ್ಕೆ ಹೋರಾಡಿದ್ದು ವಿದೇಶಿ ರೇಟಿಂಗ್ ಏಜೆನ್ಸಿಗಳು, ಅದರಲ್ಲೂ ತಮ್ಮ ದೇಶದಲ್ಲೇ ದೂಷಣೆಗೆ ಒಳಗಾಗಿರುವ ಏಜೆನ್ಸಿಗಳು ನಮ್ಮ ಬಗ್ಗೆ ಏನಂದುಕೊಳ್ಳಬಹುದೋ ಎಂದು ಹೆದರಿಕೊಂಡಿರುವುದಕ್ಕಾಗಿಯೇನು? ಇದು ಯಾವುದೇ ಆತ್ಮಗೌರವ ಇರುವ ಭಾರತೀಯನಾದರೂ ಕೇಳಬಹುದಾದ ಪ್ರಶ್ನೆ

ಶ್ರೀಮಾನ್ ಮೋದಿ ಮತ್ತು ಶ್ರೀಮಾನ್ ಜೇಟ್ಲಿ ತಮ್ಮ ನೆನಪಿನ ಓಣಿಯಲ್ಲಿ ಸ್ವಲ್ಪ ಇಣುಕು ಹಾಕಲಿ. 2008ರ ಹಣಕಾಸಿನ ಬಿಕ್ಕಟ್ಟಿಗೆ ಬಹುಪಾಲು ಈ ವಿದೇಶಿ ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳ ರೇಟಿಂಗ್ ಅವಾಂತರ, ಅದರಲ್ಲೂ ಮುಖ್ಯವಾಗಿ ಮೂಡೀಸ್‌ನದ್ದು ಎಂಬುದು ಅವರಿಗೆ ನೆನಪಾಗಬಹುದು.

ಈ ರೇಟಿಂಗ್ ಏಜೆನ್ಸಿಗಳು, ಬಂಡವಾಳ ವಿನಿಯೋಗ ಬ್ಯಾಂಕ್‌ಗಳಿಂದ ಆಕರ್ಷಕ ಸಂಭಾವನೆ ಪಡೆದು ನಿರುಪಯುಕ್ತ ಅಡಮಾನಗಳ ಆಧಾರಿತ ಸೆಕ್ಯುರಿಟಿಗಳಿಗೆ ಅತ್ಯುನ್ನತ ಎಎಎ ರೇಟಿಂಗ್ ಕೊಟ್ಟವು. ಈ ಕ್ರೆಡಿಟ್ ರೇಟಿಂಗ್ ಏಜೆನ್ಸಿಗಳ ಮೇಲೆ ತಮ್ಮ ಸಂಪೂರ್ಣ ನಂಬಿಕೆ ಇರಿಸಿದ ಹೂಡಿಕೆದಾರರು ಯಾವುದೇ ಅನುಮಾನ ಇಲ್ಲದೇ ಈ ವಿಷಕಾರಿ ಹೂಡಿಕೆಗಳನ್ನು ಮಾಡಿದರು. ಹಲವಾರು ಅಮೆರಿಕನ್ನರು ವಯಸ್ಸಾದಾಗ ಬೇಕಾದೀತು ಎಂದು ಮಾಡಿದ್ದ ತಮ್ಮ ಉಳಿತಾಯಗಳನ್ನು ಹಾಕಿದರು. ಈ ಬಿಕ್ಕಟ್ಟಿನಲ್ಲಿ ಎಲ್ಲವನ್ನೂ ಕಳಕೊಂಡರು. ಈ ಹಣಕಾಸು ಬಿಕ್ಕಟ್ಟಿಗೆ ದೋಷಿಯೆಂದು ಮೂಡೀಸ್ ಅಮೆರಿಕಾದಲ್ಲಿ 864 ಮಿಲಿಯನ್ ಡಾಲರ್ ಕಕ್ಕಬೇಕಾಯಿತು.

ಇಂತಹ ಒಂದು ರೇಟಿಂಗ್ ಏಜೆನ್ಸಿಯ ಅಂಕ ಚೀಟಿಯನ್ನು ಮೋದಿಯವರು ಒಂದು ಗೌರವ ಪದಕ ಎಂಬಂತೆ ಧರಿಸಿದ್ದಾರೆ. ತಿರುಚಿದ ಆದ್ಯತೆಗಳು ಎನ್ನುತ್ತೀರಾ? ಅವರು 132 ಕೋಟಿ ಭಾರತೀಯರ ಹಿತಾಸಕ್ತಿ ಗಳನ್ನು ಕಾಪಾಡಲು ಆಯ್ಕೆ ಆಗಿದ್ದಾರೆಯೆ ಹೊರತು ಯಾವುದೋ ವಿದೇಶಿ ವ್ಯಾಪಾರಸ್ತರು ಮತ್ತು ಹಣಕಾಸು ಕಂಪನಿಗಳದ್ದಲ್ಲ ಎಂಬುದನ್ನು ಮರೆತಂತೆ ಕಾಣುತ್ತದೆ.

ಮೋದಿ ಸರಕಾರ ಯಾರನ್ನು ಮೂರ್ಖರಾಗಿಸುತ್ತಿದೆ? –ಯೆಚುರಿ

ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಸರಕಾರ ಒಂದು ಬೃಹತ್ ಪತ್ರಿಕಾಸಮ್ಮೇಳನ ನಡೆಸಿ ಜಗತ್ತಿನಾದ್ಯಂತ ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮ ಸರಕಾರವನ್ನು ಹಾಡಿ ಹೊಗಳುತ್ತಿವೆ. ಏಕೆಂದರೆ ಮೂಡೀಸ್ ಪ್ರಕಾರ ಭಾರತ ಮುಂದುವರೆಯುತ್ತಿದೆ ಎಂದು ಹೇಳಿಕೊಂಡಿದೆ.

ಈ ಏಜೆನ್ಸಿ ಯಾವ ದೇಶ ಅಂತರ್ರಾಷ್ಟ್ರೀಯ ಬಂಡವಾಳಗ ಗುಂಪುಗಳಿಗೆ ಹೆಚ್ಚಿನ ಲಾಭ ದೋಚಲು ಉತ್ತಮ ಪರಿಸರ ಕೊಡುತ್ತಾವೋ ಅವಕ್ಕೆ ಉತ್ತಮ ರೇಟಿಂಗ್ಸ್ ಕೊಡುತ್ತದೆ. ಇದರ ಅರ್ಥ ಜಗತ್ತಿನಾದ್ಯಂತ ವಸಾಹತುಶಾಹಿ ಆಳರಸರು ಮೋದಿಯವರು ಅಧಿಕಾರಕ್ಕೇರಿದ ನಂತರ ಭಾರತದಲ್ಲಿ ಹೆಚ್ಚು ಲಾಭ ಗಳಸಲು ಹೆಚ್ಚಿನ ಅವಕಾಶ ಸಿಕ್ಕಿದೆ ಎಂದು ಹೇಳುತ್ತಿದ್ದಾರೆ ಎಂದು 'ಮೂಡೀಸ್ ರೇಟಿಂಗ್ ಬಗ್ಗೆ ಪ್ರಧಾನಿಗಳೂ ಸೇರಿದಂತೆ ಅವರ ಸರಕಾರದ ಮಂದಿ ಬೀಗುತ್ತಿರುವ ಬಗ್ಗೆ ಖೇದ ವ್ಯಕ್ತಪಡಿಸುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ ಟಿಪ್ಪಣಿ ಮಾಡಿದ್ದಾರೆ.

ಆದರೆ ಇಲ್ಲಿ ಉದ್ಯೋಗ ಇಳಿದಿದೆ, ಬೆಳವಣಿಗೆ ಇಳಿದಿದೆ, ಗ್ರಾಮೀಣ ಪ್ರದೇಶ ಸಂಕಟದಲ್ಲಿದೆ, ಲಿಂಗ ಬೇಧ ಹೆಚ್ಚುತ್ತಿದೆ ಮತ್ತು ಹಸಿವು ಉಲ್ಬಣಗೊಳ್ಳುತ್ತಿವೆ ಎಂದು ಇತರ ಶ್ರೇಯಾಂಕಗಳು ಹೇಳುತ್ತಿವೆ. ಅಸಮಾನತೆ ಈ ಮೂರು ವರ್ಷಗಳಲ್ಲಿ ಏರಿದೆ. ಒಂದು ಶೆಕಡಾ ಮಂದಿ ದೇಶದ 58ಶೇಕಡಾ ಸಂಪತ್ತನ್ನು ಹೊಂದಿದ್ದಾರೆ. ಈ ಸರಕಾರ ಯಾರನ್ನು ಮೂರ್ಖರಾಗಿಸುತ್ತಿದೆ? ಮೋದಿ ಸರಕಾರ ಬಡವರು, ಹಸಿದವರು, ಪ್ರತಿಭಟಿಸುವ ರೈತರು, ಉದ್ಯೋಗ ಹೀನರು, ಕುಸಿಯುತ್ತಿರುವ ಆರ್ಥಿಕ ಪರಿಸ್ತಿತಿಯಿಂದ ಸಂಕಟ ಪಡುತ್ತಿರುವವರು ಈ ರೇಟಿಂಗ್‌ಗಳನ್ನು ತಿನ್ನಬೇಕೆಂದು ಬಯಸುತ್ತಿದೆಯೇ ಎಂದು ಸೀತಾರಮ್ ಯೆಚುರಿ ಖಾರವಾಗಿ ಪ್ರಶ್ನಿಸುತ್ತಾರೆ.

ವ್ಯಂಗ್ಯಚಿತ್ರ: ಅದ್ವರ್ಯು, ಟೈಂಸ್ ಆಫ್ ಇಂಡಿಯ

ಮೂಡೀಸ್ ಮೇಲ್ದರ್ಜೆ: ಅನುಮಾನ ಇರುವವರು ಆತ್ಮಾವಲೋಕನ ಮಾಡಬೇಕು ಎನ್ನುತ್ತಾರೆ ಹಣಕಾಸು ಮಂತ್ರಿಗಳು



ತಿರುವನಂತಪುರ ಮೇಯರ್ ಮೇಲೆ ಆರೆಸ್ಸೆಸ್ ಹಲ್ಲೆ, ನಗರದಲ್ಲಿ ರಂಪಾಟ



ನವಂಬರ್ 18ರಂದು ತಿರುವನಂಪುರ ಕಾರ್ಪೊರೇಷನ್‌ನ ಮಂಡಳಿ ಸಭೆ ರಾಜ್ಯದ ರಾಜಧಾನಿಯಲ್ಲಿ ಎತ್ತರದ ಕಂಬಗಳ ದಾರಿದೀಪಗಳ ಬಗ್ಗೆ ಚರ್ಚಿಸುತ್ತಿದ್ದಾಗ ಬಿಜೆಪಿ ಸದಸ್ಯರು ನಡೆಸಿದ ರಂಪಾಟದ ನಡುವೆ ಸಭೆಗೆ ಹೊರಗಿನಿಂದ ನುಗ್ಗಿ ಬಂದ ಆರೆಸ್ಸೆಸ್‌ನವರು ಎನ್ನಲಾದ ಮಂದಿ ನಡೆಸಿದ ಹಿಂಸಾಚಾರದಲ್ಲಿ ಮೇಯರ್ ವಿ ಕೆ ಪ್ರಶಾಂತ್ ಮತ್ತು ನಾಲ್ವರು ಸದಸ್ಯರು ಗಾಯಗೊಂಡರು.

ಅದರ ನಂತರ ಆರೆಸ್ಸೆಸ್ ಮತ್ತು ಬಿಜೆಪಿ ಮಂದಿ ತಿರುವನಂತಪುರದಲ್ಲಿ ಭಾರೀ ರಂಪಾಟ ನಡೆಸಿದರು. ನವಂಬರ್ 19ರ ರಾತ್ರಿ ಸಿಪಿಐ(ಎಂ)ನ ತಿರುವನಂತಪುರ ಜಿಲ್ಲಾ ಸಮಿತಿ ಕಚೇರಿ ಮೇಲೆ ಕಲ್ಲು ರೂರಾಟ ನಡೆಸಿದರು. ಒಬ್ಬ ಬಿಜೆಪಿ ಕೌನ್ಸಿಲರ್ ಮಗ ಮೋಹನ್ ಈ ದಾಳಿಯ ಮುಂಚೂಣಿಯಲ್ಲಿದ್ದ ಎಂದು ವರದಿಯಾಗಿದೆ.

ಈ ಕಲ್ಲು ತೂರಾಟದಲ್ಲಿ ಕಚೇರಿಯ ಕಿಟಕಿ ಗಾಜುಗಳು ಪುಡಿಯಾಗಿವೆಯಲ್ಲದೆ, ಕೇರಳದಲ್ಲಿ ಕಮ್ಯುನಿಸ್ಟ್ ಆಂದೋಲನದ ಪ್ರವರ್ತಕರಲ್ಲಿ ಒಬ್ಬರಾಗಿದ್ದ ಪಿ.ಕೃಷ್ಣಪಿಳ್ಳೆಯವರ ಪ್ರತಿಮೆಯಿದ್ದ ಗಾಜಿನ ಆವರಣವೂ ನಷ್ಟಗೊಂಡಿದೆ. ಈ ಘಟನೆಗೆ ಸಂಬಂಧಪಟ್ಟಂತೆ ಏಳು ಆರೆಸ್ಸೆಸ್ ಕಾರ್ಯಕರ್ತರನ್ನು ಬಂಧಿಸಲಾಗಿದೆ.

"ಕಳೆದ ಕೆಲವು ದಿನಗಳಿಂದ ಈ ಪ್ರದೇಶದಲ್ಲಿ ಸೆಳೆತವನ್ನು ಬಡಿದೆಬ್ಬಿಸುವ ಬಿಜೆಪಿ–ಆರೆಸ್ಸೆಸ್ ತಂತ್ರಗಳು ಕಾಣ ಬರುತ್ತಿವೆ" ಎಂದು ಸಿಪಿಐ(ಎಂ) ಜಿಲ್ಲಾ ಕಚೇರಿಗೆ ಭೇಟಿ ನೀಡಿದ ಪ್ರವಾಸೋದ್ಯಮ ಮಂತ್ರಿ ಕಡಕಂಪಳ್ಳಿ ಸುರೇಂದ್ರನ್ ಹೇಳಿದ್ದಾರೆ.

ತಿರುವನಂತಪುರದ ಮೇಯರ್ ಆಗಿರುವ ವಿ ಕೆ ಪ್ರಶಾಂತ್ ಅತ್ಯಂತ ಜನಪ್ರಿಯ ಮುಖಂಡರು. ಅವರು ತಮ್ಮ ವಾರ್ಡ್‌ನಲ್ಲಿ ಮೂರನೇ ಎರಡರಷ್ಟು ಭಾರೀ ಮತಗಳನ್ನು ಪಡೆದು ಗೆದ್ದವರು. ಈ ಮೊದಲು ಅವರ ವಾರ್ಡಿಗಷ್ಟೇ ಸೀಮಿತವಾಗಿದ್ದ ಅವರ ಹೆಸರು ಈಗ ಇಡೀ ನಗರದಲ್ಲಿ ಜನಪ್ರಿಯಗೊಳ್ಳುತ್ತಿರುವುದು ಬಿಜೆಪಿ ಮಂದಿಗಳಿಗೆ ಕಳವಳ ಉಂಟು ಮಾಡಿರುವುದರಿಂದ ಅವರನ್ನು ಸುತ್ತುವರಿದು ಥಳಿಸಿದ್ದಾರೆ ಎಂದು ಪತ್ರಕರ್ತ ಮತ್ತು ರಾಜಕೀಯ ವಿಶ್ಲೇಷಕ ಟಿ.ಸಿ.ರಾಜೇಶ್ ಅಭಿಪ್ರಾಯ ಪಟ್ಟಿದ್ದಾರೆ.

ತಿರುವನಂತಪುರ ಮೆಡಿಕಲ್ ಕಾಲೇಜ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಪ್ರಶಾಂತ್‌ಅವರನ್ನು ಮುಖ್ಯಮಂತ್ರಿ ಭೇಟಿಯಾಗಿ ಮಾತಾಡುತ್ತ ಅವರ ಮೇಲೆ ಆರೆಸ್ಸೆಸ್–ಬಿಜೆಪಿ ಹಲ್ಲೆ ಪೂರ್ವಯೋಜಿತ ಎಂದರು.

ಇದೊಂದು ಬರ್ಬರ ಘಟನೆ, ಎಲ್ಲ ಪ್ರಜಾಪ್ರಭುತ್ವ ನಿಯಮಗಳನ್ನು, ನಾಗರಿಕ ಭಾವಗಳನ್ನು ಗಾಳಿಗೆ ತೂರಿದ್ದಾರೆ ಎಂದು ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಈ ಹಲ್ಲೆಯನ್ನು ಖಂಡಿಸುತ್ತ ಹೇಳಿದ್ದಾರೆ.

ಶಾಲಾ ವಿದ್ಯಾರ್ಥಿಗಳನ್ನು ದ್ವೇಷ ಪ್ರಚಾರದ ಬೆಂಕಿಗೆ ಒಡ್ಡುವುದನ್ನು ನಿಲ್ಲಿಸಿ–ಸಿಪಿಐ(ಎಂ) ಪೊಲಿಟ್‌ಬ್ಯುರೊ

ರಾಜಸ್ಥಾನದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಮಂತ್ರಿಗಳು ರಾಜ್ಯದ ರಾಜಧಾನಿ ಜಯಪುರದಲ್ಲಿ ನಡೆಯುವ ಐದು ದಿನಗಳ 'ಹಿಂದು ಆಧ್ಯಾತ್ಮಿಕ ಮತ್ತು ಸೇವಾ ಮೇಳಕ್ಕೆ ತಮ್ಮ ವಿದ್ಯಾರ್ಥಿಗಳನ್ನು ಕರೆದೊಯ್ಯಬೇಕು ಎಂದು ಎಲ್ಲ ಸರಕಾರೀ ಹಾಗೂ ಖಾಸಗಿ ಶಾಲೆಗಳಿಗೆ ನಿರ್ದೇಶನವಿತ್ತಿದ್ದಾರೆ ಎಂದು ವರದಿಯಾಗಿದೆ. ಇದು ಅತ್ಯಂತ ಆಕ್ರೋಶಕಾರಿ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಈ ಮೇಳದಲ್ಲಿ ವಿಹೆಪ್‌ಪಿಯಂತವುಗಳ ಸ್ಟಾಲುಗಳಿವೆ. ಇದರಲ್ಲಿ 'ಲವ್ ಜಿಹಾದ್' ವಿರುದ್ಧ ಎನ್ನುವ ಕರಪತ್ರಗಳಲ್ಲಿ ಮುಸ್ಲಿಮ್ ಗಂಡಸರು ಹಿಂದೂ ಹೆಂಗಸರಿಗೆ 'ಬಲೆ ಬೀಸು'ತ್ತಾರೆ ಎಂದು ಆಪಾದಿಸಲಾಗಿದೆ, ಮತ್ತು ಇಂತಹ 'ಬಲೆ ಬೀಸುವ' ಕೆಲಸ ಎಲ್ಲೆಲ್ಲಿ ನಡೆಯಬಹುದು ಎಂದು ವರ್ಣಿಸಲಾಗಿದೆ. ಹೀಗೆ 'ಬಲೆ ಬೀಸಿದ' ನಂತರ ಮುಸ್ಲಿಂ ಗಂಡಸರು ನಿರ್ದಿಷ್ಟ ಮೊತ್ತಕ್ಕೆ ಅವರನ್ನು ಮತಾಂತರ ಮಾಡುತ್ತಾರೆ ಎಂದು ಆಪಾದಿಸಲಾಗಿದೆ. ಕ್ರೈಸ್ತ ಮಿಶನರಿಗಳು ವಿವಾದಾತ್ಮಕ ಚಟುವಟಿಕೆಗಳನ್ನು ನಡೆಸುತ್ತಿದ್ದಾರೆ, ಅವರಿಗೆ ಮತಾಂತರಗಳನ್ನು ನಡೆಸಲು ಅಪಾರ ವಿದೇಶಿ ಹಣ ಬರುತ್ತಿದೆ ಎಂದು ಆಪಾದಿಸುವ ಕರಪತ್ರಗಳನ್ನು ಹಂಚಲಾಗುತ್ತಿದೆ. ಇದು ನಮ್ಮ ಸಂವಿಧಾನದ ಜಾತ್ಯತೀತ ಸ್ವರೂಪದ ಒಂದು ನಗ್ನ ಉಲ್ಲಂಘನೆಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

ಈ ಸಂವಿಧಾನದ ಅಡಿಯಲ್ಲಿ ರಚಿತವಾಗಿರುವ ಸರಕಾರವೊಂದು ಇಂತಹ ಮೇಳ ನಡೆಸಲು ಅನುಮತಿ ನೀಡಿದೆ ಎಂಬುದೇ ಒಂದು ಆಕ್ಷೇಪಾರ್ಹ ಸಂಗತಿ. ಆದರೆ ಅಷ್ಟೇ ಅಲ್ಲ, ಈ ಸರಕಾರ ವಾಸ್ತವವಾಗಿ ಶಾಲಾವಿದ್ಯಾರ್ಥಿಗಳು ಆ ಮೇಳಕ್ಕೆ ಹೋಗಬೇಕೆಂದು ಕಡ್ಡಾಯಗೊಳಿಸಿ ಅವರನ್ನು ಅಲ್ಪಸಂಖ್ಯಾತ ಸಮುದಾಯಗಳ ವಿರುದ್ಧ ಹಗೆತನದ ಪ್ರಚಾರಕ್ಕೆ ಒಡ್ಡುವುದು ಸಂಪೂರ್ಣವಾಗಿ ಒಪ್ಪಲಾಗದ ಸಂಗತಿ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಇಂತಹ ಮೇಳಗಳನ್ನು ನಡೆಸಲು ಅನುಮತಿ ನೀಡಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಬಿಹಾರ: ಬಯಲು ಶೌಚ ಮಾಡುತ್ತಿರುವವರ ಪೋಟೋ ಹೊಡೆಯುವ ಆದೇಶಕ್ಕೆ ಶಿಕ್ಷಕರ ಪ್ರತಿಭಟನೆ

ಬಿಹಾರದಲ್ಲಿ ನಿತಿಶ್ ಕುಮಾರ್ ಬಿಜೆಪಿಯೊಂದಿಗೆ ಕೈಜೋಡಿಸಿದ ನಂತರ ಅ ರಾಜ್ಯವೂ ಇತರ ಬಿಜೆಪಿ ಆಳ್ವಿಕೆಯ ರಾಜ್ಯಗಳಾಂತಾಗುತ್ತಿದೆ. ಪ್ರಧಾನ ಮಂತ್ರಿಗಳ ನೆಚ್ಚಿನ ಬಯಲು ಶೌಚ ಮುಕ್ತ ಪ್ರಚಾರಾಂದೋಲನ'ದ ಭಾಗವಾಗಿ ಬಯಲು ಶೌಚ ಮಾಡುತ್ತಿರುವವರ ಫೊಟೋ ಹೊಡೆದು ಅವಮಾನಿತಗೊಳಿಸುವ ಕ್ರಮಕ್ಕೆ ಇಳಿದಿರುವ ಸರಕಾರದ ಈ ಕುರಿತ ಆದೇಶವನ್ನು ಬ್ಲಾಕ್ ಅಭಿವೃದ್ಧಿ ಕಚೇರಿ(ಬಿಡಿಒ)ಗಳು ರಾಜ್ಯದ ಶಿಕ್ಷಕರಿಗೆ ಹೊರಡಿಸಿವೆಯಂತೆ.

ಇದು ತಮ್ಮ ಕೆಲಸಕ್ಕೆ ಮಾಡಿರುವ ಅವಮಾನ ಎಂದು ಶಿಕ್ಷಕರ ಸಂಘಟನೆಗಳು ಹೇಳಿವೆ. ತಾವು ಬಯಲು ಶೌಚ ಮುಕ್ತ ಆಂದೋಲನವನ್ನು ಬೆಂಬಲಿಸುತ್ತೇವೆ, ಆದರೆ ಇಂತಹ ಆದೇಶಗಳನ್ನು ಜಾರಿ ಮಾಡುವುದು ಕಷ್ಟ ಸಾಧ್ಯ, ಇದು ಶಿಕ್ಷಕರನ್ನು ಅವಮಾನ ಮಾಡುತ್ತದೆ, ಅವರ ಘನತೆಯನ್ನು ಬುಡಮೇಲು ಮಾಡುತ್ತದೆ ಮತ್ತು ಅವರ ಭದ್ರತೆಗೆ ಅಪಾಯ ತರುತ್ತದೆ ಎಂದು ಶಿಕ್ಷಕರ ಸಂಘಟನೆಗಳು ಹೇಳಿವೆ.

ಡಿಸೆಂಬರ್ 31 ರಂದು ಮುಝಫ್ಫರ್‌ಪುರ್ ಮತ್ತು ಔರಂಗಾಬಾದ್ ಜಿಲ್ಲೆಗಳನ್ನು 'ಬಯಲು ಶೌಚ–ಮುಕ್ತ' ಜಿಲ್ಲೆಗಳೆಂದು ಸಾರಲಾಗುವುದಂತೆ. ಅದಕ್ಕಾಗಿ ಇಲ್ಲಿಯ ಬಿಡಿಒ ಬೆಳಿಗೆ 6ರಿಂದ 7ರ ವರೆಗೆ ಮತ್ತು ಸಂಜೆ 5ರಿಂದ 6ರ ವರೆಗೆ ಬಯಲು ಶೌಚಕ್ಕೆ ಕೂತವರ ಫೋಟೊ ಹೊಡೆದು ಕಳಿಸಬೇಕು ಎಂದು ಈ ಬಿಡಿಒ ಆದೇಶ ಹೇಳುತ್ತದೆ.

ಈ ಆದೇಶವನ್ನು ಹಿಂತೆಗೆದುಕೊಳ್ಳುವಂತೆ ಆಗ್ರಹಿಸಿ ಬಿಹಾರ ಮಾಧ್ಯಮಿಕ್ ಶಿಕ್ಷಕ್ ಸಂಘ್‌ನ ಪ್ರಧಾನ ಕಾರ್ಯದರ್ಶಿ ಶತ್ರುಘನ್ ಪ್ರಸಾದ್‌ಸಿಂಗ್ ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದಾರಂತೆ.

ಇದು ಕಾನೂನು–ವ್ಯವಸ್ಥೆಯ ಸಮಸ್ಯೆಯನ್ನು ಉಂಟು ಮಾಡಬಹುದು, ಅದರಲ್ಲೂ ಮಹಿಳೆಯರು ಮತ್ತು ಹೆಣ್ಣುಮಕ್ಕಳ ಬಯಲು ಶೌಚದ ಫೋಟೋ ಹಿಡಿಯಲು ಮುಂದಾದರೆ. ಆಗೇನು ಮಾಡುವುದು ಎಂಬಪ್ರಶ್ನೆಗೆ ಅಧಿಕಾರಿಗಳಿಂದ ಉತ್ತರವಿಲ್ಲ ಎಂದು ಮುಝಫ್ಫರ್‌ಪುರ್‌ನ ಒಬ್ಬ ಶಿಕ್ಷಕರು ಹೇಳಿರುವುದಾಗಿ ವರದಿಯಾಗಿದೆ.

ಉಮ್ಮರ್ ಖಾನ್ ಮನೆಗೆ ಎಐಕೆಎಸ್ ನಿಯೋಗದ ಭೇಟಿ

ಪುಟ 2 ರಿಂದ

ಹೈನುಗಾರಿಕೆಯೇ ಇವರ ಮುಖ್ಯ ಆದಾಯ ಮೂಲ. ಒಂದು ಲೀಟರ್ ಹಾಲಿನ ಬೆಲೆ 20ರೂ. ಮಾತ್ರ, ಇಡೀ ಹಳ್ಳಿ ಸಂಕಟಗಳನ್ನು ಎದುರಿಸುತ್ತಿದೆ. ಈ ಪ್ರದೇಶದಲ್ಲಿ ಅಭಿವೃದ್ಧಿ ಎಂಬುದು ಕಾಣುತ್ತಿಲ್ಲ. ಹಸುಸಾಕಣೆಯೇ ಮುಖ್ಯ ಜೀವನಾಧಾರ.

ಅಲ್ವರ್‌ನ ಪೋಲೀಸರು ಲಿಖಿತ ಹೇಳಿಕೆಯಲ್ಲಿ ಉಮ್ಮರ್ ಖಾನ್ ಮೇಲೆ ಒಂದು ಕೇಸಿದೆ ಎಂದಿದ್ದರು. ಆದರೆ ಆತನ ಮೇಲೆ ಯಾವ ಕೇಸೂ ಇರಲಿಲ್ಲ ಎಂದು ಗ್ರಾಮಸ್ಥರು ಎಐಕೆಎಸ್ ನಿಯೋಗಕ್ಕೆ ತಿಳಿಸಿದರು. ಇದು ಹಸು ಕಳ್ಳಸಾಗಾಣಿಕೆಯ ಕೇಸು ಎಂದು ಎಸ್‌ಪಿ ನಿಯೋಗಕ್ಕೆ ತಿಳಿಸಿದರು. ಅದಕ್ಕೆ ಕೊಟ್ಟ ಕಾರಣ ಜಾನುವಾರು ಮಾರುಕಟ್ಟೆಯ ತೆರಿಗೆ ರಸೀತಿ ಅವರ ಬಳಿಯಿರಲಿಲ್ಲ. ಹಸುಗಳ ಖರೀದಿ, ಮಾರಾಟಕ್ಕೆ ರಾಜಸ್ತಾನದಲ್ಲಿ ಯಾವುದೇ ಕಾನೂನು ನಿಷೇಧ ಇಲ್ಲ. ಹಳ್ಳಿಗರು ಬೇರೆ ಕುಟುಂಬಗಳಿಂದ ಖರೀದಿ ಅಥವ ಮಾರಾಟ ನಡೆಸಿದಾಗ ಅದಕ್ಕೆ ರಸೀತಿ ಕೊಡುವ ಪದ್ದತಿ ಇಲ್ಲ. ಹಸು ಕಳವಾಗಿದೆ ಎಂಬ ದೂರು ಯಾರಿಂದಲೂ ದಾಖಲಾಗದಿರುವಾಗ ಇವರು ಹಸು ಕಳ್ಳತನದಲ್ಲಿ ತೊಡಗಿದ್ದರು ಎಂದು ಪೋಲೀಸರು ಕೇಸು ದಾಖಲಿಸಿರುವುದು ಅವರ ಮತ್ತು ಆಡಳಿತದ ಮನೋಭಾವವನ್ನು ತೋರಿಸುತ್ತದೆ ಎಂದು ನಿಯೋಗ ಹೇಳಿದೆ.

ಅಲ್ವರ್ ಆಸ್ಪತ್ರೆಯ ಡಾಕ್ಟರುಗಳು ಉಮ್ಮರ್ ಖಾನ್ ಸಾವು ಗುಂಡೇಟಿನಿಂದ ಆಗಿಲ್ಲ, ಏಕೆಂದರೆ ಎಕ್ಸ್‌ರೇಯಲ್ಲಿ ಯಾವುದೇ ಬುಲೆಟ್ ಕಂಡಿಲ್ಲ ಎಂದು ಹೇಳಿದ್ದರು. ಇದನ್ನು ಒಪ್ಪದ ಆತನ ಕುಟುಂಬದವರು ಮತ್ತು ಗ್ರಾಮಸ್ಥರು ಅಲ್ವರ್‌ನಲ್ಲಿ ಮರಣೋತ್ತರ ಪರೀಕ್ಷೆ ನಡೆಸುವುದಕ್ಕೆ ಆಕ್ಷೇಪವೆತ್ತಿದುದರಿಂದ ಅದನ್ನು ಜಯಪುರದಲ್ಲಿ ನಡೆಸಬೇಕಾಯಿತು. ಅದರಲ್ಲಿ ಸಾವು ಎರಡು ಬುಲೆಟ್‌ಗಳಿಂದಾಗಿ ನಡೆದದ್ದು ಎಂದು ದೃಢಪಟ್ಟಿದೆ. ಈ ಕೊಲೆ ಭರತ್‌ಪುರ್ ಜಿಲ್ಲೆಯ ಗಹಂಕರ್‌ಎಂಬ ಹಳ್ಳಿಯಲ್ಲಿ ನಡೆದಿದೆ. ಆದರೆ ಅವರ ವಾಹನ ಗೋವಿಂದಗಡದಲ್ಲಿ ಸಿಕ್ಕಿತು ಮತ್ತು ಹೆಣ 15 ಕಿ.ಮೀ. ದೂರದಲ್ಲಿ ರಾಮಗಡದಲ್ಲಿ ರೈಲ್ವೆ ಹಳಿಯ ಮೇಲೆ ಸಿಕ್ಕಿತು. ಅದೊಂದು ಅಪಘಾತದಲ್ಲಿನ ಸಾವು ಎಂದು ತನಿಖೆಯ ದಾರಿ ತಪ್ಪಿಸುವ ಉದ್ದೇಶಪೂರ್ವಕ ಪ್ರಯತ್ನವನ್ನು ಕೊಲೆಗಡುಕರು ಮಾಡಿದ್ದಾರೆ. ಅಲ್ವರ್ ಆಸ್ಪತ್ರೆಯ ಡಾಕ್ಟರುಗಳ ವರ್ತನೆಯೂ ಸಂದೇಹಾಸ್ಪದ ಎಂದು ಎಐಕೆಎಸ್ ನಿಯೋಗಕ್ಕೆ ಅನಿಸಿದೆ.

2014ರಲ್ಲಿ ಮೋದಿ ಸರಕಾರ ಬಂದಂದಿನಿಂದ ಇಂತಹ 30 ಹತ್ಯೆಗಳು ನಡೆದಿದೆ. ಇದರಿಂದಾಗಿ ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಿ ಗೋರಕ್ಷಕರೆನ್ನುವವರ ಕಾನೂನುಬಾಹಿರ ಚಟುವಟಿಕೆಗಳನ್ನು ತಡೆಯಲು ಪ್ರತಿ ಜಿಲ್ಲೆಯಲ್ಲಿ ಪೋಲೀಸ್ ಅಧಿಕಾರಿಯೊಬ್ಬರನ್ನು ನೇಮಿಸಬೇಕು, ಇಂತಹ ಕೃತ್ಯಗಳಿಗೆ ಬಲಿಯಾದವರಿಗೆ ಸಾಕಷ್ಟು ಪರಿಹಾರ ಒದಗಿಸಬೇಕು ಎಂದು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ನಿರ್ದೇಶನವಿತ್ತಿದೆ. ಆದರೆ ಬಿಜೆಪಿ ನೇತೃತ್ವದ ಸರಕಾರಗಳು ಅದನ್ನು ಲೆಕ್ಕಿಸದೆ ನಾಗಪುರದಿಂದ ಆರೆಸ್ಸೆಸ್ ಮುಖ್ಯಾಲಯದಿಂದ ಬರುವ ಆದೇಶಗಳಂತೆ ಈ ಕ್ರಿಮಿನಲ್‌ಗಳಿಗೆ ಪೋಷಣೆ ನೀಡುತ್ತಿವೆ. ರಾಜಸ್ತಾನ ಸರಕಾರ ಇದುವರೆಗೂ ಇಂತಹ ಒಂದೇ ಒಂದು ಪ್ರಕರಣದಲ್ಲೂ ಸಂತ್ರಸ್ತ ಕುಟುಂಬಕ್ಕೆ ಪರಿಹಾರ ನೀಡಿಲ್ಲ ಎಂಬ ಸಂಗತಿಯತ್ತ ಎಐಕೆಎಸ್ ನಿಯೋಗ ಗಮನ ಸೆಳೆದಿದೆ. ಈ ಹಿನ್ನೆಲೆಯಲ್ಲಿ ಎಐಕೆಎಸ್ ನಿಯೋಗ ಈ ನಾಲ್ಕು ಆಗ್ರಹಗಳನ್ನು ಮಾಡಿದೆ:

1. ಉಮ್ಮರ್ ಖಾನ್ ಹತ್ಯೆಗೆ ಕಾರಣರಾದ ಅಪರಾಧಿಗಳನ್ನೆಲ್ಲ ಬಂಧಿಸಬೇಕು.
2. ಉಮ್ಮರ್ ಖಾನ್ ಕುಟುಂಬಕ್ಕೆ 1 ಕೋಟಿ ರೂ. ಮತ್ತು ಗಾಯಗೊಂಡವರ ಕುಟುಂಬಗಳಿಗೆ ತಲಾ 25 ಲಕ್ಷ ರೂ. ಪರಿಹಾರ ನೀಡಬೇಕು.
3. ಉಮ್ಮರ್ ಖಾನ್ ಹತ್ಯೆಯ ನ್ಯಾಯಾಂಗ ತನಿಖೆ ನಡೆಸಬೇಕು.
4. ಸರಕಾರ ಜಾನುವಾರು ವ್ಯಾಪಾರಕ್ಕೆ ಅನುವು ಮಾಡಿಕೊಡಬೇಕು, ಗೋವಧೆ ನಿಷೇಧಿಸಿರುವ ಸರಕಾರ ಅನುತ್ಪಾದಕ ಹಸುಗಳನ್ನು ಮಾರುಕಟ್ಟೆ ಬೆಲೆ ಕೊಟ್ಟು ಖರೀದಿಸುವಂತೆ ಕಾನೂನನ್ನು ತಿದ್ದುಪಡಿ ಮಾಡಬೇಕು.
5. ತಕ್ಷಣವೇ ಗೋರಕ್ಷಕರಂತಹ ಕಾನೂನು ಬಾಹಿರ ಸಂಘಟನೆಗಳನ್ನು ನಿಷೇಧಿಸಬೇಕು.

ಎಐಕೆಎಸ್ ನಿಯೋಗದಲ್ಲಿ ಎಐಕೆಎಸ್ ಅಧ್ಯಕ್ಷ ಅಶೋಕ ಧವಳೆಯವರಲ್ಲದೆ ಜಂಟಿ ಕಾರ್ಯದರ್ಶಿ ವಿಜು ಕೃಷ್ಣನ್, ಹಣಕಾಸು ಕಾರ್ಯದರ್ಶಿ ಪಿ.ಕೃಷ್ಣಪ್ರಸಾದ್, ರಾಜಸ್ಥಾನ ಕಿಸಾನ್ ಸಭಾ ಕಾರ್ಯದರ್ಶಿ ಛಗನ್ ಚೌಧುರಿ, ಉಪಾಧ್ಯಕ್ಷ ಗುರುಚರಣ್ ಸಿಂಗ್ ಮೋರ್ಲ್, ಭರತ್‌ಪುರ್ ಜಿಲ್ಲಾ ಕಾರ್ಯದರ್ಶಿ ನಾಥಿಲಾಲ್ ಶರ್ಮ ಮತ್ತು ಅಧ್ಯಕ್ಷ ರಾಂಬೊ ಹವಾಲ್ದಾರ್ ಹಾಗೂ ಭರತಪುರದದ ಇಮಾಂ ಅಸ್ಸಾಮೊಹಮ್ಮದ್ ಇದ್ದರು.





ಓದಲೇಬೇಕಾದ ಪುಸ್ತಕ

"ಜಗತ್ತಿನ ಎಲ್ಲಾ ಕಾರ್ಮಿಕರು ಓದಲೇಬೇಕಾದ ಪುಸ್ತಕ ಇದು. ಎಲ್ಲಾ ಭಾಷೆಗಳಲ್ಲಿ ಅನುವಾದವಾಗಿ ಲಕ್ಷಾಂತರ ಪ್ರತಿಗಳು ಮುದ್ರಿಸಬೇಕಾದ ಪುಸ್ತಕ. ಕಾರ್ಮಿಕ ಕ್ರಾಂತಿ ಮತ್ತು ಕಾರ್ಮಿಕರ ಸರ್ವಾಧಿಕಾರ ಎಂದರೇನು ಎಂದು ತಿಳಿದುಕೊಳ್ಳಬೇಕೆಂದಿರುವ ಎಲ್ಲರೂ ಓದಲೇಬೇಕಾದ ಪುಸ್ತಕ" – *ವಿ.ಐ. ಲೆನಿನ್*

ಸ್ವಲ್ಪ ನಿಲ್ಲಿ.. ಈತ ಜಾನ್ ರೀಡ್

ಡಾ. ಬಿ. ಆರ್. ಮಂಜುನಾಥ

ರಶ್ಯನ್ ಕ್ರಾಂತಿಯ ಬಗ್ಗೆ ಅಮೆರಿಕದ ಸೋಶಲಿಸ್ಟ್ ಲೇಖಕ ಜಾನ್ ರೀಡ್ ಬರೆದ "ಜಗವ ನಡುಗಿಸಿದ ಆ ಹತ್ತು ದಿನಗಳು" (ಟೆನ್ ಡೇಸ್ ದಟ್ ಶುಕ್ ದಿ ವರ್ಲ್ಡ್) ಲೆನಿನ್ ಅವರಿಂದಲೇ ಮೆಚ್ಚುಗೆ ಪಡೆದ ಪ್ರಸಿದ್ಧ ಪುಸ್ತಕ. ಇದು ರಶ್ಯನ್ ಕ್ರಾಂತಿಯ ಪ್ರತ್ಯಕ್ಷದರ್ಶಿ ವರದಿಯಾಗಿದ್ದು, ಬಹಳ ವಿವರವಾಗಿರುವ ದೀರ್ಘ ಪುಸ್ತಕ. ನವಕರ್ನಾಟಕ ರಶ್ಯನ್ ಕ್ರಾಂತಿಯ ಶತಮಾನೋತ್ಸವದಲ್ಲಿ ಇನ್ನೂ ಹೆಚ್ಚು ಓದಿಸಿಕೊಂಡು ಹೋಗುವ ಸಂಗ್ರಹ ರೂಪದಲ್ಲಿ ಅದನ್ನು ಪ್ರಕಟಿಸಿದೆ. ಪೂರ್ಣ ಅನುವಾದ ಹಿಂದೆ ಪ್ರಕಟವಾಗಿತ್ತು. ಕನ್ನಡಕ್ಕೆ ಸಮರ್ಥವಾಗಿ ಸುಂದರವಾಗಿ ಅನುವಾದಿಸಿದ ಡಾ. ಬಿ. ಆರ್. ಮಂಜುನಾಥ ಅವರ ಪುಸ್ತಕದ ಮತ್ತು ಲೇಖಕರ ಬಗ್ಗೆ ಬರೆದ ಮುನ್ನುಡಿಯಿಂದ ಆಯ್ದ ಭಾಗಗಳು ಇಲ್ಲಿದೆ :

ಹೌದು, ನೀವು ಪುಸ್ತಕವನ್ನು ಓದಲು ಆರಂಭಿಸುವ ಮುನ್ನ ಇದರ ಲೇಖಕನ ಬಗ್ಗೆ ತಿಳಿದುಕೊಂಡು ನಂತರ ಮುಂದುವರೆಯುವುದು ಒಳ್ಳೆಯದು.

ತನ್ನ ಬದುಕೇ ಬರೆಹವಾದ ಅಸಾಧಾರಣ ವ್ಯಕ್ತಿ ಈತ. ಬರೆದಂತೆಯೇ ಬದುಕಿದವನು. ಎಲ್ಲೋ ದೂರದಲ್ಲಿ ಬೆಚ್ಚಗೆ ಕುಳಿತು ತಿಂದುಂಡು ಆರಾಮವಾಗಿದ್ದು, ವ್ಯವಸ್ಥೆಯಿಂದ ಬೇಕಾದದ್ದನ್ನೆಲ್ಲಾ ಹೀರಿಕೊಳ್ಳುತ್ತಾ ಅದೇ ಸಮಯದಲ್ಲಿ ದುಡ್ಡಿಗೋ ಹೆಸರು ಮಾಡಿಕೊಳ್ಳಲೋ ಕ್ರಾಂತಿಯ ಬಗ್ಗೆ, ಯುದ್ಧದ ಬಗ್ಗೆ ಬರೆದವನಲ್ಲ ರೀಡ್. ಉಪವಾಸ, ಬಡತನ, ವ್ಯವಸ್ಥೆಯ ಕ್ರೌರ್ಯ ಎಲ್ಲವನ್ನೂ ಅನುಭವಿಸಿದವನು. ತನ್ನ ನಂಬಿಕೆಗಳಿಗಾಗಿ ಬಹಳಷ್ಟು ಕಷ್ಟ ಅನುಭವಿಸಿದವನು. ಕ್ರಾಂತಿಯಲ್ಲೂ, ಯುದ್ಧದಲ್ಲೂ ನೇರವಾಗಿ ಭಾಗವಹಿಸಿದವನು.

ಅವನು ಎಂದೂ ಒಣಸಿದ್ಧಾಂತಿಯಾಗಲಿಲ್ಲ. ಬದುಕನ್ನು ನೋಡುತ್ತಾ, ಪರೀಕ್ಷಿಸುತ್ತಾ, ಸಮಾಜದಲ್ಲಿ ಮಡುಗಟ್ಟಿದ ವೇದನೆಯ ಬೇರುಗಳನ್ನು ಹುಡುಕಲು ಯತ್ನಿಸಿದ. ನ್ಯೂಯಾರ್ಕ್‌ನಲ್ಲಿ ಅವನು ಮೋಟರ್ ಕಾರುಗಳನ್ನು ನೋಡಿದ, ಚಿಂದಿ ಬಟ್ಟೆಯುಟ್ಟು, ಫುಟ್‌ಪಾತ್‌ಗಳಲ್ಲಿ ವಾಸವಿದ್ದವರನ್ನೂ ನೋಡಿದ. ಸೂಳೆಯರನ್ನು, ಭಿಕ್ಷುಕರನ್ನು ಸಮೀಪದಿಂದ ವೀಕ್ಷಿಸುತ್ತಾ ತಾನು ಅಲೆಮಾರಿಯಾಗಿ ಅಲೆದ. ಅವನು ಬಂಡವಾಳಗಾರರನ್ನು, ಪ್ರತಿಷ್ಠಾಪೂಜಕರನ್ನು, ಮಧ್ಯಮವರ್ಗದ ಮೌಲ್ಯಗಳನ್ನು ಗೇಲಿ ಮಾಡುತ್ತಲೇ ಹೋದ.

ಅವು ಅಮೆರಿಕಾದಲ್ಲಿ ಸಮಾಜವಾದ ಜನಪ್ರಿಯವಾಗಿದ್ದ ದಿನಗಳು. ಎಷ್ಟರಮಟ್ಟಿಗೆ ಎಂದರೆ 'ಅಪೀಲ್ ಟು ರೀಸನ್' ಎಂಬ ವಾರ ಪತ್ರಿಕೆಗೆ ಐದು ಲಕ್ಷ ಜನ ಚಂದಾದಾರರಿದ್ದರು. 'ದಿ ಮಾಸಸ್' ಎಂಬುದು ಇನ್ನೊಂದು ಉದಯೋನ್ಮುಖ ಪತ್ರಿಕೆ. ಮಾರ್ಕ್ಸ್‌ವಾದದ ಗಂಭೀರ ಅನುಯಾಯಿಗಳು ಪತ್ರಿಕೆಯ ಜೊತೆಗಿದ್ದರು.... ಅಲ್ಲಿ ರೀಡ್‌ನಿಗೆ ತನ್ನ ಅನಿಸಿಕೆಗಳ ಮುಕ್ತ ಅಭಿವ್ಯಕ್ತಿಗೆ ಅವಕಾಶ ಸಿಕ್ಕಿತು.

ಸ್ಟುವರ್ಟ್ ಹೇಳುತ್ತಾನೆ, "ರೀಡ್ ವೇಗವಾಗಿ ಕಲಿತದ್ದು ಯುದ್ಧದ ನಡುವೆ, ಅದು ರಾಷ್ಟ್ರಗಳ ಮಧ್ಯದ ಯುದ್ಧವಿರಬಹುದು, ವರ್ಗಗಳ ನಡುವಿನ ಸಮರವಿರಬಹುದು, ಅವನ ಅತ್ಯುತ್ತಮ ಬರೆವಣಿಗೆ ಬಂದದ್ದು ಯುದ್ಧದ ಕೋಲಾಹಲದ ನಡುವೆ... ಅವನಿಗೆ ತಟಸ್ಥವಾಗಿರುವುದು ಸಾಧ್ಯವಿರಲಿಲ್ಲ. ಅವನಿಗೆ ಸರಿ ಅನಿಸಿದ್ದರ ಪಕ್ಷಪಾತಿಯಾಗುತ್ತಿದ್ದ."

1914ರಲ್ಲಿ ಮೊದಲನೆಯ ಮಹಾಯುದ್ಧ ಆರಂಭವಾಯಿತು. ಯುದ್ಧದ ವರದಿಗಾರನಾಗಿ ಅವನು ಯುರೋಪಿನಲ್ಲಿದ್ದ ಪಶ್ಚಿಮ ರಣಾಂಗಣವನ್ನು ತಲುಪಿದ. ಅಲ್ಲಿ ಅವನು ಕಂಡ ಸತ್ಯವೆಂದರೆ ಯುದ್ಧದಲ್ಲಿ ಶ್ರೀಮಂತ ವರ್ಗದವರಿಗೆ ಆಸಕ್ತಿಯಿತ್ತು. ಆದರೆ ಜನಸಾಮಾನ್ಯರು ಯುದ್ಧದಿಂದ ಸುಸ್ತಾಗಿದ್ದರು. ಅವರಿಗೆ ಇನ್ನೊಂದು ದೇಶವನ್ನು, ಅವರ ಜನರನ್ನು, ನಾವೇಕೆ ದ್ವೇಷಿಸಬೇಕು ಎಂಬುದರ ಬಗ್ಗೆ ಯಾವ ಸ್ಪಷ್ಟತೆಯೂ ಇರಲಿಲ್ಲ. ಇಡಿಯ ಯುರೋಪು ವಿನಾಶದ ಹಾದಿಯಲ್ಲಿತ್ತು. ರೀಡ್ ಅನೇಕ ದೇಶಗಳನ್ನು ಸುತ್ತಿದ. ಸರ್ಬಿಯಾದಲ್ಲಿ ಹಾದು ಹೋಗುವಾಗ ಅವನು ಹೆಣಗಳು ರಾಶಿ ಬಿದ್ದಿದ್ದ ಜಾಗವೊಂದರಲ್ಲಿ ನಡೆಯಬೇಕಾಯಿತು. ಕೊಳೆತ ಹೆಣಗಳು ಕೆಸರಿನೊಂದಿಗೆ ಬೆರೆತು ಹೋಗಿದ್ದವು. ಕಾಲಿಟ್ಟರೆ ಕಚಕ್ ಪಿಚಕ್ ಎನ್ನುವ ಕೆಸರಿನಲ್ಲಿ ಬೂಟುಗಳ ಕೆಳಗೆ ಮೂಳೆ ಮುರಿಯುವ ಸದ್ದು. ಬೀಭತ್ಸವಾದ ದೃಶ್ಯ. ರೀಡ್ ಇದ್ದದ್ದನ್ನು ಇದ್ದ ಹಾಗೆಯೇ ವರದಿ ಮಾಡಿದ.


ಇಂಥ ಹುಚ್ಚು ಯುದ್ಧವನ್ನು ಅಮೆರಿಕನ್ ಕಾರ್ಮಿಕ ವರ್ಗವೂ ವಿರೋಧಿಸುತ್ತಿಲ್ಲವಲ್ಲ ಎಂದು ಅವನಿಗೆ ನೋವಾಯಿತು. ಅವನ ನಂಬಿಕೆ, ವಿಶ್ವಾಸಗಳು ಅಲುಗಾಡುತ್ತಿದ್ದ ಕ್ಷಣ ಅದು. ಯಾರಾದರೂ ಯುದ್ಧವನ್ನು ವಿರೋಧಿಸಬಾರದೇ ಎಂದು ಅವನು ತಹತಹಿಸುತ್ತಿದ್ದ. ಆಗ ಅವನಿಗೆ ಜರ್ಮನಿಯಿಂದ ಕಮ್ಯುನಿಸ್ಟ್ ನಾಯಕ ಕಾರ್ಲ್ ಲೀಬ್‌ನೆಕ್ಟ್‌ನ ದನಿ ತೇಲಿ ಬಂತು. ಆತ ಯುದ್ಧದಲ್ಲಿನ ಲಾಭದ ಹಿತಾಸಕ್ತಿಗಳನ್ನೂ ಸರಕಾರಕ್ಕೆ ಕೊಂಚವೂ ಅಂಜದೆ ಬಯಲಿಗೆಳೆದಿದ್ದ. ಅದೇ ಸಮಯದಲ್ಲಿ ಲೆನಿನ್, ಇದು ಸಾಮ್ರಾಜ್ಯಶಾಹಿಗಳ ಯುದ್ಧ, ಕಾರ್ಮಿಕರು ತಮ್ಮ ದೇಶಗಳ ಬಂಡವಾಳಗಾರರನ್ನು ಬೆಂಬಲಿಸದೆ ಯುದ್ಧ ನಿಲ್ಲಿಸಲು ಒತ್ತಡ ಹೇರಬೇಕು ಎಂದದ್ದು ಅವನನ್ನು ತುಂಬ ಆಕರ್ಷಿಸಿತು. 'ಆಳುವ ವರ್ಗಗಳು ವಿನಾಶಕಾರಿ ಯುದ್ಧದಲ್ಲಿ ಮುಳುಗಿರಲಿ, ಕಾರ್ಮಿಕ ವರ್ಗ ದೇಶದೊಳಗೆ ಕ್ರಾಂತಿಯನ್ನು ನೆರವೇರಿಸಲಿ' ಎಂಬ ಕರೆ ಜನಪ್ರಿಯವಾಗುತ್ತಿತ್ತು.

ಏತನ್ಮಧ್ಯೆ 1917ರ ಮಾರ್ಚ್‌ನಲ್ಲಿ ರಷ್ಯಾ ದೇಶದ ಒಳಗೆ ತ್ಸಾರ್‌ನ ವಿರುದ್ಧದ ಕ್ರಾಂತಿ ಘಟಿಸಿತು. ರೀಡ್‌ಗೆ ಅದು ಒಳ್ಳೆಯದು ಎನಿಸಿತು. ಆದರೆ ಅದರಿಂದ ತುಂಬ ದೊಡ್ಡ ಬದಲಾವಣೆಯೇನೂ ಆಗುವುದಿಲ್ಲ. ಯುದ್ಧವೂ ನಿಲ್ಲುವುದಿಲ್ಲ ಎಂಬುದು ಅವನ ಭಾವನೆ. ತ್ಸಾರ್ ಹೋಗುತ್ತಾನೆ, ಆ ಜಾಗದಲ್ಲಿ ಎಲ್ಲಾ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿರುವಂಥ ಬಂಡವಾಳಶಾಹಿ ಮಾದರಿಯ ಜನತಂತ್ರ ಬರುತ್ತದೆ ಎಂದು ಅವನು ಉಪೇಕ್ಷೆಯಿಂದಲೇ ಇದ್ದ. ಆದರೆ ರಷ್ಯಾ ನಿಶ್ಶಬ್ದವಾಗಿ, ಶಾಂತವಾಗಿ, ಭದ್ರವಾಗಿ ಕೂರಲಿಲ್ಲ. ಅಲ್ಲಿ ಏನೋ ಒಳಕುದಿಯೊಂದು ಮುಂದುವರೆದಿತ್ತು. ಕ್ರಮೇಣ ಮೆಲ್ಲಗಿದ್ದ ಜನತೆಯ ಧ್ವನಿ ಗಂಭೀರ ಗುಡುಗಿನ ಘರ್ಜನೆಯಾಗತೊಡಗಿತು. ಈಗ ಜಾನ್ ರೀಡ್‌ನ ಅಶಾಂತ ಮನಸ್ಸು ಉತ್ತೇಜಿತವಾಯಿತು. ವಿಶಾಲ ಜನಸಮುದಾಯ ಎದ್ದೇಳುತ್ತಿದೆ ಎಂದು ಅವನಿಗನ್ನಿಸಿತು. ಅವನು ಪೆತ್ರೋಗ್ರಾಡ್‌ನತ್ತ ಧಾವಿಸಿದ.

ಅವನು 1917ರ ಸೆಪ್ಟೆಂಬರ್‌ನಲ್ಲಿ ಅಲ್ಲಿಗೆ ಮುಟ್ಟಿದಾಗ ಪೆತ್ರೋಗ್ರಾಡ್ ಉದ್ವಿಗ್ನವಾಗಿತ್ತು. ಜನರಲ್ ಕೊರ್ನಿಲೊವ್ ಎಂಬಾತ ಎಳೆಯ ಜನತಂತ್ರವನ್ನು ಕತ್ತು ಹಿಸುಕಿ ಸಾಯಿಸಲು ದಂಡೆತ್ತಿ ಬಂದು ವಿಫಲನಾಗಿದ್ದ. ಅದಕ್ಕೆ ಮುಖ್ಯ ಕಾರಣ ಲೆನಿನ್ ಪೆತ್ರೋಗ್ರಾಡ್‌ನ ಸೈನಿಕರನ್ನೂ, ಕಾರ್ಮಿಕರನ್ನೂ ಸಂಘಟಿಸಿದ್ದ ರೀತಿ. ಹಿಂದೆಯೂ ರೀಡ್ ರಾಜಧಾನಿಯನ್ನು ನೋಡಿದ್ದ. ಆದರೆ ಅದು ಈಗ ಪೂರ್ತಿ ಬದಲಾಗಿತ್ತು. ಈ ಮೊದಲು ಯುದ್ಧದಿಂದ ನೊಂದು ಸಪ್ಪಗಿದ್ದ ಕಾರ್ಮಿಕರು, ಜನಸಾಮಾನ್ಯರು ಈಗ ಲವಲವಿಕೆಯಿಂದ ಕುಣಿಯುವ ಉತ್ಸಾಹದಲ್ಲಿದ್ದರು. ಸೊಕ್ಕಿ ಖುಷಿಯಾಗಿದ್ದ ಶ್ರೀಮಂತರು ಈಗ ಕೋಪದಲ್ಲಿದ್ದರು, ಖಿನ್ನರಾಗಿದ್ದರು, ಸದ್ದಿಲ್ಲದೆ ಹಲ್ಲು ಕಡಿಯುತ್ತಿದ್ದರು. ಇದನ್ನೆಲ್ಲಾ ಅವನು ಮಿತ್ರನಿಗೆ ಬರೆದ ಕಾಗದದಲ್ಲಿ ವರ್ಣಿಸಿದ.

ಜಾನ್ ರೀಡ್ ಯಾವುದೋ ಹೋಟೆಲ್ ರೂಮಿನಲ್ಲಿ ಕುಳಿತು ವರದಿ ತರಿಸಿಕೊಳ್ಳಲಿಲ್ಲ. ಅವನು ರಸ್ತೆಯಲ್ಲಿದ್ದ, ಯುದ್ಧರಂಗದಲ್ಲಿದ್ದ, ಕಂದಕಗಳಲ್ಲಿ ಇಳಿದ, ಕಡೆಯ ಪಕ್ಷ ಮೂರು – ನಾಲ್ಕು ಬಾರಿ ಮೃತ್ಯುವಿನ ಬಾಯಿಂದ ತಪ್ಪಿಸಿಕೊಂಡು ಬಂದ. ಹೋಟೆಲ್‌ಗಳಲ್ಲಿ, ಬೀದಿಗಳಲ್ಲಿ, ಕಛೇರಿಗಳಲ್ಲಿ, ಸಮ್ಮೇಳನಗಳಲ್ಲಿ ಕುಳಿತು ನೆಲಕ್ಕೆ ಕಿವಿಯಿಟ್ಟು ಕೇಳಿಸಿಕೊಂಡ. ಕರಪತ್ರಗಳನ್ನು, ಭಿತ್ತಿಪತ್ರಗಳನ್ನು, ವೃತ್ತಪತ್ರಿಕೆಗಳ ಹೊರೆಯನ್ನು ಸಂಗ್ರಹಿಸಿದ. ನಿಂತಲ್ಲಿ ಕುಳಿತಲ್ಲಿ ಟಿಪ್ಪಣಿ ಪುಸ್ತಕಗಳ ತುಂಬ ಗೀಚಿದ. ಲೆನಿನ್, ಟ್ರಾಟ್‌ಸ್ಕಿ, ಕಮೆನೆವ್ ಇನ್ನೂ ಅನೇಕ ನಾಯಕರನ್ನು, ದೇಶ ವಿದೇಶಗಳ ಬೂರ್ಶ್ವಾ ರಾಜತಂತ್ರಜ್ಞರನ್ನು ಸಂಪರ್ಕಿಸಿದ.

ಇದೆಲ್ಲದರ ಮಧ್ಯೆ ಅವನು ತಾನೇ ಸ್ವತಃ ಬದಲಾಗುತ್ತ ಹೋದ. ಕಾರ್ಮಿಕರು – ರೈತರೊಂದಿಗೆ ಒಂದಾಗಿಬಿಟ್ಟಿದ್ದ. ಹಿಂದೆ ಅಮೆರಿಕಾದಲ್ಲಿ, ಮೆಕ್ಸಿಕೊದಲ್ಲಿ ಅವನು ಕಲಿತದ್ದಕ್ಕಿಂತ ಇಲ್ಲಿನ ಅನುಭವ ವಿಭಿನ್ನವಾಗಿತ್ತು. ಪ್ರತಿ ನಿಮಿಷವನ್ನೂ



ವ್ಯರ್ಥಮಾಡದೆ ಅವನು ಓಡಾಡುತ್ತಾ ಅನುಭವಗಳನ್ನು ಹೀರಿಕೊಂಡ. ಇತಿಹಾಸದ ಒಂದು ಅನನ್ಯ ಕ್ಷಣದಲ್ಲಿ ನಾನು ಉಸಿರಾಡುತ್ತಿದ್ದೇನೆ ಎಂಬುದು ಅವನ ಭಾವನೆಯಾಗಿತ್ತು. ಆದ್ದರಿಂದಲೇ ಅವನಿಗೆ ಊಟ, ನಿದ್ರೆ, ವಿಶ್ರಾಂತಿ ಎಲ್ಲಾ ಸಮಯದ ಪೋಲು ಅನಿಸಿಬಿಡುತ್ತಿತ್ತು. ಇಂಥ ವಿಷಯ ಸಂಗ್ರಹಣೆಯಿಂದಲೇ ಮುಂದೆ ಅವನು ಅಮೆರಿಕಾದಲ್ಲಿ ಕುಳಿತು 'ಜಗವ ನಡುಗಿಸಿದ ಆ ಹತ್ತುದಿನ'ವನ್ನು ನೇಯುತ್ತ ಹೋದ, ಯಾವ ಸ್ನೇಹಿತರ ಕೈಗೂ ಸಿಗದೆ 'ಭೂಗತ'ನಾಗಿ ಬರೆಯುವ ಜ್ವರ ಬಂದವನಂತೆ ದಿನರಾತ್ರಿ ಕೂತು ಬರೆದ ಅಪೂರ್ವ ಕೃತಿ ಇದು. ಇದನ್ನು ಬರೆದು ಮುಗಿಸಿದಾಗ ಕೊಳಕನಾಗಿ, ಕೃಶನಾಗಿ, ವ್ಯಾಧಿಗ್ರಸ್ತನಂತೆ ಕಂಡಿದ್ದ ಎಂದು ಅವನ ಗೆಳೆಯ ಈಸ್ಟ್‌ಮನ್ ಹೇಳಿದ್ದಾನೆ.

ಸ್ವತಃ ಲೆನಿನ್ ಹೇಳುವಂತೆ ಇದೊಂದು ಅದ್ಭುತವಾದ ಪುಸ್ತಕ. ಭಾಷೆ ಸರಿಯಾಗಿ ಬರದಿದ್ದ ಒಬ್ಬ ಪತ್ರಕರ್ತ, ಈ ದೇಶದ ಆಚಾರ–ವಿಚಾರ, ರಾಜಕೀಯ ಹಿನ್ನೆಲೆಗಳ ಪರಿಚಯವಿಲ್ಲದಿದ್ದ ಒಬ್ಬ ತರುಣ ಎಷ್ಟು ಚೆನ್ನಾಗಿ ಕ್ರಾಂತಿಯ ವಾಸ್ತವವನ್ನು ಗ್ರಹಿಸಿದನಲ್ಲ ! ಇದು ಅಚ್ಚರಿಯ ವಿಷಯ.

ಆದರೆ ಅವನಂಥ ಸಮರಶೀಲ ವ್ಯಕ್ತಿಗೆ ಇದು ಅಸಹಜವಲ್ಲ. ಅವನು ಎಲ್ಲೇ ಹುಟ್ಟಿ ಬೆಳೆದಿರಲಿ ಅವನು ಹೋದಲ್ಲೆಲ್ಲಾ ಕಾರ್ಮಿಕರ, ಶೋಷಿತರ ನಾಡಿಬಡಿತವನ್ನು ಹಿಡಿಯಬಲ್ಲ ಸಾಮರ್ಥ್ಯವನ್ನು ಹೊಂದಿದ್ದ. ಘಂಟೆಗಟ್ಟಲೆ ಬೂರ್ಶ್ವಾ ರಾಜಕಾರಣಿಗಳ ಜೊತೆ ಚರ್ಚಿಸಿದ ಮೇಲೂ ಅವನಿಗೆ ಅವರ ವರದಿಯಲ್ಲಿ ಎಷ್ಟು ಬಡಾಯಿ, ಎಷ್ಟು ಉತ್ಪ್ರೇಕ್ಷೆ, ಎಷ್ಟು ಜನವಿರೋಧಿ ಚಿತ್ರಣವಿದೆ ಎಂಬುದು ಗೊತ್ತಾಗುತ್ತಿತ್ತು. ಸೂಕ್ಷ್ಮಗ್ರಾಹಿಯಾದ ಅವನು ಹದ್ದಿನ ಕಣ್ಣಿನಿಂದ ಕ್ರಾಂತಿಯನ್ನು ಗಮನಿಸಿದ್ದ.

ಕಂತೆಕಂತೆ ದಾಖಲೆಗಳನ್ನು ಹೊತ್ತು ತಾಯ್ನಾಡಿಗೆ ಹೋದ ರೀಡ್ ಅಲ್ಲಿ ಕೂತು ಪುಸ್ತಕ ಬರೆದ. ಅದು 1919ರಲ್ಲಿ ಪ್ರಕಟವಾಯಿತು. ರಷ್ಯನ್ ಆವೃತ್ತಿ 1923ರಲ್ಲಿ ಹೊರಬಂತು. ಅಮೆರಿಕಾದಲ್ಲಿ ಮತ್ತೆ ಪೊಲೀಸರ ಕಾಟ, ಹಸ್ತಪ್ರತಿ ಮತ್ತು ದಾಖಲೆಗಳು ಪೊಲೀಸರ ವಶ, ಆದರೆ ರೀಡ್‌ನನ್ನು ಯಾವುದೂ ಧೃತಿಗೆಡಿಸಲಿಲ್ಲ.

ಸೋವಿಯತ್ ಒಕ್ಕೂಟದ ಪರವಾಗಿ ಮಾತನಾಡಿದ್ದಕ್ಕೆ ಪೊಲೀಸರು ಅವನನ್ನು ಬಡಿದು ಚಚ್ಚಿದರು. ರಾಜದ್ರೋಹದ ಆಪಾದನೆ ಹೊರಿಸಿದರು. ಆದರೂ ಅವನು ಹತ್ತಾರು ನಗರಗಳಲ್ಲಿ ಭಾಷಣ ಮಾಡಿದ. ಫಿಲಡೆಲ್ಫಿಯಾದಲ್ಲಿ ಅವನು ಮಾತನಾಡಬೇಕಾಗಿದ್ದ ಸಭಾಂಗಣಕ್ಕೆ ಬೀಗ ಜಡಿದರು. ಅವನು ಹೊರಗೆ ಸಾಬೂನು ತಂದಿದ್ದ ಪೆಟ್ಟಿಗೆಯ ಮೇಲೆ ನಿಂತು ಸಾವಿರಾರು ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ.

ಮತ್ತೆ ರೀಡ್ ಸಮಾಜವಾದದ ನಿರ್ಮಾಣವನ್ನು ನೋಡಿ ವರದಿ ಮಾಡಲು ಸೋವಿಯತ್ ಯೂನಿಯನ್‌ಗೆ ವಾಪಸಾದ. ಅವನ ಹೆಂಡತಿ ಲೂಯಿ ಬ್ರಾಂಟ್ ಜೊತೆಯಲ್ಲಿದ್ದಳು. ಆಕೆಯೂ ಹೋರಾಟ ನಿರತ ಪತ್ರಕರ್ತೆ. ಸಾಮ್ರಾಜ್ಯಶಾಹಿಗಳು ಹೊಸ ಸಮಾಜವಾದಿ ರಾಷ್ಟ್ರದ ಮೇಲೆ ಯುದ್ಧ ಸಾರಿದ್ದರು. ಆರ್ಥಿಕ ದಿಗ್ಬಂಧನವಿತ್ತು. ಆದರೆ ಜನರ ಉತ್ಸಾಹ, ಜೀವಂತಿಕೆ, ಹೋರಾಟದ ಮನೋಭಾವ ಅರಳುತ್ತಾ ಹೋಗುತ್ತಿತ್ತು. ಇದನ್ನೆಲ್ಲಾ ನೋಡಿ ಸಂಭ್ರಮಿಸುತ್ತಾ, ಹಗಲಿರುಳು ದುಡಿಯುತ್ತಿದ್ದಾಗ ಅವನಿಗೆ ಟೈಫಾಯ್ಡ್ ಬಂತು. ದಿಗ್ಬಂಧನದಿಂದಾಗಿ ಔಷಧಿಗಳು ಸಿಗಲಿಲ್ಲ. 1920ರ ಅಕ್ಟೋಬರ್ 17ರಂದು ತನ್ನ ಮೂವತ್ತಮೂರನೆಯ ವಯಸ್ಸಿನಲ್ಲಿ, ಏರು ಯೌವನದಲ್ಲಿ ಈ ಅಮೆರಿಕನ್ ಕ್ರಾಂತಿಕಾರಿ ತೀರಿಕೊಂಡ.

'ಜಗವ ನಡುಗಿಸಿದ ಆ ಹತ್ತುದಿನ' ಪುಸ್ತಕದಲ್ಲಿ ರೀಡ್, ಕ್ರೆಮ್ಲಿನ್ ಗೋಡೆಯ ಬಳಿ ಕ್ರಾಂತಿಯ ಹುತಾತ್ಮರನ್ನು ಮಣ್ಣು ಮಾಡಿದ ದೃಶ್ಯವನ್ನು ಹೃದಯಂಗಮವಾಗಿ ವರ್ಣಿಸಿದ್ದಾನೆ. ಕೇವಲ ಮೂರು ವರ್ಷದೊಳಗೆ ತಾನೇ ಅಲ್ಲಿ ಮಣ್ಣಾಗಬಹುದು ಎಂಬುದು ಅವನಿಗೆ ತಿಳಿದಿರಲಿಲ್ಲ. ಅದು ರಷ್ಯನ್ನರು ತಮ್ಮ ಧೀರರಿಗೆ, ನಾಯಕರಿಗೆ ಮೀಸಲಿಟ್ಟ ಜಾಗ. ಅಲ್ಲಿ ಮಣ್ಣು ಸೇರುವುದು ಅಪಾರ ಗೌರವದ ಸಂಕೇತ. ಅಲ್ಲೇ ಜಾನ್ ರೀಡ್ ಚಿರನಿದ್ರೆಯಲ್ಲಿದ್ದಾನೆ. ರಷ್ಯನ್ ಕಾರ್ಮಿಕ ವರ್ಗ ಅತ್ಯಂತ ಪ್ರೀತಿಯಿಂದ ತನ್ನ ದತ್ತು ಪುತ್ರನಿಗೆ ಅಲ್ಲಿ ಜಾಗ ಮಾಡಿಕೊಟ್ಟಿದೆ.

ಜಾನ್ ಈಗಲೂ ಅಲ್ಲೇ ಇದ್ದಾನೆ. ಆದರೆ ಇಂದು ಅಲ್ಲಿ ಸಮಾಜವಾದವಿಲ್ಲ. ಈಗ ಜಾನ್ ಬದುಕಿದ್ದರೆ ಹೇಳಿರುತ್ತಿದ್ದ, 'ರಷ್ಯನ್ ಬಂಡವಳಿಗರು ತಾತ್ಕಾಲಿಕವಾಗಿ ಗೆದ್ದಿದ್ದಾರೆ. ಮತ್ತೆ ನಮ್ಮ ದುಡಿಯುವ ಜನ ಎದ್ದು ಬರುತ್ತಾರೆ. ನವೆಂಬರ್ ಕ್ರಾಂತಿಯ ಕೀರ್ತಿಯನ್ನು ಎತ್ತಿ ಹಿಡಿಯುತ್ತಾರೆ. ಮತ್ತೆ ರಷ್ಯಾದ ಅದಮ್ಯ ಕ್ರಾಂತಿಕಾರಿ ಸ್ಫೂರ್ತಿ ಜಗತ್ತಿಗೆ ಮಾದರಿಯಾಗುತ್ತದೆ' ಎಂದು.

ಮಹಾನ್ ಕ್ರಾಂತಿಕಾರಿ, ಅಂತರರಾಷ್ಟ್ರೀಯವಾದಿ,
ನಿರ್ಭೀತ ಪತ್ರಕರ್ತ
ಜಾನ್ ರೀಡ್‌ಗೆ ಕ್ರಾಂತಿಕಾರಿ ನಮನಗಳು.

JANASHAKTHI KANNADA VARA PATRIKE November 27- December 03, 2017 Price: Rs. 10/- Date of Publication: 24 November 2017 RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283



ಸೌಹಾರ್ದತೆಗಾಗಿ ಕರ್ನಾಟಕ – ಜನವರಿ 30 ರ ಮಾನವ ಸರಪಣಿ ಯಶಸ್ವಿಗೊಳಿಸಲು ನಿರ್ಧರಿಸಿದ

ಕೊಪ್ಪಳ ಜಿಲ್ಲಾ 4ನೇ ಸಮ್ಮೇಳನ

2018 ಜನವರಿ 30 ಹುತಾತ್ಮರ ದಿನದಂದು ನಾಡಿನ ಪ್ರಗತಿಪರ ಮಠಾಧೀಶರು, ಧರ್ಮಗುರುಗಳು, ನಿವೃತ್ತ ನ್ಯಾಯಮೂರ್ತಿಗಳು, ನ್ಯಾಯವಾದಿಗಳು, ಶಾಲೆ ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು, ರೈತ, ಕಾರ್ಮಿಕ, ದಲಿತ, ಮಹಿಳಾ, ಯುವಜನ ಸಂಘಟನೆಗಳು, ಒಂದಾಗಿ ಸೌಹಾರ್ದತೆಗಾಗಿ ನಡೆಸಲು ಉದ್ದೇಶಿಸಿರುವ 'ಮಾನವ ಸರಪಣಿ' ಕಾರ್ಯಕ್ರಮವನ್ನು ಜಿಲ್ಲೆಯಲ್ಲಿ ಯಶಸ್ವಿಗೊಳಿಸಲು ನಿರ್ಧರಿಸುವುದರೊಂದಿಗೆ ಸಿಪಿಐ(ಎಂ) ಕೊಪ್ಪಳ ಜಿಲ್ಲಾ – 4ನೇ ಸಮ್ಮೇಳನವು ಯಶಸ್ವಿಯಾಗಿ ಮುಕ್ತಾಯವಾಯಿತು. ಕೊಪ್ಪಳ ನಗರದ ಶಾದಿ ಮಹಲ್‌ನಲ್ಲಿ ರೂಪಿಸಲಾಗಿದ್ದ 'ಸಂಗಾತಿ ಎಸ್. ಪ್ರಸನ್ನ ಕುಮಾರ್ ಸಭಾಂಗಣ' ದಲ್ಲಿ ನವೆಂಬರ್ 11 ಮತ್ತು 12 ರಂದು ನಡೆದ ಸಮ್ಮೇಳನಕ್ಕೆ ಹಿರಿಯರಾದ ಸಂಗಾತಿ ಆರ್.ಕೆ. ದೇಸಾಯಿ ಅವರು ಪಕ್ಷದ ಧ್ವಜಾರೋಹಣ ಮಾಡುವುದರೊಂದಿಗೆ ಸಮ್ಮೇಳನಕ್ಕೆ ಚಾಲನೆ ನೀಡಿದರು.

ಹುತಾತ್ಮರ ಸ್ತಂಭಕ್ಕೆ ಪುಷ್ಪಾಂಜಲಿ ಸಲ್ಲಿಸಿದ ಬಳಿಕ ನಡೆದ ಬಹಿರಂಗ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಸಂಗಾತಿ ಯು. ಬಸವರಾಜ ಅವರು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜಾರಿಗೊಳಿಸುತ್ತಿರುವ ದಿವಾಳಿಕೋರ ಆರ್ಥಿಕ ಸುಧಾರಣಾ ಕ್ರಮಗಳನ್ನು ಹಾಗೂ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಪಕ್ಷವನ್ನು ತುರ್ತಾಗಿ ಬಲಪಡಿಸುತ್ತಾ ವಿಸ್ತರಿಸುತ್ತಾ ಮುನ್ನಡೆಯ ಬೇಕೆಂದು ಕರೆ ನೀಡಿದರು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿಯ ಇನ್ನೊಬ್ಬ ಸದಸ್ಯರಾದ ಸಂಗಾತಿ ನಿತ್ಯಾನಂದಸ್ವಾಮಿ ಅವರು ಮಾತನಾಡುತ್ತಾ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ದಲಿತರ, ಅಲ್ಪಸಂಖ್ಯಾತರ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯಗಳನ್ನು ವಿರೋಧಿಸಲು ಜೀವದ ಹಂಗು ತೊರೆದು ಪಕ್ಷದ ಕಾರ್ಯಕರ್ತರು ಮುಂದಾಗಬೇಕೆಂದು ಮನವಿ ಮಾಡಿದರು. ಜಿಲ್ಲಾ ಕಾರ್ಯದರ್ಶಿ ಸಂಗಾತಿ ಜಿ. ನಾಗರಾಜ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಸಂಗಾತಿ ಕಾಸಿಂ ಸಾಬ್ ಸರ್ದಾರ್ ಎಲ್ಲರನ್ನು ಸ್ವಾಗತಿಸಿದರು. ಕೊನೆಯಲ್ಲಿ ಸುಂಕಪ್ಪ ಅವರು ಎಲ್ಲರನ್ನು ವಂದಿಸಿದರು. ಗ್ರಾಮೀಣ ಕೆಲಸಗಾರರು ನೂರಾರು ಸಂಖ್ಯೆಯಲ್ಲಿ ಪಕ್ಷದ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ಮಧ್ಯಾಹ್ನ ಊಟದ ನಂತರ ಅಧ್ಯಕ್ಷೀಯ ಮಂಡಳಿಯ ಆಯ್ಕೆಯೊಂದಿಗೆ ಪ್ರತಿನಿಧಿಗಳ ಅಧಿವೇಶನ ಆರಂಭವಾಯಿತು. ಜಿಲ್ಲಾ ಕಾರ್ಯದರ್ಶಿಗಳಾದ ಜಿ. ನಾಗರಾಜ ಅವರು ಮೂರು ವರ್ಷಗಳ ಕೆಲಸದ ವರದಿಯುನ್ನು ಮಂಡಿಸಿದರು. ರಾತ್ರಿ ಊಟದ ವರೆಗೆ ತಾಲೂಕುವಾರು ಗುಂಪು ಚರ್ಚೆ ನಡೆಯಿತು. ಮರುದಿನ ಬೆಳಿಗ್ಗೆ 10–30 ರಿಂದ ಆರಂಭವಾದ ಅಧಿವೇಶನದಲ್ಲಿ ಕಾರ್ಯದರ್ಶಿ ವರದಿಯ ಮೇಲೆ ಒಟ್ಟು 15 ಜನ ಸಂಗಾತಿಗಳು ಮಾತನಾಡಿದರು. ಅವರಲ್ಲಿ 3 ಜನ ಮಹಿಳೆಯರು.

ನಡುವೆ

1) ಗಂಗಾವತಿ ನಗರದಲ್ಲಿ ಶಾಂತಿ ಕಾಪಾಡಲು ದುಡಿಯುವ ಜನಗಳಿಗೆ ಕರೆ,
2) ಜಾತಿ ಅಸ್ಪೃಶ್ಯತೆ ವಿರುದ್ಧ
3) ಮೈಕ್ರೊ ಫೈನಾನ್ಸ್ ಕಂಪೆನಿಗಳ ಬಲವಂತದ ಸಾಲ ವಸೂಲಿ ವಿರುದ್ಧ
4) ಉದ್ಯೋಗ ಖಾತ್ರಿ ಸಮರ್ಪಕ ಜಾರಿ
5) ದೇವದಾಸಿ ಮಕ್ಕಳಿಗೆ ಶಿಕ್ಷಣ ಹಾಗೂ ನೌಕರಿ ನೀಡುವುದಕ್ಕೆ ಆದ್ಯತೆ,
6) ಜಿಲ್ಲೆಯ ನೀರಾವರಿ ಬೇಡಿಕೆಗಳಿಗಾಗಿ
7) ಸರ್ಕಾರಿ ಶಾಲೆಗಳ ಸಬಲೀಕರಣಕ್ಕಾಗಿ,
8) ಅಂಗನವಾಡಿ ನೌಕರರಿಗೆ ಕನಿಷ್ಠ ವೇತನ ಜಾರಿ
9) ಹಮಾಲಿ ಕಾರ್ಮಿಕರ ಬೇಡಿಕೆಗಳಿಗಾಗಿ
10) ರೈತ, ಕೂಲಿಕಾರ ಮತ್ತು ದಲಿತರ ಎಲ್ಲಾ ಸಾಲ ಮನ್ನಾ ಮಾಡಲು ಒತ್ತಾಯಿಸಿ
11) ಪಡಿತರ ಕಾರ್ಡುಗಳ ಮತ್ತು ಪಡಿತರ ವಿತರಣೆಯನ್ನು ಕ್ರಮಬದ್ಧಗೊಳಿಸುವ ಕುರಿತು
12) ಅಂಗನವಾಡಿ ನೌಕರರಿಗೆ ಕನಿಷ್ಠ ವೇತನ ಜಾರಿ ಮಾಡುವ ಕುರಿತು.
13) ಅಂಜನಾದ್ರಿ ಬೆಟ್ಟವನ್ನು ಇನ್ನೊಂದು ಬಾಬಾ ಬುಡನ್‌ಗಿರಿ ಮಾಡುವ ಪ್ರಯತ್ನದ ವಿರುದ್ಧ
14) ಭೂಮಿ / ಮನೆ ನಿವೇಶನಕ್ಕಾಗಿ ಒತ್ತಾಯಿಸುವ ನಿರ್ಣಯಗಳನ್ನು ಮಂಡಿಸಿ ಅಂಗೀಕರಿಸಲಾಯಿತು.

ಕರಡು ವರದಿಯ ಮೇಲೆ ಪ್ರತಿನಿಧಿಗಳು ನಡೆಸಿದ ಚರ್ಚೆಗೆ ಜಿಲ್ಲಾ ಸಮಿತಿಯ ಪರವಾಗಿ ಕಾರ್ಯದರ್ಶಿಗಳು ಉತ್ತರ ನೀಡಿದರು. ವರದಿಯನ್ನು ಕೆಲವು ತಿದ್ದುಪಡಿಗಳೊಂದಿಗೆ ಸರ್ವಾನುಮತದಿಂದ ಅಂಗೀಕರಿಸಲಾಯಿತು. ಅನಂತರ ನೂತನ ಜಿಲ್ಲಾ ಸಮಿತಿಯ ಆಯ್ಕೆ ನಡೆಯಿತು. 17 ಜನ ಸದಸ್ಯರೂ ಮತ್ತು ಇಬ್ಬರು ಆಮಂತ್ರಿತರನ್ನು ಒಳಗೊಂಡ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ನೂತನ ಸಮಿತಿಯು ಸಭೆ ಸೇರಿ ಸಂಗಾತಿ ಜಿ. ನಾಗರಾಜ ಅವರನ್ನು ಜಿಲ್ಲಾ ಕಾರ್ಯದರ್ಶಿಯಾಗಿ ಪುನರಾಯ್ಕೆ ಮಾಡಿತು. ಜಿ. ನಾಗರಾಜ, ಸುಂಕಪ್ಪ, ನಿರುಪಾದಿ, ಬಸವರಾಜ ಮರಕುಂಬಿ, ಲಕ್ಷ್ಮಿದೇವಿ ಮತ್ತು ಕಾಸೀಂ ಸಾಬ್ ಸರ್ದಾರ್ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿ ಆಯ್ಕೆಯಾದರು. ರಾಜ್ಯ ಸಮ್ಮೇಳನಕ್ಕೆ 12 ಮಂದಿ ಪ್ರತಿನಿಧಿಗಳನ್ನು ಆಯ್ಕೆ ಮಾಡಲಾಯಿತು. ಅವರಲ್ಲಿ ಮೂವರು ಮಹಿಳೆಯರು.

– ಜಿ. ನಾಗರಾಜ





ಕಾಂ. ಜಿ. ನಾಗರಾಜ

'ತಾಯವ್ವ' ನಾಟಕ

ರಷ್ಯಾದ ದೇಹ–ಭಾರತೀಯ ಆತ್ಮ

ಎಂ ಮಹೇಶ್

"ಬಾಬಾ ಸಾಹೇಬನಿಗೆ, ಮೋಹನ ದಾಸನಿಗೆ ಶಿರಬಾಗಿ ನಮಿಸಿ ಕಲಿಯಬೇಕಿದೆ ನನಗೆ" ಇದು ಚಳುವಳಿಯಲ್ಲಿ ತನ್ನ ಮಗನನ್ನು ಕಳೆದುಕೊಂಡ ಚಲಕೊಪ್ಪದ ದುರ್ಗವ್ವಳ ಮನದಾಳದ ಬಯಕೆ.
ಚಮ್ಮಾರಿಕೆಯನ್ನು ಮಾಡಿ ದುರ್ಗವ್ವ ಮತ್ತು ಅವಳ ಮಗ ಬದುಕನ್ನು ದೂಡುತ್ತಿದ್ದಾರೆ. ಅವರು ತಯಾರಿಸುವ ವಸ್ತುಗಳಿಗೂ ತೆರಿಗೆ ವಿಧಿಸಿದ ಸರ್ಕಾರದ ನಿರ್ಧಾರ ಅವರ ಪಾಲಿಗೆ ಬರಸಿಡಿಲು ಬಡಿದಂತಾಗಿದೆ. ಸರ್ಕಾರದ ನಿರ್ಧಾರವನ್ನು ವಿರೋಧಿಸಿ ದುರ್ಗವ್ವಳ ಮಗ ಚೆಲುವ ಚಳುವಳಿಯನ್ನು ರೂಪಿಸುತ್ತಿದ್ದಾನೆ. ಚಳುವಳಿಯಿಂದ ಮಗನನ್ನು ದೂರವಾಡಲು ಹೋದ ದುರ್ಗವ್ವ ತಾನೇ ಚಳುವಳಿಯ ಒಂದು ಭಾಗವಾಗುತ್ತಾಳೆ. ಅನೇಕ ಕಾರಣಗಳಿಂದಾಗಿ ದುರ್ಗವ್ವ ನಾಟಕದ ಜೀವಜಲ.

ಇದು ಕರಕುಶಲ ವಸ್ತುಗಳಿಗೆ ಜಿ.ಎಸ್.ಟಿ ವಿಧಿಸಿರುವುದನ್ನು ವಿರೋಧಿಸಿ ಸಾಂಸ್ಕೃತಿಕ ಪ್ರತಿಭಟನೆಯ ಭಾಗವಾಗಿ ಪ್ರಸನ್ನ ರಚಿಸಿ, ನಿರ್ದೇಶಿಸಿದ "ತಾಯವ್ವ" ಗೀತ ನಾಟಕದ 'ಕತೆ. ರಷ್ಯಾದ ಪ್ರಮುಖ ಲೇಖಕ ಮ್ಯಾಕ್ಸಿಂ ಗಾರ್ಕಿಯವರ 'ದಿ ಮದರ್' ಕಾದಂಬರಿಯನ್ನು ಪ್ರಸನ್ನ ಅವರೇ 'ಸಮುದಾಯ'ಕ್ಕಾಗಿ ಹಿಂದೊಮ್ಮೆ ನಿರ್ದೇಶಿಸಿದ್ದರು. ನಾಟಕ ಅದ್ಭುತವಾಗಿ ಮೂಡಿಬಂದು ಪ್ರೇಕ್ಷಕರ ಮೆಚ್ಚುಗೆಯನ್ನು ಪಡೆದಿತ್ತು. ಅದೇ ಗೆಲುವಿನ ಕುದುರೆಯನ್ನು ಪ್ರಸನ್ನ ಮತ್ತೊಮ್ಮೆ ಸವಾರಿ ಮಾಡಿದ್ದಾರೆ. ಮೂಲ ಕತೆಯನ್ನು ಹೆಚ್ಚು ಕಡಿಮೆ ಹಾಗೆ ಉಳಿಸಿಕೊಂಡು ಸಂಭಾಷಣೆಯನ್ನು ಸನ್ನಿವೇಶಕ್ಕೆ ತಕ್ಕಂತೆ ಬದಲಾಯಿಸಿ ರಚಿಸಿಕೊಂಡಿದ್ದಾರೆ.

ಉತ್ತರ ಕರ್ನಾಟಕದಲ್ಲಿ ನಡೆಯುತ್ತಿರುವ ರೈತ ಹೋರಾಟದಲ್ಲಿ ಭಾಗಿಯಾಗಲು ಹೊರಟು ನಿಂತ ದುರ್ಗವ್ವಳಿಗೆ ಅವಳ ಸಹಚರರೇ ಕೇಳುವ ಪ್ರಶ್ನೆ ನೀನು ಮುದುಕಿ ಅಲ್ಲಿ ಹೋಗಿ ಏನು ಮಾಡುತ್ತೀಯ?. ಆಗ 'ಮೈದುಂಬಿ, ಮನದುಂಬಿ ಮುನ್ನಡೆವೆ ಮುದುಕಿ ಏಕಾಗಲಿ'ಎಂದು ದಿಟ್ಟವಾಗಿ ಉತ್ತರಿಸುವ ದುರ್ಗವ್ವಳ ಪಾತ್ರದಲ್ಲಿ ಎಂ.ಡಿ.ಪಲ್ಲವಿ, ಬೂರ್ಜ್ವವಾಗಿದ್ದು ನಂತರ ಬದಲಾಗಿ ಚಳುವಳಿಗಾರರಿಗೆ ಸಹಾಯಕವಾಗಿರುವ ಅಮರ್ ಅಕ್ಬರ್ ಆಂಟೋನಿ ಪಾತ್ರದಲ್ಲಿ ಎಂ.ಸಿ ಆನಂದ್, ನಮ್ಮೊಳಗಿನ ಕಾಯಿಲೆಗಳ ಮತ್ತು ವ್ಯಾಪಾರಸ್ಥರ ಪ್ರತಿನಿಧಿಯಾದ ಕ್ಷಯ ಪಾತ್ರದಲ್ಲಿ ಸಿತಾರ, ಎಂ.ಡಿ ಪಲ್ಲವಿ ಅವರ ಸಂಗೀತ ಸಂಯೋಜನೆ ಮತ್ತು ಜನಪ್ರಿಯ ಮಾತುಗಳಿಂದ ಕೂಡಿದ ಸಂಭಾಷಣೆ ನಾಟಕದ ಕೊನೆಯವರೆಗೂ ಪ್ರೇಕ್ಷಕರನ್ನು ಹಿಡಿದಿಡುತ್ತವೆ.



ಪ್ರಸನ್ನ ನಾಟಕದಲ್ಲಿ ಕುಡುಗೋಲು ಮತ್ತು ಸುತ್ತಿಗೆಯನ್ನು ಹೊಂದಿರುವ ಕಮ್ಯೂನಿಷ್ಟರ ಕೆಂಪು ಬಾವುಟ ಹಸಿರಾಗುವ, ಬಾವುಟ ಹಸಿರಾದರೂ ಕುಡುಗೋಲು ಮತ್ತು ಸುತ್ತಿಗೆ ಕೆಂಪಾಗೇ ಇರುವ ಒಂದು ಸಂಕೇತವನ್ನು ಕಟ್ಟಿಕೊಡುತ್ತಾರೆ. ಇದು ಅತ್ಯಂತ ಮಹತ್ವವಾದದ್ದು. ಇದನ್ನು ಎಡಪಂಥೀಯ ಹೋರಾಟಗಾರರು ಗಮನಿಸಬೇಕು.

"ಮಣ ಮಣ ಮಂತ್ರವೂ ಪೂಜೆಯೇ? ಹಣ ಹಂಚುವುದು ದಾಸೋಹವೇ? ಜಗಳಗಂಟಿತನ ಧ್ಯಾನವೇ?" ಎನ್ನುವ ಮುಂತಾದ ಪ್ರಶ್ನೆಗಳನ್ನು ಪ್ರೇಕ್ಷಕರ ಮನದಲ್ಲಿ ಬಿತ್ತುತ್ತಾ ತಾಯವ್ವ ನಾಟಕ ಸಾಗುತ್ತದೆ. ಸಮಾಜದ ಎಲ್ಲಾಆಗುಹೋಗುಗಳಿಗೂ ತನ್ನ ಪ್ರತಿಕ್ರಿಯೆಯನ್ನು ನೀಡುತ್ತಾ ಹೋದ ಪ್ರಸನ್ನ ತನ್ನ ಕೃತಿಯಮೂಲ ಉದ್ದೇಶವನ್ನೇ ಮರೆತಂತೆ ಕಾಣುತ್ತದೆ. ಉತ್ತಮ ಆರಂಭವನ್ನು ಪಡೆಯುವ ನಾಟಕ ದಾರಿ ತಪ್ಪಿದ ಮಗುವಿನಂತೆ ಎಲ್ಲಾ ಕಡೆ ಅಲೆಯುತ್ತದೆ. ಮಗು ಏನೇ ಮಾಡಿದರು ನೋಡಲು ಚೆನ್ನಾಗಿ ಇರುತ್ತದೆ. ಕೊನೆಯಲ್ಲಿಯಾದರೂ ಮಗು ಗೂಡು ಸೇರಬಹುದು ಎನ್ನುತ್ತ ಕಾಯುವವರಿಗೆ ನಿರಾಶೆ ಮೂಡುವುದಂತೂ ಸುಳ್ಳಲ್ಲ. ನಾಟಕ ನೋಡಲು ಹೋದ ಪ್ರೇಕ್ಷಕರಿಗೆ ನಟರ ಅದ್ಭುತ ನಟನೆ ಮತ್ತು ಸಂಗೀತ ಮಾತ್ರ ಸಿಗುತ್ತದೆ. ಕತೆ ನಾಟಕದ ಆಚೆ ಪ್ರಸನ್ನ ಮತ್ತು ನೋಡುಗರ ಮನದಲ್ಲಿ ಸಿಗಬೇಕೆ ಹೊರತು ನಾಟಕದಲ್ಲಿ ಸಿಗುವುದು ಕಷ್ಟ.

ಕರಕುಶಲ ವಸ್ತುಗಳಿಗೆ ಜಿ.ಎಸ್.ಟಿ ವಿಧಿಸಿರುವುದನ್ನು ವಿರೋಧಿಸಿ ಸಾಂಸ್ಕೃತಿಕ ಪ್ರತಿರೋಧವಾಗಿ ಪ್ರದರ್ಶಿಸಿದ ತಾಯವ್ವ ನಾಟಕ ಪ್ರದರ್ಶನದ ದರ (ರೂ. 251 ! – ರೂ. 250ಕ್ಕಿಂತ ಹೆಚ್ಚು ದರಕ್ಕೆ ಜಿ.ಎಸ್.ಟಿ ಇರುತ್ತದೆ. ಅದನ್ನು ನಾವು ಕಟ್ಟುವುದಿಲ್ಲ ಎಂಬ ಪ್ರತಿಭಟನೆಗಾಗಿ) ದುಬಾರಿಯಾಗಿದ್ದು ವಿಪರ್ಯಾಸವೇ ಸರಿ.

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**